08 March 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಳ್ಳೆಯ ಭಾವನೆಯನ್ನು ಮೀಟಿದರೆ ನಮ್ಮ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ! ಅದೇ ಕೆಟ್ಟ ಭಾವನೆಗೆ ಚಾಲನೆ ಕೊಟ್ಟರೆ ವ್ಯಕ್ತಿತ್ವ ಅವನತಿ ಹೊಂದಿತ್ತದೆ!

-ಸ್ನೇಹಾ ಆನಂದ್

info.varthaman@gmail.com

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಶುಭಾಶಯಗಳು



ದೇವಾಲಯದಲ್ಲಿ ಮಾತ್ರ ದೇವರಿಲ್ಲ: ದೇವರು ಸರ್ವತ್ರಯಾಮಿ: ಸಿಎಂ — ಪುಟ ಸಂ. 2




ರಾಮನಗರ: 32 ಪ್ರಕರಣಗಳ ಪೈಕಿ 96 ಮಂದಿ ದಸ್ತಗಿರಿ — ಪುಟ ಸಂ. 3



ಬಜೆಟ್ ಮುಕ್ತ ಚರ್ಚೆಗೆ ಆಹ್ವಾನ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸವಾಲು — ಪುಟ ಸಂ. 4


9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 117 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3



# ಜಗದ ಪ್ರಣತಿ ಮನೆಯ ಜ್ಯೋತಿ

ಮಹಿಳಾ ದಿನಾಚರಣೆ ವಿಶೇಷ



ಅವಿನಾಶ ಸೆರೆಮನಿ



ಕಷ್ಟಗಳ ಬೆಂಕಿಯಲ್ಲಿ ಬೆಂದು ಕಣ್ಣೀರಿನ ನದಿಯಲಿ ಮಿಂದು ಎಂದಿಗೂ ನೋವು ತೋರಿಸೊಕೊಳ್ಳದೆ ಒಳ ಗೊಳಗೆ ನುಂಗಿ ಮನೆತನದ ಪ್ರತಿ ಸದಸ್ಯರ ಕೊಂಕು, ಪ್ರೀತಿ, ಕೋಪ ರೋಷಭರಿತ ಮಾತುಗಳನ್ನು ಸಹಿಸಿ ತಾನು ಉಪವಾಸವಿದ್ದರೂ ಚಿಂತೆಯಿಲ್ಲ ಮನೆಮಂದಿ ಮಕ್ಕಳು ಚೆನ್ನಾಗಿರಲಿ ಎಂದು ಬಯಸುತ ಹಿಂದೆ ಮುಂದೆ ಸಾವಿರಾರು ಜನ ಏನೇ ಅಂದರೂ ಕುಗ್ಗದೆ ಸವಾಲಾಗಿ ಸ್ವೀಕರಿಸಿ ತನ್ನೆಲ್ಲ ಬಯಕೆಗಳನ್ನು ನೋವು ನಲಿವುಗಳನ್ನು ಬದಿಗೊತ್ತಿ ಮಕ್ಕಳ ಖುಷಿಯಲ್ಲೇ ತನ್ನ ಖುಷಿಯ ಕಾಣುತ. ಮಕ್ಕಳ ಬಟ್ಟೆ ಹರಿದರೆ ಹೊಸದನ್ನು ಕೊಡಿಸಿ ತಾನು ಮಾತ್ರಸೀರೆ ಹರಿದರೂ ದಾರದಿಂದ ಹೊಲೆದುಕೊಂಡು ಜೀವನ ಸಾಗಿಸುತ ಮನೆಯಲ್ಲಿ ಎಲ್ಲರಿಗೂ ಬಿಸಿ ಬಿಸಿಯಾದ ಅಡುಗೆ ಮಾಡಿ ತಾನು ಹಿಂದಿನ ದಿನ ಅಥವಾ ಇತರ ಉಳಿದ ಆಹಾರ ಸೇವಿಸುತ ಮನೆಯಲ್ಲಿ ಮನದಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ ಮೌನವಾಗಿಯೇ ಪರಿಹಾರ ಕಂಡುಕೊಳ್ಳುತ ಎಲ್ಲವನ್ನು ತನ್ನವರಿಗಾಗಿ ತ್ಯಾಗ ಮಾಡುವ ಏಕೈಕ ಜೀವವೆಂದರೆ ಹೆಸರಿಡಲಾಗದ ಹೆಸರಿಗೂ ನಿಲುಕದ ಉಸಿರಿಗೂ ಜೀವ ತುಂಬುವ ದೇವರ ಸ್ವರೂಪಿ ಕರುಣಾಮಯಿ ಮಹಿಳೆ.

ಇಂದಿನ ದಿನಗಳಲ್ಲಿ ನಾವೆಲ್ಲ ನಿತ್ಯ ನೋಡುತ್ತಿದ್ದೇವೆ ಮಹಿಳೆಯನ್ನು ಕಾಣುವ ರೀತಿ ಗೌರವಿಸುವ ರೀತಿ ನೋಡಿದರೆ ಬೇಸರವಾಗುತ್ತದೆ. ನೋವಾಗುತ್ತದೆ. ಮಾರ್ಚ್ 8 ಬಂದರೆ ಸಾಕು ಮಹಿಳೆಯರಿಗೋಸ್ಕರ ಕಾರ್ಯಕ್ರಮಗಳೆನೋ ಸನ್ಮಾನಗಳೆನೋ ಹೊಗಳಿಕೆ ಮಾತುಗಳು ಪ್ರಶಂಸನೀಯ ನುಡಿಗಳು ಒಂದಾ ಎರಡಾ ಅಬ್ಬಾ ನಮ್ಮ ಸಮಾಜ ಹೀಗೆ ಮಹಿಳೆಯನ್ನು ಕಾಣುತ್ತೆ ಎಂದು ತುಂಬಾ ಹಿಗ್ಗುತ್ತೇವೆ ಆದರೆ ಇದು ಮಾರನೇಯ ದಿವಸ ಮರೆಯಾಗಿ ಮತ್ತೆ ಮಹಿಳೆಯ ಮೇಲೆ ಹೀಗಾಯ್ತು ಹಾಗಾಯ್ತು ಇದೇನಾ ನಾವು ಮಹಿಳೆಗೆ ನೀಡುವ ಗೌರವ ಇದೇನಾ ನಮ್ಮನ್ನು ಬೆಳೆಸಿ ಜೀವನದಲ್ಲಿ ವಿಭಿನ್ನ ಪಾತ್ರ ನಿರ್ವಹಿಸಿದ ಮಾನಿನಿಗೆ ಪ್ರತಿಫಲವಾಗಿ ನೀಡುವುದು. ಮಹಿಳೆ ಎಂದರೆ ಒಂದು ದಿನಕ್ಕೆ ಮಾತ್ರ ಸೀಮಿತನಾ ಎಂಬುದನ್ನು ಅರಿಯಬೇಕಾಗಿದೆ.

ದಿನ ಬೆಳಗಾದರೆ ಸಾಕು ಪತ್ರಿಕೆಯಲ್ಲಿ ಮಹಿಳೆಯ ಮೇಲೆ ಅತ್ಯಾಚಾರದಂತ ಘೋರ ಪುಟ 4ಕ್ಕೆ

# 'ಹೈಕಮಾಂಡ್' ಸೂಚಿಸಿದರೆ ಅಧಿಕಾರ ತ್ಯಾಗ: ಸಿಎಂ

## ಮುಖ್ಯಮಂತ್ರಿ ಕುರ್ಚಿಯಲ್ಲಿ ಇರು ಎಂದರೆ ಇರುವೆ: ಸಿಎಂ ಸಿದ್ದರಾಮಯ್ಯ

**ಮೈಸೂರು:** ಮುಖ್ಯಮಂತ್ರಿ ಸ್ಥಾನದಲ್ಲಿ ಕಾಂಗ್ರೆಸ್ ಹೈಕಮಾಂಡ್ ಇರು ಎಂದರೆ ಇರುತ್ತೇನೆ. ಇಲ್ಲವೇ ಬಿಡು ಎಂದರೆ ಬಿಡುತ್ತೇನೆ. ಎಲ್ಲವೂ ನಮ್ಮ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.


ತಾಲ್ಲೂಕಿನ ಪಿಲ್ಲಹಳ್ಳಿ ಗ್ರಾಮದ ಹೆಲಿ ಪ್ಯಾಡ್‌ನಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾರೋ ಏನೋ ಹೇಳುತ್ತಾರೆ ಎಂಬುದು ನನಗೆ ಮುಖ್ಯ ಅಲ್ಲ. ನನಗೆ ನಮ್ಮ ಹೈಕಮಾಂಡ್ ತೀರ್ಮಾನವಷ್ಟೇ ಮುಖ್ಯ. ಹೈಕಮಾಂಡ್ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸ ಇದೆ ಎಂದು ಹೇಳಿದರು.

ಮೈಸೂರಿನ ಜನರಷ್ಟೇ ಅಲ್ಲ, ಇಡೀ ನಾಡಿನ ಜನರು ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂದು ಬಯಸಿದ್ದಾರೆ. ಆದರೆ, ಅಂತಿಮ ತೀರ್ಮಾನ ಮಾಡುವುದು ಹೈಕಮಾಂಡ್. ಹೈಕಮಾಂಡ್ ಅವಕಾಶ ಕೊಟ್ಟರೆ ಮತ್ತೆರೆಡು ಬಜೆಟ್ ಮಂಡಿಸುತ್ತೇನೆ. ಈ ವಿಷಯದಲ್ಲಿ ಹೈ ಕಮಾಂಡ್ ತೀರ್ಮಾನಕ್ಕೆ ಬದ್ಧ ಎಂದು ತಿಳಿಸಿದರು. ನನಗೆ ಬಜೆಟ್‌ನ ದಾಖಲೆಗಳ ಮೇಲೆ ನಂಬಿಕೆ ಇಲ್ಲ. ಅವಕಾಶ ಸಿಕ್ಕರೆ ಇನ್ನೆರಡು ಬಜೆಟ್ ಮಂಡಿಸು ತ್ತೇನೆ. ಎಲ್ಲವನ್ನೂ ತೀರ್ಮಾನ ಮಾಡುವುದು ಹೈಕಮಾಂಡ್. ಅವರೇ ತೀರ್ಮಾನವನ್ನು ಕೈಗೊಳ್ಳಬೇಕು ಎಂದು ಹೇಳಿದರು. ರಾಜ್ಯ ರಾಜಕೀಯದಲ್ಲಿ ಮುಖ್ಯ ಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿರುವ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಗ್ಯಾರಂಟಿಗಾಗಿ ಅತಿ ಹೆಚ್ಚು ಸಾಲ ಮಾಡಲಾಗಿದೆ ಎಂಬ ವಿಪಕ್ಷಗಳ ಟೀಕೆಗೆ ಪ್ರತಿಕ್ರಿಯೆ ನೀಡಿದ ಅವರು, ಅಭಿವೃದ್ಧಿಗಾಗಿ ಸಾಲ ಮಾಡಬೇಕಾಗುತ್ತದೆ. ಹೀಗಾಗಿ ಸಾಲ ಮಾಡಿದ್ದೇನೆ. ಆದರೆ ಆರ್ಥಿಕ ಶಿಸ್ತಿನ ಇತಿಮಿತಿಯಲ್ಲೇ ಸಾಲ ಮಾಡಿದ್ದೇವೆ. ಈ ಸಾಲದಿಂದ ರಾಜ್ಯದ ಜನರಿಗೆ ಹೊರೆಯಾಗಿಲ್ಲ. ಅನಗತ್ಯವಾಗಿ ಅಥವಾ ಹೆಚ್ಚಾಗಿ ಸಾಲ ಮಾಡಿದ್ದಾರೆ ಎಂಬ ಪುಟ 2ಕ್ಕೆ



### ಬಜೆಟ್ ಮಂಡನೆ ಬೆನ್ನಲ್ಲೇ ಇಂದು ಡಿಕೆಶಿ ದೆಹಲಿಯಾತ್ರೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡನೆ ಮಾಡಿದ ಬೆನ್ನಲ್ಲೇ ಡಿಸಿಎಂ ಡಿ.ಕೆ ಶಿವಕುಮಾರ್ ಭಾನುವಾರ ದೆಹಲಿ ಯಾತ್ರೆ ಕೈಗೊಂಡಿದ್ದಾರೆ. ನಾಳೆ ಡಿ.ಕೆ ಶಿವಕುಮಾರ್, ಪ್ರಿಯಾಂಕ್ ಖರ್ಗೆ ಪ್ರತಿನಿಧಿಸುವ ಕಲಬುರಗಿಯ ಚಿತ್ತಾಪುರ ದಲ್ಲಿ ವಿವಿಧ ಅಭಿ ವೃದ್ಧಿ ಕಾಮಗಾರಿಗಳ ಉದ್ಘಾಟನೆ ಮಾಡಲಿದ್ದಾರೆ. ಉದ್ಘಾಟನೆ ನಂತರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆಗೆ ಪುಟ 2ಕ್ಕೆ



# ಗ್ಯಾಸ್ ಬೆಲೆ ಏರಿಕೆ ಶಾಕ್

*** ಗೃಹಬಳಕೆ ಸಿಲಿಂಡರ್ 60 ರೂ., ವಾಣಿಜ್ಯ 115 ರೂ. ಹೆಚ್ಚಳ**

**ನವದೆಹಲಿ:** ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಶನಿವಾರ ಕೇಂದ್ರ ಸರ್ಕಾರ ದಿಢೀರ್ ಎಂದು ಹೆಚ್ಚಿಸಿದೆ. 14.2 ಕೆಜಿ ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆ ದೇಶಾದ್ಯಂತ 60 ರೂಪಾಯಿ ಹೆಚ್ಚಳವಾಗಿದೆ. ಈ ಮೂಲಕ ದೇಶದ ಮಹಿಳೆಯರಿಗೆ ಕೇಂದ್ರ ಶಾಕ್ ನೀಡಿದೆ.

19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯೂ 115 ರೂಪಾಯಿ ಹೆಚ್ಚಿಸಲಾಗಿದೆ, ಇದರಿಂದ ಹೋಟೆಲ್, ರೆಸ್ಟೋರೆಂಟ್‌ಗಳು ಮತ್ತು ಸಣ್ಣ ವಾಣಿಜ್ಯ ಸಂಸ್ಥೆಗಳ ಮೇಲೆ ಪರಿಣಾಮ ಬೀಳಲಿದೆ.

ಬೆಂಗಳೂರು ನಗರದಲ್ಲಿ ಸಬ್ಸಿಡಿ ಇಲ್ಲದ ಎಲ್‌ಪಿಜಿ ಸಿಲಿಂಡರ್ ಬೆಲೆ 14.2 ಕೆಜಿ ಸಿಲಿಂಡರ್‌ಗೆ 855.50 ರೂಪಾಯಿ ಆಗಿದೆ. ವಾಣಿಜ್ಯ ಬಳಕೆ ಇಂಧನ 19 ಕೆಜಿ ದರ 1,814 ರೂಪಾಯಿ ಆಗಿದೆ. ದೆಹಲಿಯಲ್ಲಿ 14.2 ಕೆಜಿ ಗೃಹ ಎಲ್‌ಪಿಜಿ ಸಿಲಿಂಡರ್ ಬೆಲೆ 853 ರೂಪಾಯಿಗಳಿಂದ 913 ರೂಪಾಯಿಗೆ ಏರಿಕೆಯಾಗಿದೆ. ಮುಂಬೈಯಲ್ಲಿ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ ಹೊಸ ಬೆಲೆ 852.50ರಿಂದ 912.50 ರೂಪಾಯಿಗೆ ಹೆಚ್ಚಾಗಿದೆ. ಕೊಲ್ಕತ್ತಾದಲ್ಲಿ 879ರಿಂದ 930 ರೂಪಾಯಿಗೆ, ಚೆನ್ನೈನಲ್ಲಿ 868.50 ಪುಟ 2ಕ್ಕೆ



# ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆಗೆ ಮೋದಿ ವಿರುದ್ಧ ಸಿದ್ದು ವಾಗ್ದಾಳಿ

**ಬೆಂಗಳೂರು:** ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆಯನ್ನು 60 ರೂ. ಹೆಚ್ಚಳ ಮಾಡಿರುವುದಕ್ಕೆ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ದೇಶದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಮೋದಿ ಅವರ ರಾಜತಾಂತ್ರಿಕ ವೈಫಲ್ಯಕ್ಕೆ ಕೋಟ್ಯಂತರ ಭಾರತೀಯರು ಯಾಕೆ ಬೆಲೆ ತೆರಬೇಕು ಎನ್ನುವುದನ್ನು ತಿಳಿಸಲಿ. ಜಾಗತಿಕ ಮಟ್ಟದಲ್ಲಿ ದೇಶದ ಮಾನ ಕಳೆಯುತ್ತಿರುವ ಮೋದಿ ಅವರು ಬಹಿರಂಗವಾಗಿ



# ಮಾರಮ್ಮನ ತಂಬಿಟ್ಟು ತಿನ್ನುವುದೇ ಮಜಾ

## ತಮ್ಮ ಬಾಲ್ಯದ ನೆನಪು ಬಿಚ್ಚಿಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ

**ಮೈಸೂರು:** ನಮ್ಮ ಊರಿನಲ್ಲೂ ದಂಡಿನ ಮಾರಮ್ಮನ ದೇವಸ್ಥಾನ ಇದೆ. ನಾವು ಚಿಕ್ಕವರಿದ್ದಾಗ ದೇವಸ್ಥಾನಕ್ಕೆ ತಂಬಿಟ್ಟಿನ ಆರತಿ ತೆಗೆದುಕೊಂಡು ಹೋಗುತ್ತಿದ್ದೆವು. ಆಗ ತಂಬಿಟ್ಟು ತಿನ್ನುವುದೇ ಮಜಾ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಲ್ಯದ ದಿನಗಳ ನೆನಪಿಗೆ ಜಾರಿದರು.

ತಾಲ್ಲೂಕಿನ ವರುಣ ಹೋಬಳಿಯ ಪಿಲ್ಲಹಳ್ಳಿ ಗ್ರಾಮದಲ್ಲಿ ದಂಡಿನಮಾರಮ್ಮ ದೇವಸ್ಥಾನವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, ನಮಗೆ ಹಳ್ಳಿಗಾಡಿನಲ್ಲಿ ಆಗ ಸಿಗುತ್ತಿದ್ದ ಸಿಹಿ ತಿನಿಸುಗಳೆಂದರೆ ತಂಬಿಟ್ಟು ಹಾಗೂ ಕೊಬ್ಬರಿ ಮಿಠಾಯಿ ಮಾತ್ರ ಎಂದು ಹೇಳಿದರು.

ನಾನು ಚಿಕ್ಕವನಿದ್ದಾಗಿನಿಂದಲೂ ದಂಡಿನಮಾರಮ್ಮ ದೇವಸ್ಥಾನಕ್ಕೆ ಹೋಗುತ್ತಿದ್ದೆ. ದೇವರು ದೇವಸ್ಥಾನದಲ್ಲಿ ಮಾತ್ರ ಇಲ್ಲ. ಎಲ್ಲ ಕಡೆಯೂ ಇದ್ದಾನೆ. ದೇವನೊಬ್ಬ ನಾಮ ಹಲವು. ಕಷ್ಟ ಬಂದಾಗ ಮಾತ್ರ ದೇವರನ್ನು ನೆನೆಯುವ ಬದಲಿಗೆ ಯಾವಾಗಲೂ ದೇವರನ್ನು ನೆನೆಯಬೇಕು. ದೇವರು ಎಲ್ಲ ಕಡೆಯೂ ಇದ್ದಾನೆ. ನಮ್ಮಲ್ಲೂ ಇದ್ದಾನೆ ಎಂದು ಅವರು ಅಭಿಪ್ರಾಯಪಟ್ಟರು.

ಮೂರ್ತಿ ಪೂಜೆಯಿಂದ ಮಾತ್ರವೇ ದೇವರು ಒಲಿಯುವುದಿಲ್ಲ. ಎಲ್ಲರಿಗೂ ಒಳ್ಳೆಯದನ್ನೇ ಬಯಸಬೇಕು. ಯಾರಿಗೂ ಕೇಡು ಬಯಸಬಾರದು. ಯಾವ ದೇವರೂ, ಧರ್ಮವೂ ದ್ವೇಷ ಮಾಡಿ ಎಂದು ಹೇಳಿಲ್ಲ. ಪ್ರೀತಿಸಿ ಎಂದೇ ಹೇಳುತ್ತದೆ. ಅದನ್ನು ಎಲ್ಲರೂ ಪಾಲಿಸಬೇಕು. ಎಲ್ಲರನ್ನೂ ಪುಟ 2ಕ್ಕೆ



### ಮರಕ್ಕೆ ಲಾರಿ ಡಿಕ್ಕಿ: ಇಬ್ಬರು ಸಾವು

**ತುಮಕೂರು:** ತಾಲ್ಲೂಕಿನ ನಾಗವಲ್ಲಿ ಸಮೀಪದ ರಂಗಾಪುರ ಬಳಿಯ ಸೋಪನಹಳ್ಳಿ ಗೇಟ್‌ನಲ್ಲಿ ಶನಿವಾರ ಅರಳೀ ಮರಕ್ಕೆ ಲಾರಿ ಡಿಕ್ಕಿಯಾಗಿ ಇಬ್ಬರು ಮೃತಪಟ್ಟಿದ್ದಾರೆ. ಕೇರಳದ ರಷೀದ್ ಅಲಿ (25), ಅಮೀನ್ (23) ಮೃತಪಟ್ಟವರು.

ಆಂಧ್ರಪ್ರದೇಶದಿಂದ ಕೇರಳಕ್ಕೆ ಲಾರಿಯಲ್ಲಿ ಕಡಪ ಕಲ್ಲು ಸಾಗಿಸುತ್ತಿದ್ದರು. ಚಾಲಕನ ನಿಯಂತ್ರಣದ ತಪ್ಪಿದ ಲಾರಿ ಮರಕ್ಕೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ನಂತರ ಕುಣಿಗಲ್ – ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿತ್ತು. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಹೆಬ್ಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ನಿರುದ್ಯೋಗಿಗಳಿಗೆ 1,500 ರೂ. ಭತ್ಯೆ

**ಕೋಲ್ಕತ್ತಾ:** ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನಿರುದ್ಯೋಗಿಗಳಿಗೆ ಶನಿವಾರ ಭರ್ಜರಿ ಗಿಫ್ಟ್ ಘೋಷಿಸಿದ್ದಾರೆ. 10ನೇ ತರಗತಿ ಉತ್ತೀರ್ಣರಾದ ನಿರುದ್ಯೋಗಿ ಯುವ ಉದ್ಯೋಗಾಕಾಂಕ್ಷಿಗಳಿಗೆ ಪ್ರತಿ ತಿಂಗಳು 1,500 ರೂ. ಭತ್ಯೆ ನೀಡಲಾಗುವುದು. ಮಾರ್ಚ್ 7ರಿಂದ ಅಂದರೆ ಇಂದಿನಿಂದಲೇ ನಿರುದ್ಯೋಗಿಗಳು ತಿಂಗಳಿಗೆ 1,500 ರೂ. ಪಡೆಯಲಿದ್ದಾರೆ ಎಂದು ದೀದಿ ಹೇಳಿದರು.

# ಬದನವಾಳು ಖಾದಿ ಕೇಂದ್ರದಲ್ಲಿ ಪರಿಸರ ನಾಶ ಸಲ್ಲದು: ಪ್ರಸನ್ನ

**ಮೈಸೂರು:** ಬದನವಾಳು ಖಾದಿ ಕೇಂದ್ರದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ದಶಕಗಳ ಹಿಂದೆ ನೆಟ್ಟು ಬೆಳೆಸಿದ ಮರಗಳನ್ನು ಕಡಿದುರುಳಿಸಿರುವುದು ಸರಿಯಲ್ಲ ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿದ ಅವರು, ಇಲ್ಲಿ ಅನಗತ್ಯ ಕಟ್ಟಡ ನಿರ್ಮಾಣ, ವಿಪರೀತ ಯಂತ್ರಗಳ ಮೂಲಕ ಗುತ್ತಿಗೆದಾರರು ಭ್ರಷ್ಟ ಅಧಿಕಾರಿಗಳ ಜೇಬು ತುಂಬುವ ಕೆಲಸ ನಡೆದಿದೆ. ಸರ್ಕಾರದ ನೀತಿಯಿಂದ ಇಲ್ಲಿನ ಕೈಮಗ್ಗ ಕ್ಷೇತ್ರ ಬಳಲುತ್ತಿದೆ. ಪವರ್ ಲೂಮ್ ಖಾದಿ, ಸಿಂಥೆಟಿಕ್ ಖಾದಿ, ಪವರ್ ಲೂಮ್ ಸೀರೆ, ಪಂಚೆಗಳೆಂಬ ಕಳ್ಳ ಮಾಲಿನ ಉತ್ಪಾದನೆಗೆ ಜವಳಿ ಇಲಾಖೆ ಪ್ರಚೋದಿಸುತ್ತಿದೆ ಎಂದು ದೂರಿದರು.

ರಾಜ್ಯ ಖಾದಿ ಬೋರ್ಡ್ ಆಮಂತ್ರಣದ ಮೇರೆಗೆ ರಾಜ್ಯದ ವಿವಿಧೆಡೆಗಳಿಂದ ಸ್ವಯಂ ಸೇವಕರು ಬದನವಾಳಿಗೆ ತೆರಳಿ ಕಳೆದೆರೆಡು ತಿಂಗಳಿನಿಂದ ಗ್ರಾಮಸ್ಥರ ಜೊತೆ ಕೈಜೋಡಿಸಿ ಖಾದಿ ಕೇಂದ್ರದ ಪುನಶ್ಚೇತನ ಕಾರ್ಯ ಹಾಗೂ ಗಾಂಧಿ ಗ್ರಾಮದ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ದುರಂತದ ಸಂಗತಿಯೆಂಬಂತೆ ಅಧಿಕಾರಿಗಳ ಅವಸರದ ಪ್ರಗತಿಯ ಧಾವಂತ ಇದಕ್ಕೆ ಅಡ್ಡಿಯಾಗಿದೆ ಪುಟ 2ಕ್ಕೆ




# ಗುಲಾಮಗಿರಿ ವ್ಯವಸ್ಥೆಗೆ ರಾಷ್ಟ್ರದ ಘನತೆ

*** ರಷ್ಯಾದ ತೈಲ ಖರೀದಿಗೆ ಅಮೆರಿಕಾ ಒಪ್ಪಿಗೆ: ಬಿ.ಕೆ.ಹರಿಪ್ರಸಾದ್ ವಾಗ್ದಾಳಿ**

**ಬೆಂಗಳೂರು:** ಭಾರತ ರಷ್ಯಾದಿಂದ ತೈಲ ಖರೀದಿಸಲು ಅಮೆರಿಕದ ಒಪ್ಪಿಗೆ ಪಡೆಯುವುದು, 30 ದಿನಗಳ ವಿನಾಯಿತಿ ನೀಡುವುದು ಸಾರ್ವಭೌಮ ರಾಷ್ಟ್ರದ ಘನತೆಯನ್ನು ಗುಲಾಮಗಿರಿ ವ್ಯವಸ್ಥೆಗೆ ತಳ್ಳಿರುವ ನಿದರ್ಶನಕ್ಕೆ ಸಾಕ್ಷಿ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ.ಹರಿಪ್ರಸಾದ್ ಟೀಕಿಸಿದರು.



ಸಾರ್ವಭೌಮ ರಾಷ್ಟ್ರ ತನ್ನ ಇಂಧನ ಅವಶ್ಯಕತೆಗಳನ್ನು ಯಾವ ದೇಶದಿಂದ ಪೂರೈಸಿಕೊಳ್ಳಬೇಕು ಎಂಬ ನಿರ್ಧಾರವನ್ನು ಇನ್ನೊಂದು ರಾಷ್ಟ್ರದಿಂದ 'ವಿನಾಯಿತಿ' ಪಡೆಯಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದರೆ, ಅದು ಕೇವಲ ರಾಜತಾಂತ್ರಿಕ ವೈಫಲ್ಯವಲ್ಲ. ಅದು ರಾಷ್ಟ್ರದ ಆತ್ಮಗೌರವವನ್ನೇ ತೊತ್ತುಮಾಡಿದ ಆಡಳಿತದ ನಗ್ನಸತ್ಯ ಎಂದು ಕಿಡಿಕಾರಿದ್ದಾರೆ.

ಕೇಂದ್ರ ಸರ್ಕಾರ ಇಂದು ಅಮೆರಿಕದ ರಾಜಕೀಯ ತಾಳಕ್ಕೆ ತಕ್ಕಂತೆ ಕುಣಿಯುವ ಪುಟ 2ಕ್ಕೆ

### ಅಮೆರಿಕಾ ವಿನಾಯಿತಿ: ಭಾರತ ತಿರುಗೇಟು

**ನವದೆಹಲಿ: ರಷ್ಯಾದಿಂದ ತೈಲ ಖರೀದಿಸಲು ಭಾರತಕ್ಕೆ ಅಮೆರಿಕ 30 ದಿನಗಳ ವಿನಾಯಿತಿ ನೀಡಿದೆ ಎಂಬ ವಿಚಾರಕ್ಕೆ ಭಾರತ ಖಡಕ್ ಪ್ರತಿಕ್ರಿಯೆ ನೀಡಿದೆ. ಅನುಮತಿ ಮೇಲೆ ನಾವು ಎಂದಿಗೂ ಅವಲಂಬಿತರಾಗಿಲ್ಲ ಎಂದು ಭಾರತ ತಿರುಗೇಟು ನೀಡಿದೆ. ಇರಾನ್–ಯುಎಸ್–ಇಸ್ರೇಲ್ ಯುದ್ಧದಿಂದಾಗಿ ಹಾರ್ಮುಜ್ ಜಲಸಂಧಿ ಮಾರ್ಗದಲ್ಲಿ ಉದ್ವಿಗ್ನತೆ ಉಂಟಾಗಿರುವುದರಿಂದ, ಭಾರತವು ಕಡಿಮೆ ಬೆಲೆಗೆ ನೀಡುವ ಯಾವುದೇ ಮೂಲದಿಂದ ಕಚ್ಚಾ ತೈಲವನ್ನು ಖರೀದಿಸುವುದನ್ನು ಮುಂದುವರಿಸುತ್ತೇವೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.**

# ದೇಶದಲ್ಲಿ ಇಂಧನ ಕೊರತೆ ಆಗಿಲ್ಲ

## ಲಭ್ಯತೆ ಕುರಿತು ಚಿಂತೆ ಬೇಡ: ಸಚಿವ ಹರ್ದೀಪ್ ಸಿಂಗ್ ಪುರಿ ಅಭಯ

**ನವದೆಹಲಿ:** ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ದೇಶದಲ್ಲಿ ಇಂಧನ ಸರಬರಾಜು ಮತ್ತು ಲಭ್ಯತೆ ಕುರಿತು ನಡೆಯುತ್ತಿರುವ ಚರ್ಚೆಗಳ ನಡುವೆಯೇ ಆತಂಕಕ್ಕೆ ಕಾರಣವಾಗಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ದೇಶದಲ್ಲಿ ಇಂಧನ ಕೊರತೆ ಇಲ್ಲ. ಸರಬರಾಜಿನ ಬಗ್ಗೆ ಗ್ರಾಹಕರು ಚಿಂತಿಸಬೇಕಾಗಿಲ್ಲ ಎಂದು ಭರವಸೆ ನೀಡಿದ್ದಾರೆ.



ನಮ್ಮ ನಾಗರಿಕರಿಗೆ ಕೈಗೆಟುಕುವ ಮತ್ತು ದೀರ್ಘಕಾಲಿಕ ಇಂಧನ ಲಭ್ಯವಾಗುವಂತೆ ಮಾಡುವುದು ನಮ್ಮ ಆದ್ಯತೆ. ಭಾರತದಲ್ಲಿ ಇಂಧನದ ಯಾವುದೇ ಕೊರತೆ ಇಲ್ಲ, ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಪೋಸ್ಟ್ ಮಾಡಿದ್ದಾರೆ.

ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕೊರತೆ ಇದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವರದಿಗಳನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್ ತಳ್ಳಿಹಾಕಿದೆ. ಅವು ನಿರಾಧಾರವೆಂದು ಹೇಳಿದೆ.



ಭಾರತದಲ್ಲಿ ಸಾಕಷ್ಟು ಇಂಧನ ಸಂಗ್ರಹವಿದೆ. ಸರಬರಾಜು ಹಾಗೂ ವಿತರಣಾ ವ್ಯವಸ್ಥೆಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ. ದೇಶದಾದ್ಯಂತ ನಿರಂತರ ಇಂಧನ ಸರಬರಾಜನ್ನು ಕಾಪಾಡಿಕೊಳ್ಳಲು ಪುಟ 2ಕ್ಕೆ

### ರಷ್ಯಾದಿಂದ ಕಚ್ಚಾತೈಲ ಆಮದು

ಭಾರತ ರಷ್ಯಾದಿಂದ 2022ರಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. 2022ರಲ್ಲಿ ಭಾರತದ ಒಟ್ಟು ಕಚ್ಚಾ ತೈಲ ಆಮದುಗಳಲ್ಲಿ ರಷ್ಯಾದ ಪಾಲು ಕೇವಲ 0.2 ಶೇಕಡಾ ಮಾತ್ರವಾಗಿದ್ದರೆ, ನಂತರದ ವರ್ಷಗಳಲ್ಲಿ ಅದು ಗಣನೀಯವಾಗಿ ಹೆಚ್ಚಾಗಿದೆ. ಫೆಬ್ರವರಿಯಲ್ಲಿ, ಭಾರತ ತನ್ನ ಒಟ್ಟು ಕಚ್ಚಾ ತೈಲ ಆಮದುಗಳಲ್ಲಿ ಸುಮಾರು ಶೇ.20ರಷ್ಟನ್ನು ರಷ್ಯಾದಿಂದ ಆಮದು ಮಾಡಿದೆ. ಅದು ದಿನಕ್ಕೆ ಸುಮಾರು 10.4 ಲಕ್ಷ ಬ್ಯಾರೆಲ್‌ಗಳಷ್ಟಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಎಲ್‌ಪಿಜಿ ಕ್ಷೇತ್ರದಲ್ಲಿಯೂ, ದೇಶಾದ್ಯಂತ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಎಲ್‌ಪಿಜಿ ರಿಫೈನರಿಗಳಿಗೆ ಉತ್ಪಾದನೆ ಹೆಚ್ಚಿಸಲು ಪುಟ 2ಕ್ಕೆ

# ಮೊದಲ ಪುಟದಿಂದ

## ಗ್ಯಾಸ್ ಬೆಲೆ ಏರಿಕೆ ಶಾಕ್

ರೂ.ಗಳಿಂದ 928.50 ರೂಪಾಯಿಗೆ ಏರಿಕೆಯಾಗಿದೆ. ಪರಿಷ್ಕೃತ ದರ ಇಂದಿನಿಂದಲೇ ಜಾರಿಗೆ ಬಂದಿದೆ. ಈ ಹೆಚ್ಚಳವು ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳಿಗೂ ಅನ್ವಯಿಸುತ್ತದೆ. ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್ ಬೆಲೆ1768.50ರಿಂದ 1,883 ರೂಪಾಯಿಗೆ ಏರಿಕೆಯಾಗಿದೆ. ಮುಂಬೈಯಲ್ಲಿ ಇದು 1720.50ರಿಂದ 1835 ರೂಪಾಯಿಗೆ ಹೆಚ್ಚಾಗಿದೆ. ಕೊಲ್ಕತ್ತಾದಲ್ಲಿ 1875.50ರಿಂದ 1990ಕ್ಕೆ, ಚೆನ್ನೈಯಲ್ಲಿ 1929ರಿಂದ 2043.50ಕ್ಕೆ ಏರಿಕೆಯಾಗಿದೆ. ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಏಪ್ರಿಲ್ 2025ರಿಂದ ಯಾವುದೇ ಬದಲಾವಣೆ ಆಗಿರಲಿಲ್ಲ.

## ಇಂದು ಡಿಕೆಶಿ ದೆಹಲಿಯಾತ್ರೆ

ಕಲಬುರಗಿಯಿಂದ ದೆಹಲಿಗೆ ಪ್ರಯಾಣಿಸಲಿದ್ದಾರೆ. ನೀರಾವರಿ ಇಲಾಖೆ ಕೆಲವು ಕೆಲಸದ ಹಿನ್ನೆಲೆಯಲ್ಲಿ ದೆಹಲಿಗೆ ಹೋಗುತ್ತಿದ್ದಾರೆ ಎನ್ನಲಾಗುತ್ತಿದೆ. ಆದರೂ ಬಜೆಟ್ ಮಂಡನೆ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷರ ಜೊತೆ ಡಿಕೆಶಿ ದೆಹಲಿಗೆ ಹೋಗುತ್ತಿರುವುದು ಸಾಕಷ್ಟು ಕುತೂಹಲ ಮೂಡಿಸಿದೆ. ಮುಖ್ಯಮಂತ್ರಿ ಕುರ್ಚಿ ಪಡೆಯಲು ಮುಂದಾಗಿರುವ ಡಿಕೆಶಿ ನಡೆ ರಾಜಕೀಯ ವಲಯದಲ್ಲಿ ಕುತೂಹಲಕ್ಕೆ ಕಾರಣವಾಗಿದೆ.

## ಹೈಬಿಡು ಎಂದರೆ ಬಿಡುವೆ!

ಆರೋಪಗಳೆಲ್ಲವೂ ಸುಳ್ಳು. ಮಿತಿಯೊಳಗೇ ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಕೇಂದ್ರ ಸರ್ಕಾರವು ರಾಜ್ಯಕ್ಕೆ ಮಾಡಿದ್ದ ಅನ್ಯಾಯದಿಂದ ರಾಜ್ಯದ ಜನರಿಗೆ ಹೊರೆಯಾಗಿದೆ. ಇದನ್ನು ಮಾಧ್ಯಮದವರು ಹೇಳುವುದೇ ಇಲ್ಲ. ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಸಾಲ ಮಾಡಿದ್ದಾರೆ ಎಂಬುದು ರಾಜ್ಯದ ಬಿಜೆಪಿ ನಾಯಕರಿಗೆ ಗೊತ್ತಾ? ಅವರೂ ಸಾಕಷ್ಟು ಸಾಲ ಮಾಡಿದ್ದಾರೆ. ಬಿಜೆಪಿಯವರು ಆರ್ಥಿಕ ಶಿಸ್ತಿನ ಬಗ್ಗೆ ಕಾಯ್ದೆ-ಕಾನೂನುಗಳನ್ನು ಓದಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಬಿಜೆಪಿಗೆ ತಿರುಗೇಟು ನೀಡಿದರು.

ನಾನು ಯಾವುದೇ ಒಂದು ವರ್ಗದ ಪರವಾಗಿ ಬಜೆಟ್ ಮಂಡಿಸಿಲ್ಲ. ಇದು ಎಲ್ಲಾ ವರ್ಗದವರ ಬಜೆಟ್. ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದೆ ಎಂದು ತಿಳಿಸಿದರು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ನಗರ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಿವಣ್ಣ ಇದ್ದರು.

## ವ್ಯವಸ್ಥೆಗೆ ರಾಷ್ಟ್ರದ ಘನತೆ

ಸ್ಥಿತಿಗೆ ಕುಸಿದಿರುವುದು ಆತಂಕಕಾರಿ ಬೆಳವಣಿಗೆ. ಇದು ನರೇಂದ್ರ ಮೋದಿ ಸರ್ಕಾರದ ವಿದೇಶಾಂಗ ದೌರ್ಬಲ್ಯ ಮತ್ತು ಆತ್ಮಗೌರವ ಕುಸಿದಿರುವುದಕ್ಕೆ ಜೀವಂತ ಸಾಕ್ಷಿಯಾಗಿದೆ. ಇದು ಮೋದಿ ಸರ್ಕಾರದ ದುರ್ಬಲತೆ ಮತ್ತು ಆತ್ಮಗೌರವಹೀನತೆಯ ಪರಾಕಾಷ್ಠೆ. ಇದು ಕೇವಲ ರಾಜಕೀಯ ಅಪಮಾನವಲ್ಲ, ಭಾರತದ ಸ್ವಾಭಿಮಾನವನ್ನು ಅಂತರರಾಷ್ಟ್ರೀಯ ವೇದಿಕೆಯಲ್ಲಿ ಹರಾಜು ಹಾಕಿದಂತಾಗಿದೆ ಎಂದಿದ್ದಾರೆ.

ದೇಶದ ಗೌರವವನ್ನು ಉಳಿಸುವ ಹೊಣೆಗಾರಿಕೆ ಪ್ರಧಾನಮಂತ್ರಿ ಅವರಿಗೆ ಸೇರಿದೆ. ಆದರೆ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಭಾರತವು ಅಮೇರಿಕಾದ 'ವಿನಾಯಿತಿ'ಗಾಗಿ ಕಾಯುವ ರಾಷ್ಟ್ರದಂತೆ ಕಾಣಿಸಿಕೊಳ್ಳುತ್ತಿರುವುದು ನಾಚಿಕೆಗೇಡಿತನದ ಸಂಗತಿ. ಕೇವಲ ವಿಶ್ವಗುರು ಎಂಬ ಘೋಷಣೆಯಿಂದ ದೇಶದ ಗೌರವ ಉಳಿಯುವುದಿಲ್ಲ. ಆತ್ಮಗೌರವದಿಂದ, ಸ್ವತಂತ್ರ ರಾಜತಾಂತ್ರಿಕ ಧೈರ್ಯದಿಂದ ಮಾತ್ರ ರಾಷ್ಟ್ರದ ಮಾನ ಉಳಿಯುತ್ತದೆ. ಆ ಧೈರ್ಯವೇ ನರೇಂದ್ರ ಮೋದಿ ಆಡಳಿತದಲ್ಲಿ ಕಾಣೆಯಾಗಿದೆ ಎಂದು ವಾಗ್ದಾಳಿ ನಡೆಸಿದರು.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ತೈಲ ಪೂರೈಕೆಯನ್ನು ಸುಗಮಗೊಳಿಸುವ ಉದ್ದೇಶದಿಂದ, ಈಗಾಗಲೇ ಸಮುದ್ರ ಮಾರ್ಗದಲ್ಲಿ ಸಾಗಣೆ ಹಂತದಲ್ಲಿರುವ 'ರಷ್ಯಾದಿಂದ ತೈಲ ಖರೀದಿಗೆ ಭಾರತಕ್ಕೆ ಅನುಮತಿ ನೀಡಲಾಗಿದೆ' ಎಂದು ಅಮೆರಿಕ ಪ್ರಕಟಿಸಿದೆ.

## ದೇಶದಲ್ಲಿ ಇಂಧನ ಕೊರತೆ ಆಗಿಲ್ಲ

ಇಂಡಿಯನ್ ಆಯಿಲ್ ಬದ್ಧವಾಗಿದೆ. ನಾಗರಿಕರು ಆತಂಕಪಡುವ ಅಗತ್ಯವಿಲ್ಲ. ಇಂಧನ ಪಂಪ್‌ಗಳ ಬಳಿ ಹೋಗಿ ಜಮಾಯಿಸಬೇಡಿ. ಸರಿಯಾದ ಮಾಹಿತಿಗಾಗಿ ಅಧಿಕೃತ ಮೂಲಗಳನ್ನೇ ನಂಬಿ ಎಂದು ಕಂಪನಿ ಎಕ್ಸ್‌ಲ್ಲಿ ಹೇಳಿಕೆ ಪ್ರಕಟಿಸಿದೆ. ಹಾರ್ಮುಜ್ ಸಮುದ್ರಸಂಧಿಯ ಮೂಲಕ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಬಗ್ಗೆ ಆತಂಕಗಳಿದ್ದರೂ, ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಎಲ್‌ಪಿಜಿ ಸರಬರಾಜಿನ ವಿಷಯದಲ್ಲಿ ಭಾರತ ಉತ್ತಮ ಸ್ಥಿತಿಯಲ್ಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಹಾರ್ಮುಜ್ ಜಲಸಂಧಿಯ ಮೂಲಕ ಪ್ರಭಾವಿತವಾಗುವ ಸಾಧ್ಯತೆಯಿರುವ ಪ್ರಮಾಣಕ್ಕಿಂತಲೂ ಹೆಚ್ಚು ಇಂಧನವನ್ನು ಭಾರತ ವಿವಿಧ ಮೂಲಗಳಿಂದ ಪಡೆಯುತ್ತಿದೆ. ದೇಶದಲ್ಲಿರುವ ಕಚ್ಚಾ ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಸಂಗ್ರಹವೂ ದೇಶೀಯ ಬೇಡಿಕೆಯನ್ನು ಪೂರೈಸಲು ಸಾಕಷ್ಟಿದೆ. ಸರ್ಕಾರ ಪರಿಸ್ಥಿತಿಯನ್ನು ನಿಕಟವಾಗಿ ಗಮನಿಸುತ್ತಿದೆ. ಹಾರ್ಮುಜ್ ಸಮುದ್ರ ಸಂಧಿಗೆ ಸಂಬಂಧಿಸಿದ ಯಾವುದೇ ಸರಬರಾಜು ಸಮಸ್ಯೆಯನ್ನು ಎದುರಿಸಲು ಪರ್ಯಾಯ ಪ್ರದೇಶಗಳಿಂದ ಸರಬರಾಜು ಹೆಚ್ಚಿಸುವ ಯೋಜನೆ ಮಾಡುತ್ತಿದೆ ಎಂದು ಮೂಲಗಳು ತಿಳಿಸಿವೆ. ಕಳೆದ ಕೆಲವು ವರ್ಷಗಳಲ್ಲಿ ಭಾರತ ತನ್ನ ಕಚ್ಚಾ ತೈಲ ಆಮದು ಮೂಲಗಳನ್ನು ಬಹಳಷ್ಟು ವೈವಿಧ್ಯಗೊಳಿಸಿದೆ ಎಂದು ಅವರು ತಿಳಿಸಿದ್ದಾರೆ.

## ತಂಬಿಟ್ಟು ತಿನ್ನುವುದೇ ಮಜಾ

ಪ್ರೀತಿಸಬೇಕು ಎಂದು ಸಲಹೆ ನೀಡಿದರು. ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಕೆ.ಶಿವಕುಮಾರ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಾಹಿತಿ ಆಯೋಗದ ಅಧ್ಯಕ್ಷ ಹರೀಶ್ ಕುಮಾರ್, ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ರಘು, ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿ ಅಧ್ಯಕ್ಷ ಬಿ. ಜೆ.ವಿಜಯ್‌ಕುಮಾರ್ ಇತರರು ಪಾಲ್ಗೊಂಡಿದ್ದರು.

## ಬದನವಾಳು ಖಾದಿ ಕೇಂದ್ರದಲ್ಲಿ ಪರಿಸರ ನಾಶ ಸಲ್ಲದು: ಪ್ರಸನ್ನ

ಎಂದು ಟೀಕಿಸಿದರು. ಕಳೆದೆರೆಡು ತಿಂಗಳಿನಿಂದ ನಡೆದಿದ್ದ ಶ್ರಮದಾನ, ಸೇವಾ ಕಾರ್ಯ, ಖಾದಿ ಬಟ್ಟೆಯ ಮಾರಾಟ, ಆಶ್ರಮದ ಸ್ವಚ್ಛತಾ ಕಾರ್ಯ, ಪ್ರಾರ್ಥನಾ ಸಭೆಗಳು, ಗ್ರಾಮಸಭೆಗಳಿಗೆ ಸ್ಫೂರ್ತಿ ಸಿಗುತ್ತಿಲ್ಲ. ಈಗಾಗಲೇ ಖಾದಿ ಕ್ಷೇತ್ರದ ಪುನಶ್ಚೇತನಕ್ಕೆ ವಿಸ್ತೃತವಾದ ವರದಿ ಸಲ್ಲಿಸಿದೆ. ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಿ ಅದನ್ನು ಜಾರಿಗೊಳಿಸಲು ಮುಂದಾಗಬೇಕು. ಇಲ್ಲವಾದರೆ ಅಹಿಂಸಾತ್ಮಕ ಸತ್ಯಾಗ್ರಹ ಆರಂಭಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಗಾಂಧಿವಾದಿ ಮಹದೇವಪ್ಪ ಇದ್ದರು.

## ರಷ್ಯಾದಿಂದ ಕಚ್ಚಾತೈಲ ಆಮದು

ಸರ್ಕಾರ ನಿರ್ದೇಶನ ನೀಡಿದೆ. ಅಧಿಕಾರಿಗಳ ಪ್ರಕಾರ, ಪ್ರಸ್ತುತ ಭಾರತದಲ್ಲಿ ಎಲ್‌ಪಿಜಿ ಸಂಗ್ರಹದ ವಿಷಯದಲ್ಲಿ ಪರಿಸ್ಥಿತಿ ಸಮರ್ಪಕವಾಗಿದೆ. ಜನವರಿಯಿಂದ ಅಮೆರಿಕದಿಂದ ಎಲ್‌ಪಿಜಿ ಭಾರತಕ್ಕೆ ಬರಲು ಆರಂಭವಾಗಿದೆ. 2025ರ ನವೆಂಬರ್‌ನಲ್ಲಿ ಭಾರತೀಯ ಸಾರ್ವಜನಿಕ ವಲಯದ ತೈಲ ಕಂಪನಿಗಳು 2026ರ ಒಪ್ಪಂದ ವರ್ಷಕ್ಕಾಗಿ ಅಮೆರಿಕದ ಗಲ್ಫ್ ಕರಾವಳಿಯಿಂದ ವರ್ಷಕ್ಕೆ ಸುಮಾರು 2.2 ಎಂಟಿಪಿಎ ಎಲ್‌ಪಿಜಿ ಆಮದು ಮಾಡಲು ಒಂದು ವರ್ಷದ ಒಪ್ಪಂದಕ್ಕೆ ಸಹಿ ಹಾಕಿದ್ದವು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಭಿತ್ತನೇ ಬೀಜಕ್ಕೆ 3600 ನಿಗದಿಗೆ ಆಗ್ರಹ



ಮೈಸೂರು: ಕರ್ನಾಟಕ ರಾಜ್ಯ ಬೀಜ ನಿಗಮವು ಈ ಬಾರಿ ರೈತರು ಉತ್ಪಾದಿಸಿರುವ ಬಿತ್ತನೆ ಭತ್ತಕ್ಕೆ ಕೇವಲ 3300 ರೂ. ನಿಗದಿ ಪಡಿಸಿರುವುದರಿಂದ ರೈತರಿಗೆ ವಿಪರೀತ ನಷ್ಟವಾಗುತ್ತಿದೆ. ಹೀಗಾಗಿ ಕೂಡಲೇ ಈ ಹಿಂದೆ ನೀಡುತ್ತಿದ್ದ ಕ್ವಿಂಟಾಲ್ 3600 ರೂ.ಗಳನ್ನೇ ನೀಡಬೇಕು ಇಲ್ಲದಿದ್ದರೆ ರೈತರು ಹೋರಾಟ ನಡೆಸಲಿದ್ದಾರೆ ಎಂದು ರಯತ ಕೆ.ಎಲ್. ಪ್ರಭುಸ್ವಾಮಿ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕೆ.ಆರ್. ನಗರ ಮಂಡ್ಯ, ಮೈಸೂರಿನ ಸುಮಾರು 150 ರೈತರು ಈ ನಿಟ್ಟಿನಲ್ಲಿ ಸಭೆ ಸೇರಿ ಈ ನಿರ್ಧಾರ ಕೈಗೊಂಡಿದ್ದಾರೆ. 2024 ರಲ್ಲಿ ಕ್ವಿಂಟಾಲ್ಗೆ 3600 ರೂ, ಇತ್ತು, ಕಳೆದ ವರ್ಷ 3400 ಇತ್ತು, ಈಗ ಇದನ್ನು 3300ಕ್ಕೆ ನಿಗದಿ ಪಡಿಸಲಾಗಿದೆ. ಪ್ರತಿ ವರ್ಷವೂ ಉತ್ಪಾದನಾ ವೆಚ್ಚ, ಲೋಡಿಂಗ್, ಅನ್ಲೋಡಿಂಗ್ ಶುಲ್ಕ ಸಹಾ ಹೆಚ್ಚಿದೆ. ಹೀಗಿರುವಾಗ ಪ್ರತಿ ವರ್ಷ ದರ ಇಳಿಸುವುದು ಸರಿಯಲ್ಲ. ಇದಲ್ಲದೆ, ಒಂದು ಎಕರೆಗೆ ಕೇವಲ 12 ರಿಂದ 15 ಕ್ವಿಂಟಾಲ್ ಮಾತ್ರ ಖರೀದಿ ಮಾಡುವುದಾಗಿ ತಿಳಿಸುವುದು ಸರಿಯಲ್ಲ ಎಂದರು.

ಈ ಕುರಿತು ಬೆಂಗಳೂರಿನ ಹೆಬ್ಬಾಳ್ನಲ್ಲಿನ ರಾಜ್ಯ ಬೀಜ ನಿಗಮದ ಅಧ್ಯಕ್ಷರಿಗೆ ಶೀಘ್ರದಲ್ಲೇ ಮನವಿ ಸಲ್ಲಿಸಲಿದ್ದು, ಪರಿಗಣಿಸದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಎನ್.ಎಸ್. ನಾಗೇಂದ್ರಸ್ವಾಮಿ, ಮಹದೇವಸ್ವಾಮಿ, ಬಸವರಾಜು, ಮಲ್ಲೇಶ್ ಇದ್ದರು.

# 10ಕ್ಕೆ ರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಮಹಿಳಾ ಘಟಕದಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.10ರಂದು ಮೌಲ್ಯಾಧಾರಿತ ಸಮಾಜ ಮತ್ತು ಮಹಿಳೆ ವಿಚಾರಗೋಷ್ಠಿಯನ್ನು ಆಯೋಜಿಸಲಾಗಿದೆ ಎಂದು ಘಟಕದ ಅಧ್ಯಕ್ಷೆ ಧನ್ಯ ಸತ್ಯೇಂದ್ರಮೂರ್ತಿ ಹೇಳಿದರು.

ಜೆಎಸ್‌ಎಸ್ ಆಸ್ಪತ್ರೆ ಪಕ್ಕದಲ್ಲಿರುವ ರಾಜೇಂದ್ರ ಭವನದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಸಾನ್ನಿಧ್ಯವಹಿಸುವರು. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಬಸವ ಜಯಂತಿ ಅಧ್ಯಕ್ಷ ಎಂ.ಚಂದ್ರಶೇಖರ್ ಭಾಗವಹಿಸುವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ.ಬಸವರಾಜು ಅಧ್ಯಕ್ಷತೆ ವಹಿಸುವರು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಂತ ವೈದ್ಯೆ ಡಾ.ಬ್ರಿಂದಾ ಸುಹಾಸ್ ಗೋಧಿ ಅವರನ್ನು ಸನ್ಮಾನಿಸಲಾಗುವುದು .ವಿಭೂತಿಕೆರೆ ಗ್ರಾಮದ ಶಶಿಕಲಾ ಶಿವಲಿಂಗಯ್ಯರಿಗೆ ಕಾಯಕಶ್ರೀ ಪ್ರಶಸ್ತಿಪ, ಮೈವಿವಿ ಚಿನ್ನದ ಪದಕ ಪುರಸ್ಕೃತೆ ಎಂ.ಎಸ್. ಕೀರ್ತನರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಘಟಕದ ಉಪಾಧ್ಯಕ್ಷೆ ಮೀನಾಕ್ಷಿ ಶ್ರೀಶೈಲಾ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾ ಮಹಾದೇವಸ್ವಾಮಿ, ಖಜಾಂಚಿ ಎಂ.ಎನ್.ಶೈಲಾ ಸಿದ್ದರಾಮಪ್ಪ, ಕಾರ್ಯದರ್ಶಿ ಮಾಲಿನಿ ಪ್ರವೀಣ್ ಇದ್ದರು.



# ದೇವಾಲಯದಲ್ಲಿ ಮಾತ್ರ ದೇವರಿಲ್ಲ

## ನಾನು ದೇವರನ್ನು ನಂಬ್ತೀನಿ, ದೇವರು ಸರ್ವತ್ರಯಾಮಿ: ಸಿಎಂ ಸಿದ್ದರಾಮಯ್ಯ

ಎಚ್.ಡಿ.ಕೋಟೆ: ದೇವರು ದೇವಾಲಯಗಳಲ್ಲಿ ಮಾತ್ರ ಇರುವುದಿಲ್ಲ. ದೇವರು ಸರ್ವತ್ರಯಾಮಿ ನಾನೂ ಕೂಡ ದೇವರನ್ನು ನಂಬುತ್ತೇನೆ ಆದರೆ, ದೇವಾಲಯದಲ್ಲಿ ಮಾತ್ರ ದೇವರಿದ್ದಾನೆ ಎಂದು ನಾನು ನಂಬಿಲ್ಲ. ನನಗೂ ಒಳ್ಳೆದು ಮಾಡು, ಎಲ್ಲರಿಗೂ ಒಳಿತು ಮಾಡು ಎಂದು ದೇವರಲ್ಲಿ ಕೇಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶಿರಮಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಲಕ್ಷ್ಮೀದೇವಿ(ಹುಚ್ಚಮ್ಮ) ಅವರ ದೇವಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಹಿಂದೂಗಳು ದೇವಾಲಯ, ಗುಡಿ, ಗೋಪುರ ನಿರ್ಮಾಣ ಮಾಡಿ, ದೇವಾಲಯದ ಪ್ರತಿಮೆಗಳಲ್ಲಿ ದೇವರನ್ನು ಕಾಣುವುದು ನಂಬಿಕೆ. ಉಳ್ಳವರು ಶಿವಾಲಯವ ಮಾಡಿಹರು, ನಾನೇನ ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಲಶವಯ್ಯ ಎಂದು 850 ವರ್ಷಗಳ ಹಿಂದೆಯೇ ಜಗಜ್ಯೋತಿ ಬಸವಣ್ಣ ಅವರು ಹೇಳಿರುವ ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದು ಹೇಳಿದರು.

ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಯಾವುದೇ ಧರ್ಮಕ್ಕೆ ಸೇರಿದ್ದರು ಮನುಷ್ಯ ಮನುಷ್ಯನನ್ನು ಪ್ರೀತಿಸಿ ಎಂದೇ ಎಲ್ಲ ಧರ್ಮಗಳು ಹೇಳುತ್ತವೆ. ಪರಸ್ಪರ ದ್ವೇಷಿಸಿ ಎಂದು ಯಾವುದೇ ಧರ್ಮ ಹೇಳುವುದಿಲ್ಲ. ಕೆಲವು ಪಟ್ಟಭದ್ರಹಿತಾಸಕ್ತಿಗಳು ಸಮಾಜದಲ್ಲಿದ್ದಾರೆ. ಬಡವರು ಬಡವರಾಗೆ ಇರಬೇಕು.

ಮನುಷ್ಯ ಮನುಷ್ಯನನ್ನು ದ್ವೇಷಿಸಬೇಕು ಎಂದು ಕೆಲವರಿದ್ದಾರೆ. ಧರ್ಮ, ಜಾತಿ ಹೆಸರಿನಲ್ಲಿ ಸಮಾಜ ಒಡೆಯುವ ಪಟ್ಟಭದ್ರಹಿತಾಸಕ್ತಿ ಬಗ್ಗೆ ಎಚ್ಚರದಿಂದ ಇರಬೇಕು. ಯಾವುದೇ ಕಾರಣಕ್ಕೂ ಯಾರೊಬ್ಬರನ್ನು ದ್ವೇಷಿಸಬಾರದು ಜಾತಿ, ಧರ್ಮ, ವರ್ಗ ಎಲ್ಲವೂ ಹೋಗಿ ಎಲ್ಲರೂ ಒಂದೇ ಎಂಬ ಭಾವನೆ ಬರಲಿ ಎಂದು ಆಶಿಸಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್, ಕೆ.ಆರ್.ನಗರ ಶಾಸಕ ರವಿಶಂಕರ್, ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಬೀಚನಹಳ್ಳಿ ಚಿಕ್ಕಣ್ಣ, ವಿಧಾನ ಪರಿಷತ್ ಸದಸ್ಯರಾದ ಶಿವಕುಮಾರ್, ಡಿ.ತಿಮ್ಮಯ್ಯ, ಮಾಜಿ ಸಚಿವ ಎಂ.ಶಿವಣ್ಣ ಕುರುಬ ಸಂಘದ ರಾಜ್ಯಾಧ್ಯಕ್ಷ ಸುಬ್ಬಣ್ಣ, ಕುರುಬ ಸಂಘದ ತಾಲೂಕು ಅಧ್ಯಕ್ಷ ಮೊಳೆಯೂರು ಆನಂದ್, ಶಿವಪ್ಪ ಕೋಟೆ, ಕಬಿನಿ ಹೇಮಂತ್, ಏಜಾಜ್ ಪಾಷ, ಮನುಗನಹಳ್ಳಿ ಮಾದಪ್ಪ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು, ಸೇರಿದಂತೆ ಬ್ಲಾಕ್ ಕಾಂಗ್ರೆಸ್ ನ ವಿವಿಧ ಸ್ಥರದ ಮುಖಂಡರುಗಳು, ಕಾಂಗ್ರೆಸ್ ಕಾರ್ಯಕರ್ತರು ಸೇರಿದಂತೆ ಅಕ್ಕ-ಪಕ್ಕದ ಗ್ರಾಮದ ಅನೇಕರು ಇದ್ದರು.



### ಪರೋಕ್ಷವಾಗಿ ಶಿರಮಹಳ್ಳಿಯಿಂದ ಸಂದೇಶ

ರಾಜ್ಯ ರಾಜಕಾರಣದಲ್ಲಿ ಕುರ್ಚಿ ಕಿತ್ತಾಟ ಜೋರಾಗಿರುವಾಗಲೇ, ಬಜೆಟ್ ಮಂಡಿಸಿ ದಿನಕಳೆದಂತೆ ಕುರ್ಚಿ ಚರ್ಚೆಗಳು ಜೋರಾಗುವ ಸಾಧ್ಯತೆ ಇರುವುದರಿಂದ, ಶಿರಮಹಳ್ಳಿ ಗ್ರಾಮದಿಂದಲೇ ವಿರೋಧಿಗಳಿಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ದೀರ್ಘಾವಧಿಯ ಮುಖ್ಯಮಂತ್ರಿಯಾಗಿ, ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಹಾಗೂ ದಾಖಲೆಯ 17ನೇ ಬಜೆಟ್ ಜೊತೆಗೆ ಅತೀ ಹೆಚ್ಚು ಬಜೆಟ್ ಮಂಡಿಸಿದ ಮುಖ್ಯ ಮಂತ್ರಿ ಎಂಬ ಹೆಗ್ಗಳಿಕೆಯನ್ನು ಪಡೆಯಲು ರಾಜ್ಯದ ಜನತೆಯೇ ಕಾರಣ. ನಾನು ಯಾವುದೇ ಪಕ್ಷಕ್ಕೆ ಸೇರ್ಪಡೆಗೊಂಡರೂ ಶಿರಮಹಳ್ಳಿ ಗ್ರಾಮದ ಜನತೆ ಆ ಪಕ್ಷಕ್ಕೆ ಮತ ನೀಡಿದ್ದಾರೆ. ಜನರ ಆಶೀರ್ವಾದ ಇರುವವರೆಗೂ ಇನ್ನಷ್ಟು ಕೆಲಸ ಮಾಡುತ್ತೇನೆ ಎನ್ನುವ ಮೂಲಕ ಸುಲಭವಾಗಿ ಕುರ್ಚಿ ಬಿಡುವುದಿಲ್ಲ ಎನ್ನುವ ಅರ್ಥದಲ್ಲಿ ವಿರೋಧಿಗಳಿಗೆ ಶಿರಮಹಳ್ಳಿಯಿಂದ ಸಂದೇಶ ರವಾನಿಸಿದ್ದಾರೆ.

### ಅನಿಲ್ ಚಿಕ್ಕಮಾದು ಉತ್ತಮ ಆಡಳಿತಗಾರ

ಶಿರಮಹಳ್ಳಿ ಗ್ರಾಮದ ಜನತೆ ದೇವಾಲಯ ಉದ್ಘಾಟನೆಗೆ ನೀವೇ ಬರುವಂತೆ ಮೂರು ಬಾರಿ ಮನವಿ



ಮಾಡಿದ್ದರು. ಸಮಯದ ಹೊಂದಾಣಿಕೆಯಿಂದ ನಾನು ಬರಲು ಸಾಧ್ಯವಾಗಿರಲಿಲ್ಲ. ಇದೀಗ ದೇವಾಲಯ ಉದ್ಘಾಟಿಸಲಾಗಿದೆ. ಶಾಸಕ ಅನಿಲ್ ಚಿಕ್ಕಮಾದು ಅನೇಕ ಕೆಲಸ ಮಾಡುವ ಮೂಲಕ ಕ್ಷೇತ್ರವನ್ನು ಅಭಿವೃದ್ಧಿ ಮಾಡುತ್ತಿದ್ದಾರೆ. ಆದ್ದರಿಂದಲೇ ಅವರು ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ. ಅವರಿಗೆ ಸಂಪೂರ್ಣ ಸಹಕಾರ ನೀಡಲಿದ್ದೇನೆ. ಶಾಸಕರೊಟ್ಟಿಗೆ ಅಕ್ಕ-ಪಕ್ಕದ ಗ್ರಾಮಸ್ಥರು ನೀಡಿರುವ ಮನವಿಗಳನ್ನು ಹಂತ-ಹಂತವಾಗಿ ಕಾರ್ಯರೂಪಕ್ಕೆ ತರಲಾಗುವುದು ಎಂದರು.

> ನಾನು ಶಾಸಕನಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಂಸದ ಧ್ರುವನಾರಾಯಣ್ ಅವರೇ ಕಾರಣ. ಸಿದ್ದರಾಮಯ್ಯ ಎಚ್.ಡಿ.ಕೋಟೆ ತಾಲೂಕಿಗೆ ಅತೀ ಹೆಚ್ಚು ಅನುದಾನ ನೀಡಿದ್ದಾರೆ. ಮುಖ್ಯಮಂತ್ರಿ ಆದಾಗ 4 ಬಾರಿ ಆಗಮಿಸಿದ್ದಾರೆ. ತಾಲೂಕಿನ ಮೇಲೆ ವಿಶೇಷ ಪ್ರೀತಿ ಹೊಂದಿದ್ದಾರೆ. ಎಚ್.ಡಿ.ಕೋಟೆಯನ್ನು ಪ್ರವಾಸಿ ತಾಣವಾಗಿ ರೂಪಿಸಬೇಕು.ಕಬಿನಿ ಜಲಾಶಯ ಮುಂಭಾಗ ಬೃಂದಾವನ ನಿರ್ಮಿಸಬೇಕು. ಶುಕ್ರವಾರ ಮಂಡಿಸಿದ ಬಜೆಟ್ ಅಲ್ಲಿ ಕಬಿನಿ ಎಡದಂಡೆ, ಬಲದಂಡೆ ನಾಲೆಗೆ ಅಭಿವೃದ್ಧಿ ಕಾಮಗಾರಿಗೆ ಹಣ ನೀಡಿದ್ದಾರೆ. 1600 ಕೋ.ರೂ. ವೆಚ್ಚದಲ್ಲಿ ಮಳವಳ್ಳಿ-ಬಾವಲಿ ವರೆಗೆ ದ್ವಿ-ಪಥ ರಸ್ತೆ, 37 ಕೋ.ರೂ. ವೆಚ್ಚದಲ್ಲಿ ಕಾರ್ಮಿಕ ಇಲಾಖೆಯಿಂದ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದಾರೆ.
>
> -ಅನಿಲ್ ಚಿಕ್ಕಮಾದು ಶಾಸಕ



## ಮೋದಿ ವಿರುದ್ಧ ಸಿದ್ದು ವಾಗ್ದಾಳಿ

ಮೊದಲ ಪುಟದಿಂದ

ದೇಶದ ಜನರ ಕ್ಷಮೆಯಾಚಿಸಿ ರಾಜೀನಾಮೆ ನೀಡಲಿ ಎಂದು ಸವಾಲು ಹಾಕಿದ್ದಾರೆ.

ಎಕ್ಸ್‌ಲ್ಲಿ ಈ ಕುರಿತು ಸುಧೀರ್ಘ ಟ್ವೀಟ್ ಮಾಡಿರುವ ಸಿದ್ದರಾಮಯ್ಯ ಅವರು, ಮೋದಿ ಅವರ ಸರ್ಕಾರ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ. ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು 60ರಷ್ಟು ಹೆಚ್ಚಿಸಿರುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನನಿರ್ವಹಣೆ ವೆಚ್ಚ ದುಬಾರಿಯಾಗಲಿದೆ. ಈ ಏರಿಕೆ ಅನಿವಾರ್ಯ ಕ್ರಮವೇನಲ್ಲ, ಇದು ಶರಣಾಗತಿಯನ್ನೇ ದೇಶದ ಕಾರ್ಯತಂತ್ರವೆಂದು ತಪ್ಪಾಗಿ ತಿಳಿದುಕೊಂಡ ವಿದೇಶಾಂಗ ನೀತಿ ಫಲವಾಗಿದೆ ಎಂದು ಲೇವಡಿ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮಾತುಗಳಿಗೆ ಮೂಕರಂತೆ ತಲೆಯಾಡಿಸುವ ಮೂಲಕ ಭಾರತದ ವ್ಯೂಹಾತ್ಮಕ ಸ್ವಾತಂವನ್ನು ಬೇರೊಂದು ರಾಷ್ಟ್ರದ ಪಾದದಡಿ ಇಟ್ಟಿದ್ದಾರೆ. ರಷ್ಯಾ ಹಾಗೂ ಇರಾನ್‌ನಂತಹ ದೇಶಗಳೊಂದಿಗಿನ ಭಾರತದ ದೀರ್ಘಕಾಲೀನ ಇಂಧನ ಸಹಭಾಗಿತ್ವವನ್ನು ಹಾಳುಗೆಡವಿದ್ದಾರೆ. ಇವು ಹಲವು ದಶಕಗಳಿಂದ ಭಾರತೀಯರಿಗೆ ಇಂಧನ ಸ್ಥಿರತೆಯನ್ನು ಖಾತ್ರಿಪಡಿಸಿದ ರಾಷ್ಟ್ರಗಳು ಎಂಬುದನ್ನು ಪ್ರಧಾನಿಗಳು ಮರೆತಂತಿದೆ ಎಂದು ಟೀಕಿಸಿದ್ದಾರೆ. ಪಂಡಿತ್ ಜವಾಹರ ಲಾಲ್ ನೆಹರೂ ಪ್ರಕಾರ, ವಿದೇಶಾಂಗ ನೀತಿಯು ಆರ್ಥಿಕ ನೀತಿ ಪರಿಣಾಮವಾಗಿದೆ. ನೆಹರೂ ಅವರು ಏಳೆಂಟು ದಶಕಗಳ ಹಿಂದೆಯೇ ನೀಡಿದ್ದ ಎಚ್ಚರಿಕೆ ಇಂದು ಅಕ್ಷರಶಃ ಸತ್ಯವಾಗಿದೆ. ರಾಜತಾಂತ್ರಿಕತೆ ಎನ್ನುವುದು ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮ್ಮ ಪುಸ್ತಕದಲ್ಲಿ ಮಾಜಿ ಸೇನಾಧಿಕಾರಿ ಜನರಲ್ ಎಂ.ಎಂ.ನರವಣೆ ಅವರು ಭಾರತದ ವಿದೇಶಾಂಗ ನೀತಿ ನಿರ್ಧಾರಗಳಲ್ಲಿ ಸಾಂಸ್ಥಿಕ ಸಮಾಲೋಚನೆ ಮತ್ತು ವ್ಯೂಹಾತ್ಮಕ ತಿಳುವಳಿಕೆ ಕೊರತೆಯ ಬಗ್ಗೆ ಗಂಭೀರ ಆತಂಕಗಳನ್ನು ಎತ್ತಿದ್ದರು. ಇದು ಪ್ರಧಾನಮಂತ್ರಿಗೆ ರಾಜತಾಂತ್ರಿಕ ನಿಲುವು ಮತ್ತು ಅದರ ಆರ್ಥಿಕ ಪರಿಣಾಮಗಳ ಮೂಲಭೂತ ತಿಳುವಳಿಕೆಯ ಕೊರತೆ ಇದೆ ಎಂಬ ಅನುಮಾನವನ್ನು ಖಚಿತಪಡಿಸುವಂತಿದೆ ಎಂದಿದ್ದಾರೆ.

# ತಂತ್ರಜ್ಞಾನದೊಂದಿಗೆ ಹೆಜ್ಜೆಯನಿಡಿ

ಮೈಸೂರು: ಇಂದಿನ ಯುಗ ತಂತ್ರಜ್ಞಾನದ ಯುಗವಾಗಿದೆ. ಮಾನವನ ಬದುಕಿನ ಪ್ರತಿಯೊಂದು ಕೆಲಸಕಾರ್ಯಗಳಲ್ಲಿ ತಂತ್ರಜ್ಞಾನ ಹೆಚ್ಚು ಪ್ರಭಾವ ಬೀರುತ್ತಿದೆ. ತಂತ್ರಜ್ಞಾನವಿಲ್ಲದ ಬದುಕನ್ನು ಇಂದು ನಾವು ಊಹಿಸಿಕೊಳ್ಳುವುದು ಅಸಾಧ್ಯ. ತಂತ್ರಜ್ಞಾನಗಳು ಹಿಂದಿನ ಕಾಲದಿಂದಲೂ ಇದ್ದು ಕಾಲದಿಂದ ಕಾಲಕ್ಕೆ ನವೀಕರಣಗೊಂಡು ಬಂದಿವೆ. ಇಂದು ತಂತ್ರಜ್ಞಾನ ಹಲವು ಆಯಾಮಗಳಲ್ಲಿ ನವೀಕರಣಗೊಳುತ್ತಿದೆ. ಅದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಂಡು ನವೀಕರಣಗೊಂಡ ತಂತ್ರಜ್ಞಾನದೊಂದಿಗೆ ಹೆಜ್ಜೆಯನಿಡಬೇಕು ಎಂದು ಪ್ರೊ. ಬಿ.ವಿ. ಸಾಂಬಶಿವಯ್ಯ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕೃತಕ ಬುದ್ಧಿಮತ್ತೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು ಉದ್ಯೋಗ ಕೋಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಬಳಕೆ ಮತ್ತು ಜ್ಞಾನ ಔದ್ಯೋಗಿಕ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಅವಕಾಶಗಳನ್ನು ಒದಗಿಸುತ್ತಿದೆ. ಇದನ್ನು ಅರ್ಥಮಾಡಿಕೊಂಡು ತಂತ್ರಜ್ಞಾನದ ಬಳಕೆ ಮತ್ತು ಅದರ ಬಗೆಗಿನ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಕೃತಕ ಬುದ್ಧಿ



ಮತ್ತೆ ಕಾಲವಿದು. ಈ ತಂತ್ರಜ್ಞಾನ ಇಂದು ವಿಸ್ತಾರವಾಗಿ ವ್ಯಾಪಿಸಿಕೊಳ್ಳುತ್ತಿದೆ. ಈ ಕ್ಷೇತ್ರದಲ್ಲಿ ಸಾಧನೆ ಮಾಡುವುದಕ್ಕೆ ಯುವಜನತೆಗೆ ಸಾಕಷ್ಟು ಅವಕಾಶಗಳನ್ನು ಒದಗಿಸಿದೆ. ಇದನ್ನು ವಿದ್ಯಾರ್ಥಿಗಳು ಗ್ರಹಿಸಿ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರು ವೃತ್ತಿ ಮತ್ತು ಆಫ್ರೆಂಟ್ ಪ್ರೈ.ಲಿ. ಹಿರಿಯ ವ್ಯವಸ್ಥಾಪಕ ತಹಸೀನಾ ಮತ್ತು ಎಪಿ ಕ್ಲಸ್ಟರ್ ಮುಖ್ಯಸ್ಥ ಗೋಪಿನಾಥ್ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕುರಿತು ತರಬೇತಿಯನ್ನು ನೀಡಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ. ಪ್ರಭು, ಉದ್ಯೋಗ ಕೋಶ ನಿಯೋಜನಾಧಿಕಾರಿ ಜಿ. ಕಾರ್ತಿಕ್ ಉಪಸ್ಥಿತರಿದ್ದರು.

### ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್

# ಕಾನ್ ಸ್ಟೇಬಲ್‌ಗಳೇ ಇಲಾಖೆಗೆ ಬೆನ್ನೆಲುಬು

ಮೈಸೂರು: 10 ತಿಂಗಳ ಹಿಂದೆ ನೀವುಗಳು ಏಕಾಂಗಿಯಾಗಿ ಬಂದು ಈಗ ಪೊಲೀಸ್ ಕುಟುಂಬ ಸೇರಿಕೊಂಡಿದ್ದೀರಾ. ಪೊಲೀಸ್ ಕಾನ್‌ಸ್ಟೇಬಲ್‌ಗಳೇ ಇಲಾಖೆಗೆ ಬೆನ್ನೆಲುಬು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಮೈಸೂರಿನ ಪೊಲೀಸ್ ತರಬೇತಿ ಶಾಲೆಯ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ತರಬೇತಿ ಶಾಲೆಯ 10ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್ ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಮಹಿಳಾ ನಾಗರಿಕ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳನ್ನು ಹುರಿದುಂಬಿಸಿದರು.

ಮಹಿಳೆಯರು ಪೊಲೀಸ್ ಸಮವಸ್ತ್ರ ಧರಿಸಿದ್ದಾಗ ಸಾಕಷ್ಟು ಸವಾಲುಗಳು ಎದುರಿಸಬೇಕಾಗುತ್ತದೆ. ಜೊತೆಗೆ ತ್ಯಾಗಗಳಿಗೂ ಸಿದ್ದರಿರಬೇಕು. ಆದರೆ, ಮಹಿಳೆಯರಿಗೆ ಇರುವ ತಾಳ್ಮೆ, ಪ್ರೇರಣಾ ಶಕ್ತಿ ಯಾರಿಗೂ ಇಲ್ಲ. ಕರ್ನಾಟಕ ಪೊಲೀಸ್



ಇಲಾಖೆಯಲ್ಲಿ ಕೆಲಸ ಮಾಡುವುದು ಹೆಮ್ಮೆ, ಘನತೆಯ ವಿಚಾರ. ಇಲ್ಲಿ ಪ್ರತಿದಿನ ಕಲಿಕೆ ಇರುತ್ತದೆ. ಈಗ ಮೊದಲಿನಂತೆ ಸಾಮಾನ್ಯ ಪ್ರಕರಣಗಳಿಲ್ಲ. ಸೈಬರ್ ಪ್ರಕರಣಗಳು ಹೆಚ್ಚಳವಿದೆ.ಅದರ ಬಗ್ಗೆಯೂ ಅರಿತುಕೊಳ್ಳಿ ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಇರುವ ಆತ್ಮಸ್ಥೈರ್ಯ ಯಾರಿಗೂ ಇಲ್ಲ. ನೀವು ಎಲ್ಲವನ್ನು ಮಾಡಬಹುದು. ಠಾಣೆಯ ಪ್ರತಿಯೊಂದು ವಿಭಾಗದಲ್ಲಿ ತೊಡಗಿಸಿಕೊಳ್ಳಿ. ಯಾರು ಏನೇ ಹೇಳಿದರೂ ತಲೆ ಕೆಡಿಸಿಕೊಳ್ಳಬೇಡಿ ಎಂದರು. ಇಲಾಖೆಯಿಂದ ಈಗ ಜನ ಸ್ನೇಹಿ ಪೊಲೀಸ್, ಆಸರೆ ಎಂಬ ಅನೇಕ ರೀತಿಯಲ್ಲಿ ಜನರೊಟ್ಟಿಗೆ ಸೇರಿ ಕಾರ್ಯ ನಿರ್ವಹಿಸುವ ಯೋಜನೆಗಳು ಆರಂಭವಾಗಿವೆ ಉತ್ತಮವಾಗಿ ಕೆಲಸ ಮಾಡಿ ಇಲಾಖೆಗೆ ಹೆಮ್ಮೆ ತನ್ನಿ ಎಂದು ಶುಭ ಹಾರೈಸಿದರು.

#### ಪ್ರಶಸ್ತಿ

ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರಶಿಕ್ಷಣಾರ್ಥಿಯಾಗಿ ಭುವನೇಶ್ವರಿ ಬಸಪ್ಪ ಪಿಡಶೆಟ್ಟಿ ಪ್ರಶಸ್ತಿ ಪಡೆದುಕೊಂಡರು. ಒಳಾಂಗಣ ಪ್ರಶಸ್ತಿಯನ್ನು ಮುತ್ತುರವ್ವಾ ಬಾಳಗೌಡ ಪಾಟೀಲ್, ರುಕ್ಮಿಣಿ ಕೃಷ್ಣಪ್ಪ ಪಮ್ಮಾರ ಇಬ್ಬರು ಪ್ರಥಮ, ಎಂ.ಎಸ್.ಅನುಷಾ ದ್ವಿತೀಯ ಪಡೆದುಕೊಂಡಿದ್ದಾರೆ. ಹೊರಾಂ ಗಣ ಪ್ರಶಸ್ತಿಯಲ್ಲಿ ಭುವನೇಶ್ವರಿ ಬಸಪ್ಪ ಪಿಡಶೆಟ್ಟಿ ಪ್ರಥಮ, ಎಂ.ಎಸ್.ಅನುಷಾ ದ್ವಿತೀಯ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.ಎಸ್.ಎಲ್ಆರ್ ಫೈರಿಂ ಗ್‌ನಲ್ಲಿ ಲಕ್ಷ್ಮೀ ನಂಜಪ್ಪಳವರ ಪ್ರಥಮ, ಎಂ.ಎಸ್.ಅನುಷಾ ದ್ವಿತೀಯ ಪ್ರಶಸ್ತಿ ಪಡೆದಿಕೊಂಡರು. 9ಎಂ.ಎಂ ಪಿಸ್ತೂಲ್ ಫೈರಿಂಗ್‌ನಲ್ಲಿ ಕವಿತಾ ಸುರೇಶ್ ಬರಗಾಂವಿ ಪ್ರಥಮ, ಎ.ಎಸ್.ಸವಿತಾ ದ್ವಿತೀಯ ಪ್ರಶಸ್ತಿ ಪಡೆದುಕೊಂಡರು.

#### ವಿದ್ಯಾರ್ಹತೆ

ಪೊಲೀಸ್ ತರಬೇತಿ ಶಾಲೆಯ 10ನೇ ತಂಡದ ಮಹಿಳಾ ನಾಗರಿಕ ಪೊಲೀಸ್ ಕಾನ್ ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ 40 ಮಂದಿ ಮಹಿಳಾ ಪೊಲೀಸ್ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಪೊಲೀಸ್ ತರಬೇತಿ ಶಾಲೆಯ ಪ್ರಭಾರ ಪ್ರಾಂಶುಪಾಲ ಸಿ.ಮಲ್ಲಿಕ್ ಇದ್ದರು.

# ಫೆಬ್ರವರಿ 2026 ತಿಂಗಳಲ್ಲಿ ಮಾದಕ ವಸ್ತುಗಳ ಪ್ರಕರಣ ಸೇರಿದಂತೆ ವಿವಿಧ ಕಾಯ್ದೆಯಗಳಡಿ ಪೊಲೀಸರ ಕ್ರಮ

## 32 ಪ್ರಕರಣಗಳ ಪೈಕಿ 96 ಮಂದಿ ದಸ್ತಗಿರಿ

ರಾಮನಗರ: ಫೆಬ್ರವರಿ ಮಾಹೆಯಲ್ಲಿ ಮಾದಕ ದ್ರವ್ಯಗಳ ಕಾಯ್ದೆ, ಜೂಜಾಟ, ಅಗತ್ಯ ವಸ್ತುಗಳ ಕಾಯ್ದೆ, ಅಬಕಾರಿ ಕಾಯ್ದೆಗಳಡಿಯಲ್ಲಿ ಜಿಲ್ಲಾದ್ಯಂತ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 32 ಪ್ರಕರಣಗಳಲ್ಲಿ ಒಟ್ಟು 96 ಮಂದಿಯನ್ನು ದಸ್ತಗಿರಿ ಮಾಡಿ ಕ್ರಮ ಜರುಗಿಸಿರುವುದಾಗಿ ಜಿಲ್ಲಾ ಪೊಲೀಸರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಜೂಜಾಟದ 10 ಪ್ರಕರಣಗಳಲ್ಲಿ 71 ಮಂದಿ, ಅಬಕಾರಿಗೆ ಸಂಬಂಧಿಸಿದ 16 ಪ್ರಕರಣಗಳಲ್ಲಿ 16 ಮಂದಿ, ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ 2 ಪ್ರಕರಣಗಳಲ್ಲಿ ಒಬ್ಬ ವ್ಯಕ್ತಿ, ಮಾದಕ ದ್ರವ್ಯಗಳ ಕಾಯ್ದೆಯಡಿಯಲ್ಲಿ (ಎನ್.ಡಿ.ಪಿ.ಎಸ್) 4 ಪ್ರಕರಣಗಳಲ್ಲಿ 8 ಮಂದಿ ಆರೋಪಿಗಳನ್ನು ದಸ್ತಗಿರಿ ಮಾಡಿರುವುದಾಗಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

### ಎನ್.ಡಿ.ಪಿ.ಎಸ್ ಕಾಯ್ದೆ

ಎನ್.ಡಿ.ಪಿ.ಎಸ್ ಅಡಿಯಲ್ಲಿ 4 ಪ್ರಕರಣಗಳಲ್ಲಿ 8 ಮಂದಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಪೈಕಿ ರಾಮನಗರದ ಐಜೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಓರ್ವ ವಿದೇಶಿ ಪ್ರಜೆ ಸೇರಿದಂತೆ 3 ಜನ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿತ್ತು. ಇವರಿಂದ ವಿವಿಧ ಮಾದರಿಯ 75 ಲಕ್ಷರೂ ಮೌಲ್ಯದ 786 ಗ್ರಾಂ ಸಂಶ್ಲೇಷಿತ ಮಾದಕ ವಸ್ತುಗಳನ್ನು, 1 ಕಾರು, 1 ದ್ವಿಚಕ್ರ ವಾಹನ ಹಾಗೂ 3 ಮೊಬೈಲ್ ಫೋನುಗಳನ್ನು ವಶಕ್ಕೆ ಪಡೆದುಕೊಳ್ಳಲಗಿದೆ.

ರಾಮನಗರ ಟೌನ್ ವ್ಯಾಪ್ತಿಯ ಯಾರಬ್ ನಗರದ ಬಳಿ ಇಬ್ಬರು ವ್ಯಕ್ತಿಗಳು ಮಾದಕ ವಸ್ತುವೊಂದನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ತಿಳಿದು ಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಲಾಗಿ ಅವರಿಂದ ಒಟ್ಟು 11.6 ಗ್ರಾಂ ತೂಕದ ಸಂಶ್ಲೇಷಿತ ಮಾದಕ ವಸ್ತುಗಳನ್ನು ಹಾಗೂ ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನ, 2 ಮೊಬೈಲ್ ಫೋನುಗಳು ಹಾಗೂ 1620 ನಗರದ ಹಣವನ್ನು ವಶಪಡಿಸಿಕೊಳ್ಳಲಾಗಿತ್ತು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಫೆ. 26ರಂದು ಮಾಗಡಿ ಪೊಲೀಸ್ ಠಾಣಾ ವ್ಯಾಪ್ತಿಯ ಹೊಸಹಳ್ಳಿ ರಸ್ತೆ ಬಳಿ ಇಬ್ಬರು ಅಪರಿಚಿತ ವ್ಯಕ್ತಿಗಳು ಮಾದಕ ವಸ್ತುವೊಂದನ್ನು ಮಾರಾಟ ಮಾಡುತ್ತಿರುವ ಮಾಹಿತಿ ಹಿನ್ನೆಲೆಯಲ್ಲಿ ದಾಳಿ ನಡೆಸಿದಾಗ ಅವರಿಂದ ಒಟ್ಟು 250 ಗ್ರಾಂ ತೂಕದ ಮಾದಕ ವಸ್ತುಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಫೆ.28ರಂದು ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣಾ ವ್ಯಾಪ್ತಿಯ ಲಾಳಘಟ್ಟ ರಸ್ತೆ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಮಾದಕ ವಸ್ತು ಮಾರಾಟ




ಮಾಡುತ್ತಿರುವ ಮಾಹಿತಿ ಮೇರೆಗೆ ದಾಲಿ ನಡೆಸಿ ಅವನಿಂದ 51.4 ಗ್ರಾಂ ತೂಕದ ಮಾದಕ ವಸ್ತು, 500 ರೂ ನಗದು ಮತ್ತು ದ್ವಿಚಕ್ರವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಲಾಗಿದೆ. ನ್ಯಾಯಾಲಯದ ಪ್ರೊಕ್ಲಮೇಷನ್, ಎಲ್.ಪಿ. ಆಋ ಮತ್ತು ವಾರೆಂಟ್ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿದ್ದ 9 ಜನ ಆರೋಪಿಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಮುಂಜಾಗ್ರತ ಕ್ರಮವಾಗಿ 230 ರೌಡಿಗಳ ವಿರುದ್ಧ ಪಿ.ಎ.ಆರ್ ಪ್ರಕರಣಗಳನ್ನು ದಾಖಲಿಸಲಾಗಿದೆ. ನ್ಯಾಯಾಲಯದಲ್ಲಿ ವಿಚಾರಣೆ ಪೂರೈಸಿದ 153 ಪ್ರಕರಣಗಳು ವಿಲೇ ಆಗಿವೆ. ಈ ಪೈಕಿ 28 ಪಕ್ರರಣಗಳಲ್ಲಿ ಶಿಕ್ಷೆ ಪ್ರಕಟವಾಗಿವೆ.

### ಕುದೂರು ಪೊಲೀಸ್ ಠಾಣೆ: ಅಂತರ್ ರಾಜ್ಯ ಸರಗಳ್ಳರ ಬಂಧನ

## 17.5 ಲಕ್ಷ ರೂ ಮೌಲ್ಯದ 112 ಗ್ರಾಂ ತೂಕದ, 3– ಚಿನ್ನದ ಸರಗಳು ವಶ

ರಾಮನಗರ: ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಾ.3ರಂದು ಮಹಿಳೆಯರ ಕುತ್ತಿಗೆಯಲ್ಲಿದ್ದ ಚಿನ್ನದ ಸರಗಳನ್ನು ಕಳ್ಳತ ಮಾಡಿದ್ದ ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಗಿದ್ದಾರೆ.

ಕುದೂರು ಪೊಲೀಸ್ ಠಾಣೆ ವ್ಯಾಪ್ತಿಯ ಕಳ್ಳಿಪಾಳ್ಯ ಗ್ರಾಮದಲ್ಲಿ ನಡೆದ ಭಕ್ತ ಮುನೇಶ್ವರ ಸ್ವಾಮಿಯ ರಥೋತ್ಸವಕ್ಕೆಂದು ಮಹಿಳೆಯರು ಸೇರಿದಂತೆ ಭಕ್ತಾದಿಗಳು ಬರುತ್ತಿದ್ದರು. ಈ ವೇಳೆ ಆರೋಪಿಗಳು ಕೆಲವು ಮಹಿಳೆಯರ ಬಳಿ ವಿಳಾಸ ಕೇಳುವ ನೆಪದಲ್ಲಿ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಕುದೂರು ಪೊಲೀಸ್ ಠಾಣೆಯಲ್ಲಿ ಮೊ.ಸಂ 65/2026, ಮೊ.ಸಂ 66/2026, ಹಾಗೂ ಮೊ.ಸಂ 67/2026, ಕಲಂ: 309(4) ರೀತ್ಯಾ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು.

ಸದರಿ ಪ್ರಕರಣಗಳಲ್ಲಿ ತನಿಖೆ ಕೈಗೊಂಡ ಪೊಲೀಸರು ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಸರ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಪತ್ತೆ ಮಾಡಿ, ವಶಕ್ಕೆ ಪಡೆದು ವಿಚಾರಣೆ ನಡೆಸಿ, ಕಳ್ಳತನ ಮಾಡಲಾಗಿದ್ದ ಸುಮಾರು 17.5 ಲಕ್ಷರೂ ಮೌಲ್ಯದ, 112 ಗ್ರಾಂ ತೂಕದ 3 ಚಿನ್ನ ಸರಗಳು ಹಾಗೂ ಕೃತ್ಯಕ್ಕೆ ಬಳಕೆ ಮಾಡಿದ ಒಂದು ಕಾರನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ. ಒಟ್ಟು 3 ಪ್ರಕರಣವನ್ನು ಪತ್ತೆ ಮಾಡುವಲ್ಲಿ ಕುದೂರು ಪೊಲೀಸ್ ಠಾಣೆ ಹಾಗೂ ಮಾಗಡಿ ಉಪ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿಗಳ ತಂಡವು ಯಶಸ್ವಿಯಾಗಿದೆ.

# ವ್ಯಾಪಾರಿಗಳಿಗೆ ಛತ್ರಿಗಳ ವಿತರಣೆ

## ನಗರಸಭೆವತಿಯಿಂದ ಬೀದಿ ಬದಿ ವ್ಯಾಪಾರಿಗಳಿಗೆ ಕೊಡುಗೆ

### ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡಲು ನಗರಸಭಾಧ್ಯಕ್ಷರ ತಿಳುವಳಿಕೆ



ರಾಮನಗರ: ಬೀದಿ ಬದಿ ವ್ಯಾಪಾರಿಗಳ ಹಿತಕಾಯಲು ನಗರಸಭೆ ಬದ್ದವಾಗಿದೆ. ಆದರೆ ಬೀದಿ ಬದಿ ವ್ಯಾಪಾರಿಗಳು ನಗರಸಭೆ ತೋರಿಸಿರುವ ಸ್ಥಳದಲ್ಲೇ ವ್ಯಾಪಾರ ಮಾಡಬೇಕು. ಅನ್ಯರಿಗೆ ತೊಂದರೆ ಕೊಡಬಾರದು. ಹಾಗೊಮ್ಮೆ ದೂರುಗಳ ಬಂದರೆ ಕಠಿಣ ಕ್ರಮ ಅನಿವಾರ್ಯವಾಗಲಿದೆ ಎಂದು ನಗರಸಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ಶನಿವಾರ ಬೀದಿ ಬದಿ ವ್ಯಾಪಾರಿಗಳಿಗೆ ನಗರಸಭೆ ವತಿಯಿಂದ 2025–26ನೇ ಸಾಲಿನ 250 ಗುರುತಿನ ಚೀಟಿಗಳು ಮತ್ತು 150 ಛತ್ರಿಗಳನ್ನು ವಿತರಣೆ ಮಾಡಿ ಅವರು ಮಾತನಾಡಿದರು. ಮಳೆ, ಗಾಳಿ, ಬಿಸಿಲು ಎನ್ನದೆ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರ ಹಿತಕಾ ಯಲು ನಗರಸಭೆ ಬದ್ಧವಾಗಿದೆ. ಆದರೆ ವ್ಯಾಪಾರ ಮಾಡುವಾಗ ರಸ್ತೆಗೆ ಬಂದು ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ ಪೊಲೀಸರು ಮಾಹಿತಿ ಕೊಟ್ಟಿದ್ದಾರೆ. ಕ್ರಮ ಜರುಗಿಸುವ ವಾತಾವರಣ ಸೃಷ್ಟಿಸಿಕೊಳ್ಳಬೇಡಿ ಎಂದು ಅವರು ತಿಳುವಳಿಕೆ ಮೂಡಿಸಿದರು. ಈ ವೇಳೆ ನಗರಸಭೆ ಸದಸ್ಯರಾದ ನರಸಿಂಹ, ನಿಜಾಂ?ರೀಫ್, ಆರೀಫ್, ಪೌರಾಯುಕ್ತ ಡಾ.ಜಯಣ್ಣ, ಸಮುದಾಯ ಸಂಘಟಕ ಅಧಿಕಾರಿ ನಟರಾಜುಗೌಡ ಮತ್ತಿತರರು ಹಾಜರಿದ್ದರು.

### ಡೇನಲ್ಮ್ ಯೋಜನೆಯಡಿ ಸವಲತ್ತು

**ಪಟ್ಟಣ ಪ್ರದೇಶದಲ್ಲಿ 1.530 ಕ್ಕೂ ಹೆಚ್ಚು ವ್ಯಾಪಾರಿಗಳು ರಸ್ತೆ ಬದಿಗಳಲ್ಲಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಅವರಿಗೆ ದೀನದಯಾಳ್ ಅಂತ್ಯೋದಯ ಯೋಜನೆ?ರಾಷ್ಟ್ರೀಯ ಜೀವನೋ ಪಾಯ ಅಬಿಯಾನ (ಡೇ ನಲ್ಮ್) ದಡಿ 1530 ಗುರುತಿನ ಚೀಟಿಗಳು ಮತ್ತು ನೆರಳಿನ ಆಶ್ರಯವನ್ನು ನೀಡಲು ಛತ್ರಿಗಳನ್ನು ನಗರಸಭೆ ವತಿಯಿಂದ ಉಚಿ ತವಾಗಿ ವಿತರಣೆ ಮಾಡುತ್ತಿದ್ದೇವೆ ಎಂದು ಹೇಳಿ ದರು. ಪ್ರಧಾನಮಂತ್ರಿ ಸ್ವ–ನಿಧಿ ಯೋಜನೆಯಡಿ 2,585 ಬೀದಿ ಬದಿ ವ್ಯಾಪಾರಿಗಳಿಗೆ 4 ಕೋಟಿ 27 ಲಕ್ಷ ರೂ ಸಾಲ ಸೌಲಭ್ಯಗಳನ್ನು ಒದಗಿ ಸಲಾಗಿದೆ, ಈ ಪೈಕಿ 1,702 ವ್ಯಾಪಾರಿಗಳು ಮತ್ತು ಅವರ ಕುಟುಂಬಸ್ಥರಿಗೆ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ವಿಮಾ ಯೋಜನೆಯಡಿ ವಿಮೆ ಮಾಡಿಸಲಾಗಿದೆ. ಪ್ರಧಾನಮಂತ್ರಿ ಜನ–ಧನ ಯೋಜನೆಯಡಿ 201 ವ್ಯಾಪಾಸ್ಥರಿಗೆ ಬ್ಯಾಂಕಿನಲ್ಲಿ ಜೀರೋ ಬ್ಯಾಲೆನ್ಸ್ ಖಾತೆಗಳನ್ನು ತೆರೆಯಲು ಅನುಕೂಲ ಕಲ್ಪಿಸಿದೆ ಎಂದು ತಿಳಿಸಿದರು. ಬೀದಿ ಬದಿ ವ್ಯಾಪಾರಿಗಳಿಗೆ ಮತ್ತ?ಷ್ಟ ಕಾರ್ಯಕ್ರಮ ಕೊಡಲು ನಾವು ಸಿದ್ದರಿದ್ದೇವೆ ಎಂದರು.**

### ಅಧ್ಯಕ್ಷರ ಬಗ್ಗೆ ವಿದ್ಯಾರ್ಥಿ ಪರಿಷತ್ತು ಮೆಚ್ಚುಗೆ

**ಇದೇ ವೇಳೆ 2026–27ನೇ ಸಾಲಿನ ಬಜೆಟ್ ನಲ್ಲಿ ವಿವೇಕಾನಂದರ ಪುತ್ಥಳಿಗೆ 7 ಲಕ್ಷ ರೂ ಅನುದಾನ ಮೀಸಲಿಟ್ಟಿರುವುದಕ್ಕೆ ಅಧ್ಯಕ್ಷ ಕೆ.ಶೇ?ಾದ್ರಿ ಅವರನ್ನು ವಿದ್ಯಾರ್ಥಿ ಪರಿ?ತ್ತು ಹಾಗೂ ಸಮಿತಿಯ ಮುಖಂಡರುಗಳು ಸನ್ಮಾನಿಸಿ ಗೌರವಿಸಿದರು.**

# ಯಶಸ್ವಿನಿ ಯೋಜನೆ: ನೋಂದಾಯಿಸಿಕೊಳ್ಳಿ

ಮಡಿಕೇರಿ:–2025–26ನೇ ಸಾಲಿಗೆ ಯಶಸ್ವಿನಿ ಯೋಜನೆಯಡಿ ಸದಸ್ಯರನ್ನು ನೋಂದಾಯಿಸಲು ಮಾರ್ಚ್, 24 ಕೊನೆಯ ದಿನವಾಗಿದೆ. ಆದ್ದರಿಂದ ಈ ಯೋಜನೆಯಲ್ಲಿ ಅರ್ಹ ಸದಸ್ಯರುಗಳು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಸಮೀಪದ ಸಹಕಾರ ಸಂಘಗಳಲ್ಲಿ ಯೋಜನೆಯ ಸದಸ್ಯತ್ವ ಪಡೆದುಕೊಂಡು ಈ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವಂತೆ ಕೋರಿದೆ.

ಹೆಚ್ಚಿನ ಮಾಹಿತಿಗೆ ಸಮೀಪದ ಸಹಕಾರ ಸಂಘ ಅಥವಾ ಈ ಕಚೇರಿಯ ದೂ.ಸಂ.08272–228519 ನ್ನು ಸಂಪರ್ಕಿಸಬಹುದು ಎಂದು ಸಹಕಾರ ಸಂಘಗಳ ಉಪನಿಬಂಧಕರು ತಿಳಿಸಿದ್ದಾರೆ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು**

**ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ, ಮೈಸೂರು–570 025.**

**E-Mail:apmcmysore@rediffmail.com apmcmys@gmail.com**

**ದೂರವಾಣಿ: 0821–2482389**

**ಸಂ. ಕೃಉಮಾಸ(ಮೈ)/ 2619 /2025–26** **ದಿನಾಂಕ: 05.03.2026**

**ಪ್ರಕಟಣೆ**

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬಂಡೀಪಾಳ್ಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಸಗಟು ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಡಿ ನಿರ್ಮಿಸಿರುವ 20 ಸಂಖ್ಯೆ ಅಂಗಡಿಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ 1966 ನಿಯಮ 1968 ಮತ್ತು 2004ರ ಆಸ್ತಿ ಹಂಚಿಕೆ ನಿಯಮ 13 ರನ್ವಯ ಕೇಳಿದಾಗ ಬಿಟ್ಟು ಕೊಡುವ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಸಮಿತಿಯಿಂದ ಅಧಿಕೃತ ಪರವಾನಗಿ ಪಡೆದ ನೋಂದಾಯಿತ ತರಕಾರಿ ಉತ್ಪನ್ನಗಳ ವ್ಯಾಪಾರ ವಹಿವಾಟು ನಡೆಸುವ ಅರ್ಹ ದಲ್ಲಾಲರುಗಳಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಕಟ್ಟಡದ ವಿವರ | ಮೀಸಲಿರಿಸಿರುವ ವರ್ಗ | ನಿಗಧಿಪಡಿಸಿರುವ ಮಾಸಿಕ ಲೀವ್ & ಲೈಸನ್ಸ್ ಶುಲ್ಕ | ಮುಂಗಡ ಠೇವಣಿ | ನೊಂದಣಿ ಶುಲ್ಕ (ರೂ.) | ಅರ್ಜಿ ಶುಲ್ಕ (ತೆರಿಗೆ ಪ್ರತ್ಯೇಕ) (ರೂ.) |
|---|---|---|---|---|---|---|
| 1 | ಅಂಗಡಿಮಳಿಗೆ ಸಂಖ್ಯೆ–167 | ಸಾಮಾನ್ಯ | 4,097–00 | 8,194–00 | 500–00 | 1,000–00 |
| 2 | ಅಂಗಡಿಮಳಿಗೆ ಸಂಖ್ಯೆ–168 | ಸಾಮಾನ್ಯ | 3,986–00 | 7,972–00 | | |
| 3 | ಅಂಗಡಿಮಳಿಗೆ ಸಂಖ್ಯೆ–169 | ಪ.ಜಾತಿ | 3,986–00 | 7,972–00 | | |
| 4 | ಅಂಗಡಿಮಳಿಗೆ ಸಂಖ್ಯೆ–170 | ಸಾಮಾನ್ಯ | 4,097–00 | 8,194–00 | | |
| 5 | ಅಂಗಡಿಮಳಿಗೆ ಸಂಖ್ಯೆ–171 | ಸಾಮಾನ್ಯ | 11,501–00 | 23,002–00 | | |
| 6 | ಅಂಗಡಿಮಳಿಗೆ ಸಂಖ್ಯೆ–172 | ಎಫ್.ಪಿ.ಓ. | 11,232–00 | 22,464–00 | | |
| 7 | ಅಂಗಡಿಮಳಿಗೆ ಸಂಖ್ಯೆ–173 | ಸಾಮಾನ್ಯ | 11,232–00 | 22,464–00 | | |
| 8 | ಅಂಗಡಿಮಳಿಗೆ ಸಂಖ್ಯೆ–174 | ಸಾಮಾನ್ಯ | 11,232–00 | 22,464–00 | | |
| 9 | ಅಂಗಡಿಮಳಿಗೆ ಸಂಖ್ಯೆ–175 | ಪ.ಜಾತಿ | 11,232–00 | 22,464–00 | | |
| 10 | ಅಂಗಡಿಮಳಿಗೆ ಸಂಖ್ಯೆ–176 | ಸಾಮಾನ್ಯ (ಮಹಿಳೆ) | 11,232–00 | 22,464–00 | | |
| 11 | ಅಂಗಡಿಮಳಿಗೆ ಸಂಖ್ಯೆ–177 | ಸಾಮಾನ್ಯ | 12,718–00 | 25,436–00 | | |
| 12 | ಅಂಗಡಿಮಳಿಗೆ ಸಂಖ್ಯೆ–178 | ಸಾಮಾನ್ಯ | 9,710–00 | 19,420–00 | | |
| 13 | ಅಂಗಡಿಮಳಿಗೆ ಸಂಖ್ಯೆ–179 | ಪ.ಪಂಗಡ | 9,777–00 | 19,554–00 | | |
| 14 | ಅಂಗಡಿಮಳಿಗೆ ಸಂಖ್ಯೆ–180 | ಸಾಮಾನ್ಯ (ಮಹಿಳೆ) | 9,886–00 | 19,772–00 | | |
| 15 | ಅಂಗಡಿಮಳಿಗೆ ಸಂಖ್ಯೆ–181 | ಸಾಮಾನ್ಯ | 10,017–00 | 20,034–00 | | |
| 16 | ಅಂಗಡಿಮಳಿಗೆ ಸಂಖ್ಯೆ–182 | ಸಾಮಾನ್ಯ | 10,128–00 | 20,256–00 | | |
| 17 | ಅಂಗಡಿಮಳಿಗೆ ಸಂಖ್ಯೆ–183 | ಸಾಮಾನ್ಯ | 10,485–00 | 20,970–00 | | |
| 18 | ಅಂಗಡಿಮಳಿಗೆ ಸಂಖ್ಯೆ–184 | ಸಾಮಾನ್ಯ | 6,022–00 | 12,044–00 | | |
| 19 | ಅಂಗಡಿಮಳಿಗೆ ಸಂಖ್ಯೆ–185 | ಸಾಮಾನ್ಯ | 5,954–00 | 11,908–00 | | |
| 20 | ಅಂಗಡಿಮಳಿಗೆ ಸಂಖ್ಯೆ–186 | ಪ.ಜಾತಿ (ಮಹಿಳೆ) | 6,030–00 | 12,060–00 | | |

**1)** ನೋಂದಣಿಯಾದ ದಲ್ಲಾಲರು ಸಮಿತಿಯಿಂದ ಅಂಗಡಿಮಳಿಗೆ ಹಂಚಿಕೆಗಾಗಿ ಅರ್ಜಿ ಫಾರಂ ಪಡೆಯಲು ಕೊನೆಯ ದಿ:23.03.2026 ಸಂಜೆ 5.00 ಗಂಟೆಯೊಳಗಾಗಿ. **2)** ಭರ್ತಿ ಮಾಡಿದ ನಿಗಧಿತ ಅರ್ಜಿ ಫಾರಂಗಳನ್ನು ದ್ವಿಪ್ರತಿಗಳಲ್ಲಿ ಸಲ್ಲಿಸಲು ಕೊನೆಯ ದಿ: 26.03.2026 ಸಂಜೆ 5–00 ಗಂಟೆಯೊಳಗಾಗಿ. **3)** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ)ಶಾಸನ 1966 ನಿಯಮ 1968 ಮತ್ತು 2004ರ ಆಸ್ತಿ ಹಂಚಿಕೆ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. **4)** ಆಸ್ತಿ ಹಂಚಿಕೆ ನಿಯಮ–2004ರ ನಿಯಮ–17 ರನ್ವಯ ಸರ್ಕಾರವು ನಿರ್ಧಿಷ್ಟಪಡಿಸಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮಳಿಗೆ ಸಂ. 169,175,179,186 ಗಳನ್ನು ಮೀಸಲಿರಿಸಲಾಗಿದೆ. ಒಂದುವೇಳೆ ಈ ವರ್ಗದಡಿ ಯಾವುದೇ ಅರ್ಜಿಗಳು ಸ್ವೀಕೃತಗೊಳ್ಳದೇ ಇದ್ದಲ್ಲಿ ಆ ಮಳಿಗೆಯನ್ನು ಬೇರೆ ವರ್ಗಗಳಿಗೆ ವರ್ಗಾಯಿಸದೆ ಹಾಗೆಯೇ ಕಾಯ್ದಿರಿಸಲಾಗುವುದು. **5)** ಅರ್ಜಿ ಶುಲ್ಕ ಹಾಗೂ ನೊಂದಣಿ ಶುಲ್ಕವನ್ನು ಕಾರ್ಯದರ್ಶಿ, ಕೃ.ಉ.ಮಾ.ಸ.,ಮೈಸೂರು ಇವರ ಹೆಸರಿಗೆ ಡಿ.ಡಿ. ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು. **6)** ರೈತ ಉತ್ಪಾದನಾ ಸಂಸ್ಥೆಗಳಿಗೆ ಮೀಸಲಾಗಿರಿಸಲಾಗಿರುವ ಅಂಗಡಿಮಳಿಗೆಗಳಿಗೆ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಸಾಮಾನ್ಯ ವರ್ಗದಡಿ ಹಂಚಿಕೆಗೆ ಪರಿಗಣಿಸಲಾಗುವುದು. **7)** ಅತಿ ಹೆಚ್ಚು ಬಾಡಿಗೆ ದರದ ಡಿ.ಡಿ. ಯನ್ನು ಪಡೆದು ಸಲ್ಲಿಸುವ ಪೇಟೆಕಾರ್ಯಕರ್ತರುಗಳನ್ನು ನಿಯಮಾನುಸಾರ ಇತರೆ ಮಳಿಗೆಗಳ ಹಂಚಿಕೆಗೆ ಜೇಷ್ಠತೆಯ ಆಧಾರದ ಮೇಲೆ ಪರಿಗಣಿಸಲಾಗುವುದು. **8)** ಸದರಿ ಹಂಚಿಕೆಯು ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ. **9)** ಸದರಿ ಹಂಚಿಕೆಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. **10)** ಹೆಚ್ಚಿನ ವಿವರಗಳನ್ನು ರಜಾದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

**ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.,ಮೈಸೂರು** **ಸಹಿ/– ಆಡಳಿತಾಧಿಕಾರಿ, ಕೃ.ಉ.ಮಾ.ಸ.,ಮೈಸೂರು**

DIPR/DDMYS/1792/KSMCA/1009/2025-26

# ಟೈಪಿಂಗ್, ಶಾರ್ಟ್‌ಹ್ಯಾಂಡ್, ಕಂಪ್ಯೂಟರ್ ಪರೀಕ್ಷೆ: ಶ್ರೀ ವಾಣಿಜ್ಯ ವಿದ್ಯಾಸಂಸ್ಥೆ ಸಾಧನೆ

**ಡಿಸ್ಟಿಂಕ್ಷನ್ ಪಡೆದ ವಿದ್ಯಾರ್ಥಿಗಳು**

1)ಚಿಕ್ಕತಾಯಮ್ಮ
2) ಕಲಾವತಿ.ಹೆಚ್.ಎಸ್,
3) ಸೌಮ್ಯ.ಪಿ
4) ಪವನ್.ಆರ್
5) ಸಿದ್ದಪಾಜಿ
6) ದಿವ್ಯ.ಬಿ.ಎಂ
7) ಜಯಲಕ್ಷ್ಮಿ ?ಮ
8) ಕಾವ್ಯ.ಎನ್
9) ಕಿರಣ್ಕುಮಾರ್
10) ಪ್ರಜ್ಞಾ.ಜೆ
11) ಫಣಿಭೂಷಣ್
12) ರಮ್ಯ
13) ಹೇಮಂತ್ರಸಾದ್



ಚಾಮರಾಜನಗರ: ಶ್ರೀ ವಾಣಿಜ್ಯ ಮತ್ತು ಕಂಪ್ಯೂಟರ್ ವಿದ್ಯಾಸಂಸ್ಥೆಗೆ ಜನವರಿ 2026ನೇ ಸಾಲಿನ ಕಂಪ್ಯೂಟರ್/ ಟೈಪಿಂಗ್ ಮತ್ತು ಶಾರ್ಟ ಹ್ಯಾಂಡ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು ಒಟ್ಟು 14 ಡಿಸ್ಟಿಂಕ್ಷನ್, 4 ಪ್ರಥಮ ದರ್ಜೆ 4 ದ್ವಿತಿಯ ದರ್ಜೆ ಕಂಪ್ಯೂಟರ್ ಪರೀಕ್ಷೆಯಲ್ಲಿ 3 ಪ್ರಥಮ ದರ್ಜೆ, ಶೀಘ್ರಲಿಪಿಯಲ್ಲಿ 2 ಡಿಸ್ಟಿಂಕ್ಷನ್ ಶೇಕಡವಾರು 90 ಫಲಿತಾಂಶ ಬಂದಿರುತ್ತದೆ ಎಂದು ಶ್ರೀವಾಣಿಜ್ಯ ಸಂಸ್ಥೆಯ ಪ್ರಾಂಶುಪಾಲ ಆರ್.ವಿ.ಮಹದೇವಪ್ಪ ತಿಳಿಸಿದ್ದಾರೆ.

ನಗರದ ಚಮಾಲ್ ಬೀದಿ,2ನೇ ಕ್ರಾಸ್ ನಲ್ಲಿ ಇರುವ –ಶ್ರೀವಾಣಿಜ್ಯ ಮತ್ತು ಕಂಪ್ಯೂಟರ್ ವಿದ್ಯಾಸಂಸ್ಥೆಗೆ 74 ವರ್ಷ ಪೂರೈಸಿದ್ದು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದರ ಜೊತೆಗೆ 186 ವಿದ್ಯಾರ್ಥಿಗಳು ಸರ್ಕಾರ ವಿವಿಧ ಇಲಾಖೆಗಳಲ್ಲಿ ಬೆರಳಚ್ಚುಗಾರರಾಗಿ ಮತ್ತು ಶೀಘ್ರಲಿಪಿಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದರಲ್ಲಿ ಹೆಚ್ಚು ವಿದ್ಯಾರ್ಥಿಗಳು ಸರ್ಕಾರದ ನ್ಯಾಯಾಂಗ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವುದು ವಿಶೇಷವಾಗಿದೆ. ರಾಜ್ಯಕ್ಕೆ, ಜಿಲ್ಲೆಗೆ ಕೀರ್ತಿ ತಂದ ಇವರನ್ನು ನಗರದ ಹಲವಾರು ಸಂಘ, ಸಂಸ್ಥೆ ಪದಾಧಿಕಾರಿಗಳು ಮತ್ತು ಪ್ರಾಂಶುಪಾಲರು, ಕಂಪ್ಯೂಟರ್ ಮತ್ತು ಟೈಪಿಂಗ್ ಶಿಕ್ಷಕಿ ಲತಾಮಹದೇವಪ್ಪ ಅಭಿನಂದನೆ ಕೋರಿದ್ದಾರೆ.

## ಸಿದ್ದರಾಮಯ್ಯನವರೇ ಸಿಎಂ ಆಗಿರಲಿ

ಚಾಮರಾಜನಗರ, ಹನೂರು ಭಾಗದ ರೈತರ ಬಹುದಿನಗಳ ಬೇಡಿಕೆಯಾಗಿದ್ದ 490 ಕೋಟಿ ವೆಚ್ಚದ ಉಡುತೊರೆಹಳ್ಳ ಜಲಾಶಯ ಏತ ನೀರಾವರಿ ಯೋಜನೆಯನ್ನು ಸಿಎಂ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಸ್ವಾಗತಾರ್ಹವಾಗಿದ್ದು ಹನೂರು ಭಾಗದ ರೈತರ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘದ ಖಾಯಂ ಆಹ್ವಾ ನಿತರಾದ



ಹೆಗ್ಗವಾಡಿಪುರ ಮಹೇಶ್ ಕುಮಾರ್ ಅಭಿನಂದನೆ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ.. ಸಿದ್ದರಾಮಯ್ಯನವರು ವಿಶ್ವರೈತನಾಯಕರಾದ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಅವರ ಗರಡಿಯಲ್ಲಿ ಬೆಳೆದಿದ್ದ ಹಿನ್ನಲೆಯಲ್ಲಿ ಹನೂರು ಭಾಗದ ನೀರಾವರಿ ಯೋಜನೆಗೆ ಬಜೆಟ್‌ನಲ್ಲಿ 491 ಕೋಟಿ ಘೋಷಣೆ ಮಾಡಿದ್ದಾರೆ. ಇದಕ್ಕಾಗಿ ಹನೂರು ಅಜ್ಜಿಪುರದಿಂದ ವಿಧಾನಸೌಧದವರಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ರೈತರ ಮನವಿ ಮುಖ್ಯಮಂತ್ರಿಗಳಿ ಸ್ಪಂದಿಸಿರುವುದಕ್ಕೆ ಅವರಿಗೆ ಈ ಮೂಲಕ ಹೃಯದಪೂರ್ವಕ ಅಭಿನಂದನೆ ಸಲ್ಲಿಸಲಾಗುವುದು ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮುಂದುವರಿಯುವ ಮೂಲಕ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು. ಒಂದು ವೇಳೆ ಜನಾದೇಶ ಉಲ್ಲಂಘಿಸಿದರೆ ನಿಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಬೇಕಾಗುತ್ತದೆ ಎಂದರು.

# ಸೆಸ್ಕ್‌ನಲ್ಲಿ ಅರ್ಥಗರ್ಭಿತ ಲೈನ್‌ಮನ್ ದಿವಸ್ ಆಚರಣೆ

ಮೈಸೂರು: ಗ್ರಾಹಕರಿಗೆ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲು ಸಿಬ್ಬಂದಿ ಸುರಕ್ಷತೆ ಮತ್ತು ಎಚ್ಚರಿಕೆಯ ಕೆಲಸ ಅತ್ಯಂತ ಮುಖ್ಯವಾಗಿದೆ ಎಂದು ಸೆಸ್ಕ್ ಅಧ್ಯಕ್ಷ ಹಾಗೂ ಶಾಸಕ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ಮೈಸೂರಿನ ವಿ.ವಿ. ಮೊಹಲ್ಲಾದಲ್ಲಿರುವ ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ವಿಭಾಗದ ಕಚೇರಿಯಲ್ಲಿ ಶನಿವಾರ ಆಯೋ ಜಿಸಿದ್ದ ಲೈನ್‌ಮ್ಯಾನ್ ದಿವಸ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. "ಸಂಸ್ಥೆ ಮತ್ತು ಸಿಬ್ಬಂದಿ ನಡುವೆ ಪರಸ್ಪರ ನಂಬಿಕೆ ಹಾಗೂ ವಿಶ್ವಾಸದಿಂದ ಕೆಲಸ ನಡೆಯುತ್ತಿದ್ದು, ಗ್ರಾಹಕರಿಗೆ ಉತ್ತಮ ಸೇವೆ ನೀಡುವ ಜವಾಬ್ದಾರಿ ಎಲ್ಲರ ಮೇಲಿದೆ. ಹೀಗಾಗಿ ವಿದ್ಯುತ್ ಕ್ಷೇತ್ರದಲ್ಲಿ ಕೆಲಸ ಮಾಡುವ ಸಿಬ್ಬಂದಿ ಯಾವುದೇ ಅವಘಡಗಳು ಸಂಭವಿಸದಂತೆ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿದೆ. ಆದ್ದರಿಂದ ವಿದ್ಯುತ್ ಅವಘಡಗಳನ್ನು ತಗ್ಗಿಸುವಲ್ಲಿ ಹಾಗೂ



ಲೈನ್‌ಮ್ಯಾನ್‌ಗಳ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಫೀಡರ್‌ಗಳ ನಿರ್ವಹಣೆಗೆ ಕ್ರಮಕೈಗೊಳ್ಳಲಾಗಿದೆ. ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ವಿದ್ಯುತ್ ಅವಘಡಗಳನ್ನು ತಪ್ಪಿಸಬಹುದು" ಎಂದರು.

ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಮಾತನಾಡಿ, "ಸೆಸ್ಕ್ ವತಿಯಿಂದ ಮಾ.4ರಿಂದ 10ರವರೆಗೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಸಿಬ್ಬಂದಿಯ ಸುರಕ್ಷತೆ ಮಾತ್ರವಲ್ಲದೆ ಸಾರ್ವಜನಿಕರ ಸುರಕ್ಷತೆಯೂ ಅತ್ಯಂತ ಮುಖ್ಯವಾಗಿದ್ದು, ಯಾವುದೇ ವಿದ್ಯುತ್ ಅವಘಡಗಳು ಸಂಭವಿಸದಂತೆ ಎಲ್ಲರೂ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಿದೆ. ಸೆಸ್ಕ್ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಲೈನ್‌ಮ್ಯಾನ್‌ಗಳು ಅಪಾಯ ಉಂಟಾಗುವ ಸಾಧ್ಯತೆ ಇರುವ ಸ್ಥಳಗಳಿಗೆ ತೆರಳಿ, ಸಮಸ್ಯೆಗಳನ್ನು ಪರಿಶೀಲಿಸಿ ಸರಿಪಡಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡಬೇಕು. ಸುರಕ್ಷತೆ ಅತ್ಯಂತ ಪ್ರಮುಖವಾಗಿದ್ದು, ಎಲ್ಲರೂ ಈ ಬಗ್ಗೆ ಹೆಚ್ಚಿನ ಗಮನ ನೀಡಿ ಕಾರ್ಯನಿರ್ವಹಿಸಬೇಕು" ಎಂದು ಹೇಳಿದರು. ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್ ಮಾತನಾಡಿದರು. 10ಕ್ಕೂ ಹೆಚ್ಚು ಲೈನ್‌ಮ್ಯಾನ್‌ಗಳಿಗೆ ಪ್ರಶಂಸನಾ ಪತ್ರವನ್ನು ನೀಡಿ ಅಭಿನಂದಿಸಲಾಯಿತು. ಸಮಾರಂಭದಲ್ಲಿ ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ವಿವಿ ಮೊಹಲ್ಲಾ ವಿಭಾಗದ ಕಾರ್ಯಪಾಲಕ ಅಭಿಯಂತರ ಡಿ. ಸಂದೀಪ್, ಸಂಘ(659)ದ ಉಪಾಧ್ಯಕ್ಷ ಎಚ್.ವಿ. ಸಂದೀಪ್ ಸೇರಿ ಇತರರು ಇದ್ದರು.

> **"ನಮ್ಮ ಒಂದು ತಪ್ಪು ಅಥವಾ ದುಡುಕಿನ ನಿರ್ಧಾರದಿಂದ ವಿದ್ಯುತ್ ಅವಘಡಗಳು ಸಂಭವಿಸಿದರೆ ಅದು ಸಿಬ್ಬಂದಿಯ ಕುಟುಂಬಕ್ಕೆ ದೊಡ್ಡ ನಷ್ಟವಾಗುವುದರ ಜತೆಗೆ ಸಂಸ್ಥೆಗೂ ಕಪ್ಪುಚುಕ್ಕೆ ಆಗಲಿದೆ. ಆದ್ದರಿಂದ ಲೈನ್‌ಮ್ಯಾನ್‌ಗಳು ತಮ್ಮ ಸುರಕ್ಷತೆ ಜತೆಗೆ ಕುಟುಂಬ ಮತ್ತು ಸಂಸ್ಥೆಯ ಹಿತವನ್ನು ಗಮನದಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ಕೆಲಸ ಮಾಡಬೇಕು".**
>
> – **ರಮೇಶ್ ಬಂಡಿಸಿದ್ದೇಗೌಡ,** ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ.

# "ಕೆಇಬಿ ಕಚೇರಿಯಲ್ಲಿ ಲೈನ್‌ಮ್ಯಾನ್ ದಿವಸ ಆಚರಣೆ"

ಚಾಮರಾಜನಗರ, ದೇಶದ ಆರ್ಥಿಕ ವ್ಯವಸ್ಥೆಯೂ ವಿದ್ಯುತ್ ಮೇಲೆ ಅವಲಂಬಿತವಾಗಿದೆ ಅದೇರೀತಿ ನಿಮ್ಮ ಬೆವರಿನ ಶ್ರಮದಿಂದ ನಿಗಮ ನಿಂತಿದೆ ಎಂದು ಚೆಸ್ಕಾಂ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರದೀಪ್ ಹೇಳಿದರು.

ನಗರದ ಕೆಬಿಇ ಕಚೇರಿಯ ಆವರಣದಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ನಿಮಯತ ಚಾಮರಾಜನಗರ ವಿಭಾಗದ ವತಿಯಿಂದ ನಡೆದ ಲೈನ್ ಮ್ಯಾನ್ ದಿವಸ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಾ.4 ಲೈನ್‌ಮ್ಯಾನ್‌ಗಳಿಗೆ ಮುಡುಪಾಗಿರುವ ದಿನವಾಗಿದೆ. ನಮ್ಮವರು ಇವತ್ತು ಕೂಡ ಶ್ರಮವಹಿಸಿ ಕೆಲಸ ಮಾಡುತ್ತಾರೆ ರಜೆ ಇಲ್ಲ. ನಮ್ಮ ಮಾರ್ಗದಾಳುಗಳು ಶ್ರಮಜೀವಿಗಳು. ಅವರು ಇಲ್ಲದಿದ್ದರೆ ನಮ್ಮ ಇಲಾಖೆ ಸ್ಥಬ್ದ. ಆಗುತ್ತದೆ. 24*7 ವಿದ್ಯುತ್ ಸರಬರಾಜು ಮಾಡುತ್ತಿರಾ. ಗೃಹ ಬಳಕೆಯಿಂದ ಹಿಡಿದು ಎಲ್ಲದಕ್ಕೂ ವಿದ್ಯುತ್ ಮೇಲೆ ಅವಲಂಬಿತರಾಗಿದ್ದಾರೆ. ನೀವು ಎಲ್ಲಿಯ ತನಕ ಶ್ರಮವಹಿಸಿ ಕೆಲಸ ಮಾಡುತ್ತೀರಾ ಅಲ್ಲಿಯ ತನಕ ದೇಶದ ಆರ್ಥಿಕ ವ್ಯವಸ್ಥೆಯೂ ವಿದ್ಯುತ್ ಮೇಲೆ ಅವಲಂಬಿತವಾಗಿದೆ ಎಂದರು.



ನಮ್ಮ ಇಲಾಖೆಯಲ್ಲಿ ಮಾರ್ಗದಾಳುಗಳನ್ನು ಗುರುತು ಮಾಡಿ ಲೈನ್‌ಮ್ಯಾನ್ ದಿನ ಆಚರಣೆ ಮಾಡುತಿರುವುದು ನಮಗೆಲ್ಲ ಸಂತಸದ ವಿಚಾರವಾಗಿದೆ. ಎಲ್ಲರೂ ಕೂಡ ಸುರಕ್ಷತೆ ನಿಮ್ಮ ಕೆಲಸ ಮಾಡಬೇಕು. ನೀವು ಹೇಗೆ ಇನ್ನೊಂದು ಮನೆಗೆ ಬೆಳಕು. ನೀಡುತ್ತಿರೋ. ನಿಮ್ಮ ಮನೆಗೆ ನೀವೇ ದಾರಿದೀಪ, ನೀವೇ ಬೆಳಕು, ನೀವೇ ಆಧಾರಸ್ತಂಭ ಅನ್ನುವುದನ್ನು ಮರೆಯಬೇಡಿ. ಆಗಾಗಿ ಸುರಕ್ಷತೆಯಿಂದ ಕೆಲಸ ಮಾಡಬೇಕು ನಿಗಮಕ್ಕೆ ನೀವೇ ಆಧಾರಸ್ತಂಭ, ಯಾವುದೇ ಅಧಿಕಾರಿ, ಉನ್ನತ ಅಧಿಕಾರಿಗಳು ಇರಬಹುದು. ನಮ್ಮ ನಿಗಮ ನಿಂತಿರುವುದು ನಿಮ್ಮ ಮೇಲೆ,... ನಿಮ್ಮಗಳ ಶ್ರಮದ ಮೇಲೆ. ಲೈನ್ ಮ್ಯಾನ್ ದಿನಾಚರಣೆ ನಿಮಗೆ ಶುಭವಾಗಲಿ ಎಂದರು.

ಆರೋಗ್ಯ ಮತ್ತು ಇಲಾಖೆಯ ಕರ್ತವ್ಯ ನಿರ್ವಹಣೆ ಸುರಕ್ಷತೆ ಕುರಿತು ಕಾರ್ಯಾಗಾರ ನಡೆಯಿತು. ಕಾರ್ಯಕ್ರಮದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಪ್ರಶಾಂತ್, ಧ್ರುಪದ್, ಮಹೇಶ್, ಸಂಧ್ಯಾ,ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ನೌಕರರ ಸಂಘದ ಅಧ್ಯಕ್ಷ ಮುರುಳೀಕೃಷ್ಣ ಸ್ವಾಮಿ, ಕಾರ್ಯದರ್ಶಿ ಸಿದ್ದರಾಜಪ್ಪ, ಎಸ್‌ಸಿ ಎಸ್ ಟಿ ಕಲ್ಯಾಣ ಸಂಸ್ಥೆ ಕೇಂದ್ರ ಸಮಿತಿ ಸದಸ್ಯ ಮಂಜುನಾಥ್, ಅಧ್ಯಕ್ಷ ಪ್ರಶಾಂತ್, ಕಾರ್ಯದರ್ಶಿ ಸೋಮೇಶ್ವರ, ಎಲ್ಲ ಸಂಘ– ಸಂಸ್ಥೆಗಳ ಪದಾಧಿಕಾರಿಗಳು, ಶಾಖಾಧಿಕಾರಿಗಳು, ಭಾಗವಹಿಸಿದ್ದರು.

# ಕುರುಬರ ಸಂಘದಿಂದ ಸಂಭ್ರಮಾಚರಣೆ

ಚಾಮರಾಜನಗರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17ನೇ ಬಜೆಟ್ ಮಂಡಿಸಿದ ಪ್ರಯುಕ್ತ ತಾಲೂಕು ಕುರುಬರ ಸಂಘದ ವತಿಯಿಂದ ಶುಕ್ರವಾರ ನಗರದಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ನಗರದ ಜೋಡಿರಸ್ತೆಯಲ್ಲಿ ತಾಲೂಕು ಕುರುಬರ ಸಂಘದ ವಾಣಿಜ್ಯ ಸಂಕೀರ್ಣದ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಚಿತ್ರ ಕಟೌಟ್ ಕ್ಷೀರಾಭಿಷೇಕ ಮಾಡಿ, ಸಾರ್ವಜನಿಕರಿಗೆ ಉಪಹಾರ ವ್ಯವಸ್ಥೆ ಮಾಡುವ ಮೂಲಕ ಸಿದ್ದರಾಮಯ್ಯ ಪರ ಜೈಕಾರ ಕೂಗಿ ಸಂಭ್ರಮಿಸಿದರು. ಈ ವೇಳೆ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕುರುಬರ ಸಂಘದ ತಾಲೂಕು ಅಧ್ಯಕ್ಷ ಉಮೇಶ್ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಮಂಡಿಸಿದ17ನೇ ಬಜೆಟ್, ರಾಜ್ಯದ ಇತಿಹಾಸದಲ್ಲೇ ದಾಖಲೆಯಾಗಿದ್ದು,ಅತಿಹೆಚ್ಚು ಬಾರಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಎಂಬ ದಾಖಲೆ ಮಾಡಿ ದ್ದಾರೆ ಎಂದು ಹೇಳಿದರು.

ಎರಡನೇ ಅವಧಿಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಒಟ್ಟು 7 ವರ್ಷ 239 ದಿನಗಳ ಕಾಲ ಅಧಿಕಾರ ನಡೆಸಿ ಮಾಜಿ ಮುಖ್ಯಮಂತ್ರಿ ಗಳಾಗಿದ್ದ



ದೇವರಾಜ ಅರಸು ದಾಖಲೆಯನ್ನು ಹಿಂದಿಕ್ಕಿದ್ದಾರೆ ಎಂದು ತಿಳಿಸಿದರು. ಬಳಿಕ ತಾಲೂಕು ಕುರುಬರ ಸಂಘದ ವತಿಯಿಂದ ಸಾರ್ವಜನಿಕ ಉಪಾಹಾರ ವಿತರಿಸುವ ಮೂಲಕ ಸಂಭ್ರಮಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ಪಿ.ನಾಗರಾಜು, ನಿರ್ದೇಶಕ ರಾದ ಶಿವಕುಮಾರ್, ನಟರಾಜು, ಮಹದೇವು, ಜಿಲ್ಲಾ ಘಟಕ ಕಾರ್ಯದರ್ಶಿ ಶಿವಲಿಂಗೇಗೌಡ, ಅಮಚವಾಡಿ ಕುಮಾರ್, ನಗರಸಭಾ ಮಾಜಿ ಸದಸ್ಯ ಕರಿನಂಜನಪುರ ಸ್ವಾಮಿ, ತಾ.ಪಂ.ಮಾಜಿ ಸದಸ್ಯ ನಂಜುಂಡಸ್ವಾಮಿ ಇತರರು ಹಾಜರಿದ್ದರು.

## ಜಗದ ಪ್ರಣತಿ ಮನೆಯ ಜ್ಯೋತಿ

ಕೃತ್ಯಗಳು ಯಾಕೆ ಇದೆಲ್ಲ ಇದಕ್ಕೆಲ್ಲ ಯಾವಾಗ ಅಂತ್ಯ ಎಂಬುದೇ ಯಕ್ಷ ಪ್ರಶ್ನೆಯಾಗಿ ಉಳಿದಿದೆ. ಮಹಿಳೆ ಎಂದರೆ ವಸ್ತುನಾ ಅಥವಾ ಸರಕುನಾ. ನೀವು ಏನೇ ಹೇಳಿ ದಿನೇ ದಿನೇ ಶಿಕ್ಷಣ ವ್ಯವಸ್ಥೆ ಹೇಗೆ ವಿಭಿನ್ನ ರೂಪ ತಾಳಿ ತಂತ್ರಜ್ಞಾನದ ಅಧೀನವಾಗುತ್ತಿದೆಯೋ ಅಂದಿನಿಂದ ಮಹಿಳೆಯ

ಸ್ಥಾನಮಾನ ಕುಂದುತ್ತ ಸಾಗುತ್ತಿರುವುದು ಕಟು ಸತ್ಯ. ಅರಿವಿದ್ದರೂ ಅರಿವಿಲ್ಲದವರಂತೆ ವರ್ತಿಸುತ ಪದೇ ಪದೇ ಅದೇ ತಪ್ಪು ಮಾಡಿದರೆ ಅದೂ ತಪ್ಪಾ? ಪ್ರತಿವರ್ಷ ಮಾರ್ಚ್ 8 ಮಹಿಳಾ ದಿನಾಚರಣೆ ಆಚರಿಸಿ ದೊಡ್ಡ ದೊಡ್ಡದಾಗಿ ಮಹಿಳೆಯ

ಬಣ್ಣಿಸಿ ಮರುದಿನ ಅದೇ ಮಹಿಳೆಯನ್ನು ದೂಷಿಸಿದರೆ ಇದು ಮಹಿಳಾ ದಿನಾಚರಣೆಗೆ ದೊರೆತ ನಿಜವಾದ ಅರ್ಥವೆ?

ಮಹಿಳೆ ಎಂದರೆ ಸಕಲವನ್ನೂ ತ್ಯಾಗ ಮಾಡಿ ಉಸಿರಿತ್ತ ಜೀವಕ್ಕೆ ನಂಬಿದ ಜೀವಗಳಿಗೆ ಆಧಾರಸ್ತಂಭ. ನೂರೆಂಟು ವಿಘ್ನಗಳು ಎದುರಾದರೂ ದಿಟ್ಟತನದಿ ಎದುರಿಸುವ ದೇವತಾ ರೂಪಿ.ಹೆಣ್ಣಿನ ವಿವಿಧ ಸ್ಥಾನಮಾನ ಅಲಂಕರಿಸುತ ಸದಾ ಮಮತೆ ಪ್ರೀತಿ ತೋರುವ ಮಮತಾಮಯಿ.ಅರಿವಿನ ಪಥವ ತೋರಿ ಅರಿವಿನಿಂದ ಜಗವ ಪರಿಚಯಿಸುವ ಅರಿವಿನ ಗುರುಯಿವಳು.ಮನೆಯನು ಅರಿವಿನಿಂದ ಬೆಳಗುವವಳೇ ಹೆಣ್ಣು ಹೆಣ್ಣಿಲ್ಲದ ಮನೆ ಕುರುಡಿದ್ದಂತೆ ಹೆಣ್ಣಿರುವ ಮನೆಯು ಸ್ವರ್ಗದ ಸಿರಿಯಂತೆ. ಪ್ರತಿ ಮನೆಗೂ ಹೆಣ್ಣೇ ಬೆಳಕು ಹಾಗಾಗಿ ಹೆಣ್ಣನು ಪೂಜ್ಯ ಭಾವದಿಂದ ಕಾಣುತ ಯಾವುದೇ ಕಟ್ಟುಪಾಡು ವಿಧಿಸದೆ ಸಮಾನತೆ ಪರಿಕಲ್ಪನೆಯಂತೆ ಎಲ್ಲ ಕ್ಷೇತ್ರದಲ್ಲಿ ಬೆಳೆಯಲು ಪ್ರಾಶಸ್ತ್ಯ ನೀಡಬೇಕು. ಹೆಣ್ಣಿನ ಕುರಿತು ಕುವೆಂಪುರವರು ಬಹಳ ಅರ್ಥಪೂರ್ಣವಾಗಿ ತಮ್ಮ ಕವಿತೆಯಲ್ಲಿ ಬಣ್ಣಿಸಿದ್ದಾರೆ.

### ಹೆಸರಿಲ್ಲದ ಹೆಸರು ನಿನಗೆ 'ಗೃಹಶ್ರೀ'!

ಹೇ ದಿವ್ಯ ಸಾಮಾನ್ಯೆ, ಮನೆಯೆಲ್ಲ ಬೆಳಗುವ ಜ್ಯೋತಿ ಹೆಣ್ಣನ್ನು ಕೇವಲ ಒಬ್ಬ ಮಹಿಳೆಯಾಗಿ ನೋಡದೆ ಮನೆಯನ್ನು ಬೆಳಗುವ ಜ್ಯೋತಿ ಎಂದು ಬಣ್ಣಿಸಿದ್ದು ಮಹಿಳೆಯ ಹಿರಿಮೆ ಗರಿಮೆಯನ್ನು ಸಾರಿ ಹೇಳುತ್ತದೆ. ಮನೆಯಲ್ಲಿ ದೀಪ ಇಲ್ಲದಿರಬಹುದು ಆದರೆ ಹೆಣ್ಣು ಇಲ್ಲದಿರೆ ಮನೆಯೇ ಅಂಧಕಾರ ಇರದು ಪ್ರೀತಿ ಮಮಕಾರ ಹಾಗಾಗಿ ಮಹಿಳೆಯು ಮನೆಯ ಪರಮಜ್ಯೋತಿ ಎಂದು ಕುವೆಂಪು ತಮ್ಮ ಕವಿತೆಯಲ್ಲಿ ಅರ್ಥಪೂರ್ಣವಾಗಿ ದೈವದತ್ತವಾಗಿ ವರ್ಣಿಸಿದ್ದಾರೆ.

ಮಹಿಳೆಯನ್ನು ಆದರದಿಂದ ಗೌರವಿಸುತ ನಯ ವಿನಯದಿಂದ ನಡೆದುಕೊಳ್ಳುತ ದೇವತೆಯಂತೆ ಕಾಣೋಣ. ಇಡೀ ಕುಟುಂಬ ಉದ್ಧಾರ ಮಾಡುವ ಜ್ಞಾನಮಯಿ ಒಂದು ಹೆಣ್ಣಿಗೆ ಶಿಕ್ಷಣ ಕೊಟ್ಟರೆ ಇಡೀ ಕುಟುಂಬ ಶಿಕ್ಷಣದಿಂದ ಬೆಳಗುತ್ತದೆ.ಪ್ರತಿಯೊಬ್ಬರೂ ಒಳ್ಳೆಯ ಭಾವದಿಂದ ಕಾಣುತ ಸದಾ ರಕ್ಷಣೆಗೆ ಕಂಕಣ ಬದ್ಧರಾಗಿರೋಣ. ಆಗಲೇ ಮಹಿಳೆಗೂ ತಾ ಮಹಿಳೆಯಾಗಿ ಹುಟ್ಟಿದ್ದಕ್ಕೂ ಸಾರ್ಥಕತೆ ಅವಳ ಬದುಕು ಪರಿಪೂರ್ಣತೆ ಹೆಣ್ಣೇ ನಮ್ಮ ಜೀವದ ಮೂಲ ಇಲ್ಲದಿರೆ ನಮಗೆಲ್ಲಿ ದೊರೆಯುತ್ತಿತ್ತು ಈ ಜಗದಲಿ ಜೀವಿಸುವ ಭಾಗ್ಯ. ಹಾಗಾಗಿ ಮಹಿಳೆಯನ್ನು ಸದಾ ಗೌರವಿಸಿ ಅವಳ ಹುಟ್ಟಿಗೆ ಅರ್ಥವ ನೀಡಿರಿ.ಹಾಗಾಗಿ ಮಹಿಳಾ ದಿನಾಚರಣೆಗೆ ಮೀಸಲಾಗದಿರಲಿ ಮಹಿಳೆಯ ಗುಣಗಾನ ನಿತ್ಯವೂ ಮಹಿಳೆಗೆ ನೀಡಿರಿ ಗೌರವದ ಸ್ಥಾನಮಾನ.

# ಬಜೆಟ್ ಮುಕ್ತ ಚರ್ಚೆಗೆ ಆಹ್ವಾನ

## ಯಾರ ಅವಧಿಯಲ್ಲಿ ಹೆಚ್ಚು ಸಾಲ ಮಾಡಿದ್ದಾರೆಂಬುದರ ಚರ್ಚೆ: ಎಂ.ಲಕ್ಷ್ಮಣ್

ಮೈಸೂರು: ಯಾರ ಅವಧಿಯಲ್ಲಿ ಹೆಚ್ಚು ಸಾಲ ಮಾಡಿದ್ದಾರೆಂಬುದರ ಕುರಿತಂತೆ ಮುಕ್ತವಾಗಿ ಚರ್ಚೆ ಮಾಡಲು ಬರುವಂತೆ ಬಿಜೆಪಿ, ಜೆಡಿಎಸ್ ಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸವಾಲು ಹಾಕಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಬಾರಿ ತೃಪ್ತಿದಾಯಕ ಬಜೆಟ್ ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ. ದೂರದೃಷ್ಠಿ, ಎಲ್ಲಾ ಜನರ, ಸಾಮಾಜಿಕ ನ್ಯಾಯಯುಳ್ಳ, ಯುವಕರು, ಮಹಿಳೆಯರು ಸೇರಿ ಎಲ್ಲರ ಒಳಗೊಂಡ ಬಜೆಟ್ ಆಗಿದೆ. ಸುಮ್ಮನೆ ಬಿಜೆಪಿ ನಾಯಕರಾದ ಅಶೋಕ್, ನಾರಾಯಣಸ್ವಾಮಿ ತೋರಿರುವ ಚೊಂಬು ಕೇಂದ್ರ ರಾಜ್ಯಕ್ಕೆ ತೋರಿರುವ ಖಾಲಿ ಬಜೆಟ್ ಆಗಿದೆ. 40–50 ಕಿ.ಮೀ ನಷ್ಟು ಮಾತ್ರ ನಮ್ಮರಾಜ್ಯದಲ್ಲಿ ಸಂಚರಿಸುತ್ತದೆ. ಈ ರೈಲು ಅಭಿವೃದ್ಧಿ ಹೊರತು ಏನೂ ನೀಡಿಲ್ಲ. ಬಿಜೆಪಿ ಮುಖಂಡರಿಗೆ ಮಾನಮಾರ್ಯಾದೆ ಇದ್ದರೆ ಸಿಎಂ ಅವರೊಟ್ಟಿಗೆ ನೇರನೇರಾ ಚರ್ಚೆಗೆ ಬನ್ನಿ ಎಂದು ಚರ್ಚೆಗೆ ಆಹ್ವಾನಿಸಿದರು.

ಜಿಡಿಪಿ, ರಾಜ್ಯದ ಒಟ್ಟಾರೆ ಜಿಡಿಪಿ, ಕೇಂದ್ರದ ಜಿಡಿಪಿ ಎಷ್ಟು ಹಾಗೆಂದರೆ ಏನೂ ಎಂದು ತಿಳಿಸಲಿ. ರಾಜ್ಯದಲ್ಲಿ ಯಾವ ಯಾವ ಸರ್ಕಾರ ಎಷ್ಟು ಸಾಲ ಮಾಡಿದ್ದಾರೆ. ಮಾಡಿರುವ ಸಾಲ ಜನರಿಗೆ ಹೋಗಿದಿಯಾ ಅಥವಾ ಯಾರದಾದರೂ ಮನೆಗೆ ಹೋಗಿದಿಯ ಎಂಬುದನ್ನು ಹೇಳಬೇಕು. ನಿಮಗೆ ಆರ್ಥಿಕ ಶಿಸ್ತಿನ ಬಗ್ಗೆ ಅರಿವಿದಿಯೇ? ಸಿದ್ದರಾಮಯ್ಯರ ಹೋಲಿಕೆ ಸರಿಯಲ್ಲ. ತಾಂತ್ರಿಕ ಅಂಶದಲ್ಲಿ ನಿಮ್ಮನ್ನು ಸೋಲಿಸುತ್ತಾರೆಂದರು.

ಕುಮಾರಸ್ವಾಮಿಯವರೇ ಜೆಡಿಪಿ ಎಂದರೇನು? ರಾಜ್ಯದ ವಿತ್ ಕೊರತೆ ಎಷ್ಟು? ಸಾಲ ಎಷ್ಟು ಮಾಡಲು ಅವಕಾಶವಿದೆ. ಆರ್ಥಿಕ ಕಾನೂನು ಇದ್ದು ಅದರೊಳಗೆ ಏನೂ ಮಾಬಹುದು ಹೇಳಿ? ಎಂದರು.

ನಿಮ್ಮ ವಿಶ್ವಗುರು ಪ್ರಧಾನಿಯಾದ ಮೇಲೆ 218



ಲಕ್ಷ ಕೋಟಿ ಮಾಡಿದ್ದಾರೆ. 1967 ರಿಂದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಬಿಟ್ಟು ಹೋಗುವ ವೇಳೆಗೆ ಒಟ್ಟಾರೆ 53 ಲಕ್ಷ ಕೋಟಿ ಸಾಲ ಮಾಡಿದ್ದರು. ಮೋದಿಯವರ ಅವಧಿಯಲ್ಲಿ 2026–27 ಅವಧಿಗೆ ಸಾಲದ ಹೊರೆ 17ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಹೀಗಿರುವಾಗ ಸಿದ್ದರಾಮಯ್ಯ ಹೋಲಿಕೆ ಸಲ್ಲದು ಎಂದರು.

8ಲಕ್ಷದ 15 ಸಾವಿರ ಕೋಟಿ ಸಾಲ ರಾಜ್ಯದ ಮೇಲೆ ಇದೆ. ಇದು ಸಿದ್ದರಾಮಯ್ಯ ಮಾಡಿಲ್ಲ, ಯಾರ್ಯಾರ ಅವಧಿಯಲ್ಲಿ ಮಾಡಿದ್ದಾರೆ ಚರ್ಚೆಗೆ ಬನ್ನಿ ಎಂದರು.

2023 ರವರೆಗೆ 5.35 ಲಕ್ಷ ಕೋಟಿ ಸಾಲವಿತ್ತು. ಮೂರು ವರ್ಷದ ಅವಧಿಯಲ್ಲಿ 2.85 ಸಾವಿರ ಕೋಟಿ ಸಿದ್ದರಾಮಯ್ಯ ಅವಧಿಯ ಸಾಲವಾಗಿದೆ. ಬಿಜೆಪಿ ಅವಧಿಯ ನಾಲ್ಕು ವರ್ಷದ ಅವಧಿಯಲ್ಲಿ 3 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಬಜೆಟ್ ಗಾತ್ರದ ಶೇ.25ರಷ್ಟಿನವರೆಗೂ ಸಾಲ ಮಾಡಬಹುದು. 1.35 ಸಾವಿರ ಕೋಟಿಯಾಗಿದ್ದು, 25ರಷ್ಟಕ್ಕಿಂತ ಕಡಿಮೆಯಿದೆ. 3.15ಕೋಟಿಯಿದೆ. 1.35ಸಾವಿರ ಕೋಟಿ ಸಾಲ ಗ್ಯಾರಂಟಿ ಹಾಗೂ ಅಭಿವೃದ್ಧಿ ಕಾಮಗಾರಿಗೆ ಮಾಡಿದ್ದಾರೆ. ಎಲ್ಲಾ ವರ್ಗದ ಮುಖಂಡರು, ಅಧಿಕಾರಿಗಳನ್ನು ಕರೆದು ಸಭೆ ನಡೆಸಿ

### ಯಾವ ಮಣ್ಣಿನ ಮಗನೂ ಅಣೆಕಟ್ಟು ಕಟ್ಟಿಲ್ಲ

ಮೈಸೂರು: ಕೃಷ್ಣ ಮೇಲ್ದಂಡೆಗೆ ಅನುದಾನ ನೀಡುತ್ತೇವೆಂದು ಕೇಂದ್ರ ಅನುದಾನ ಕೊಟ್ಟಿಲ್ಲ. ಮೇಕೆದಾಟು ಯೋಜನೆ ಅನುಮತಿ ಕೊಡುತ್ತಿಲ್ಲ. ದೇಶದಲ್ಲಿ 5000 ಅಣೆಕಟ್ಟು ನಿರ್ಮಾಣ ಹಾಗೂ ರಾಜ್ಯದಲ್ಲಿ 21 ಅಣೆಕಟ್ಟು ಕಾಂಗ್ರೆಸ್ ಕಟ್ಟಿದ್ದಾರೆ. ಮಣಿನ ಮಗ, ಮಣ್ಣಿನ ಮಕ್ಕಳು ಯಾವ ಅಣೆಕಟ್ಟು ಕಟ್ಟಿದ್ದಾರೆಂದರು. ಬಿಜೆಪಿಗರು ಬೆಂಗಳೂರಿನ ಕೆರೆಗಳನ್ನು ನುಂಗಿದ್ದಿರಿ ಎಂದು ಎಂ.ಲಕ್ಷ್ಮಣ್ ಕಿಡಿಕಾರಿದರು.

ಬಜೆಟ್ ನೀಡಿದ್ದಾರೆ ಎಂದರು.

ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಶೂನ್ಯ ಎಂದಿದ್ದಾರೆ. ಆದರೆ, ಮೈಸೂರಿಗೆ 27 ಯೋಜನೆ ನೀಡಿದ್ದಾರೆ. ತಾಲ್ಲೂಕುವಾರು 15 ಯೋಜನೆ ಸೇರಿ 41 ಯೋಜನೆ ನೀಡಿ ದಾಖಲೆ ಕೊಡುಗೆ ನೀಡಿದ್ದಾರೆ. 180 ಕೋಟಿ ರೂ. ಜಯದೇವ ಆಸ್ಪತ್ರೆ ಗೆ ನೀಡಿದ್ದಾರೆ. ಕಳೆದ ಬಾರಿ 23 ಯೋಜನೆ ನೀಡಿದ್ದಾರೆ. ಮೈಸೂರಿನ ಬಿಜೆಪಿಯವರು ನಿಮ್ಮ ಕಾಲದಲ್ಲಿ ಮೈಸೂರಿಗೆ ಏನೂ ಕೊಟ್ಟಿದ್ದೀರಿ? ಮಾತಾಡೋಣ ಬನ್ನಿ. 14 ತಿಂಗಳು ಸಿಎಂ ಆಗಿದ್ದಾಗ ಎಚ್.ಡಿ.ಕುಮಾರಸ್ವಾಮಿ 1 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ನಿಮ್ಮ ಸಾಲಕ್ಕೆ ಹೋಲಿಕೆ ಮಾಡಿ ಮಾತನಾಡಿ ಸುಮ್ಮನೆ ದೂಷಿಸುವ ಕೆಲಸ ಮಾಡುತ್ತಿದ್ದಿರಿ. ನಿತ್ಯ ಕಾಂಗ್ರೆಸ್ ಬೈಯುವ ಒಂದು ಧ್ಯೇಯ ಬಿಟ್ಟರೆ ನಿಮ್ಮಲ್ಲಿ ಯಾವುದೇ ವಿಷಯವಿಲ್ಲವೆಂದರು. 2017ರಿಂದ ಜಿಎಸ್ ಟಿ ಜಾರಿಗೊಂಡಿದ್ದು, 5ಲಕ್ಷ ಕೋಟಿ ಕೇಂದ್ರಕ್ಕೆ ಜಿಎಸ್ ಟಿ ಮೂಲಕ ನೀಡುತ್ತಿದ್ದೇವೆ. ಆರ್ಥಿಕ ಕಮಿಟಿ ನಿಯಮದ ಪ್ರಕಾರ ಶೇ.42 ರಷ್ಟು ರಾಜ್ಯಕ್ಕೆ ನೀಡಬೇಕು. ಅಂದಾಜು 2 ಲಕ್ಷಕೋಟಿ ನೀಡಬೇಕಿದೆ. ಆದರೆ, ಕೇಂದ್ರ ಕೊಡುತ್ತಿರುವುದು ಕೇವಲ ಶೇ.13 ರಷ್ಟು ಕೊಡುತ್ತಿದ್ದಾರೆ. 50ರಿಂದ 60 ಸಾವಿರ ಕೋಟಿ ಕೊಡುತ್ತಿದ್ದಾರೆ. ಇದೇ ವ್ಯವಸ್ಥೆ ಬಿಜೆಪಿ ಇರುವ ರಾಜ್ಯಗಳಲ್ಲಿಯೂ ಪಾಲಿಸುತ್ತಿದ್ದಿರಾ? ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶಕ್ಕೆ ಎಷ್ಟು ಕೊಡುತ್ತಿದ್ದಿರಿ. ನಮ್ಮ ಬಳಿ ಹಣ ಪಡೆದು ರಾಜ್ಯಕ್ಕೆ ಮಲತಾಯಿ ಧೋರಣೆ ತೋರುತ್ತಿದ್ದಾರೆಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಲ್ಲಾ ಮಾಧ್ಯಮ ವಕ್ತಾರ ಕೆ.ಮಹೇಶ್ ಉಪಸ್ಥಿತರಿದ್ದರು.

## ಸಂಚಾರ ನಿಯಮ ಉಲ್ಲಂಘನೆ: 152 ಡಿಎಲ್ ಅಮಾನತು

ಮೈಸೂರು: ಸಂಚಾರ ನಿಯಮ ಉಲ್ಲಂಘನೆ ಮಾಡಿದ ಮತ್ತು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದ 152 ವಾಹನ ಸವಾರರ ಡಿಎಲ್ ಅನ್ನು ಅಮಾನತು ಮಾಡಲಾಗಿದೆ.

ಮೈಸೂರು ಸಂಚಾರ ಪೋಲಿಸರು ಹದ್ದಿನ ಕಣ್ಣಿಟ್ಟು ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡಿದ್ದಾರೆ. ಮೈಸೂರು ನಗರ ಸಂಚಾರ ಪೊಲೀಸರು ಮಾ.1ರಿಂದ 7ರವರೆಗೆ ಸಂಚಾರ ನಿಯಮ ಉಲ್ಲಂಘನೆ ಮಾಡಿದ 111 ಕೇಸ್ ಮತ್ತು ಡ್ರಂಕ್ ಅಂಡ್ ಡ್ರೈವ್ 41 ಕೇಸ್ ದಾಖಲಿಸಿ ಅಂತವರ ವಿರುದ್ಧ ಕ್ರಮಕೈಗೊಳ್ಳಗಿದೆ. ಒಟ್ಟು 152 ಜನರ ಪರವಾಗಿ ಅಮಾನತು ಮಾಡಲಾಗಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಮಂಗಲ ಹೊಸೂರಿನಲ್ಲಿ ಗ್ರಾಮದೇವತೆ ಹಬ್ಬದ ಸಂಭ್ರಮ

### ತಲೆಯಮಲೆ ಈಡುಗಾಯಿ ಹೊಡೆದುಕೊಂಡು ಭಕ್ತಿಪರಕಾಷ್ಟೆ ಮೆರೆದ ಭಕ್ತರು

ಚಾಮರಾಜನಗರ: ತಾಲೂಕಿನ ಮಂಗಲ ಹೊಸೂರು ಗ್ರಾಮದಲ್ಲಿ



ಗ್ರಾಮದೇವತೆ ಹಬ್ಬವು 3 ದಿನಳ ಕಾಲ ಅದ್ದೂರಿಯಾಗಿ ನಡೆಯಿತು.

ಗ್ರಾಮ ದೇವತೆ ಹಬ್ಬದ ಅಂಗವಾಗಿ ಎಲ್ಲೆಡೆ ಸಂಭ್ರಮ ಮನೆ ಮಾಡಿತ್ತು. ಇದೇ ವೇಳೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಉತ್ಸವ ನಡಯಿತು ಭಾರಿ ಸಂಖ್ಯೆಯಲ್ಲಿ ಭಕ್ತರು ನೆರೆದಿದ್ದರು. ಹಬ್ಬದ ಅಂಗವಾಗಿ ಗ್ರಾಮವನ್ನು ಹಸಿರುತೋರಣ, ವಿದ್ಯುತ್ ದೀಪಗಳಿಂದ ಶೃಂಗರಿಸಲಾಯಿತು. ಗ್ರಾಮದೇವತೆ ಉತ್ಸವದ ವೇಳೆ ತೂರನಂ ಜಯ್ಯ ಕುಟುಂಬದ ಶಿವಣ್ಣ ಹೊಸೂರು ಸೇರಿದಂತೆ ಹಲವರು ತಲೆಗೆ ಈಡುಗಾಯಿ ಒಡೆದುಕೊಂಡು ಭಕ್ತಿ ಪರಕಾಷ್ಠೆ ಮೆರೆದರು.

# ಕೊಳ್ಳೇಗಾಲದಲ್ಲಿ ಲೈನ್‌ಮ್ಯಾನ್ ದಿವಸ ಆಚರಣೆ

ಕೊಳ್ಳೇಗಾಲ: ಉಪವಿಭಾಗ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಆಶ್ರಯದಲ್ಲಿ ಲೈನ್ ಮ್ಯಾನ್ ದಿವಸವನ್ನು ಆಚರಣೆ ಮಾಡಿದರು.

ಪಟ್ಟಣದ ವೆಂಕಟೇಶ್ವರ ಮಹಲ್ ನಲ್ಲಿ ಇಂದು ನಡೆದ ಕಾರ್ಯಕ್ರಮವನ್ನು ಸೆಸ್ಕ್ ಕಾರ್ಯಪಾಲಕ ಇಂಜಿನಿಯರ್ ತಬಸ್ಸುಮ್ ಅಸ್ರಾ ಅವರು ಉದ್ಘಾಟನೆ ಮಾಡಿ ಮಾತನಾಡಿ, ಲೈನ್ ಮ್ಯಾನ್ ಜೀವ ಅಮೂಲ್ಯವಾದದ್ದು ಹಾಗಾಗಿ ಎಲ್ಲಾ ನೌಕರರು ಸಹಾ ಸಾಕಷ್ಟು ಸುರಕ್ಷತೆ ಹೊಂದುವ ಮೂಲಕ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಲೈನ್ ಮಾನ್ ಗಳು ಒತ್ತಡದ ನಡುವೆಯೂ ಜೀವ ಒತ್ತೆ ಇಟ್ಟು ಕಾರ್ಯನಿರ್ವಹಿಸುತ್ತ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುತ್ತಿರುವುದು ಶ್ಲಾಘನಿಯವಾದದ್ದು. ನೌಕರರಿಂದ ಸಾರ್ವಜನಿಕರು ಅಧಿಕಾರಿಗಳನ್ನು ಗುರುತಿಸುತ್ತಿರುವುದು ನಮ್ಮಗೆ ಹೆಮ್ಮೆ ತರುವಂತಾಗಿದೆ. ವಿದ್ಯುತ್ ಇಲಾಖೆ ಒಂದು



ಕುಟುಂಬ ಎಲ್ಲಾರು ಬಗ್ಗಟಿನಿಂದ ಕೆಲಸ ನಿರ್ವಹಿಸಿಬೇಕಿದೆ.ಎಲ್ಲಾ ಅಧಿಕಾರಿಗಳು ನಿಮ್ಮ ಜೊತೆ ಸದಾ ಇರುತ್ತವೆ. ನಿಮ್ಮ ಕಷ್ಟಗಳಲ್ಲಿ ಭಾಗಿಯಾಲಿದ್ದೇವೆ. ಏನೇ ಸಮಸ್ಯೆಯಿದ್ದರು ಮುಕ್ತವಾಗಿ ಹೇಳಿಕೊಂಡು ನಿರ್ಭಿತಿಯಿಂದ ಕೆಲಸ ನಿರ್ವಹಿಸಬೇಕಿದೆ ಎಂದರು.

ಬಳಿಕ ಉಪವಿಭಾಗದ ಕೊಳ್ಳೇಗಾಲ, ಹನೂರು, ಯಳಂದೂರು ವ್ಯಾಪ್ತಿಯ ಎಲ್ಲಾ ಶಾಖೆಗಳಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುವ ತಲಾ ಓರ್ವ ನೌಕರರಿಗೆ ವಿಭಾಗಮಟ್ಟದ ವತಿಯಿಂದ ಪ್ರಶಸ್ತಿ ನೀಡಿದರು.

ಕಾರ್ಯಕ್ರಮದಲ್ಲಿ ಸೆಸ್ಕ್ ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜು. ಎಂ, ಹನೂರು ಎಇಇ ರಂಗಸ್ವಾಮಿ, ಯಳಂದೂರು ಎಇಇ ಲಿಂಗರಾಜು, ಉಪವಿಭಾಗ ಎಇಇ ಸಂತೋಷ್, ಲೆಕ್ಕಾಧಿಕಾರಿಗಳಾದ ವಿನೋದ್, ಪ್ರಸನ್ನ, ಅಗ್ನಿಶಾಮಕ ದಳದ ಠಾಣಾಧಿಕಾರಿ ಸಿದ್ದಾರ್ಥ್.ಎಂ, ಕೇಂದ್ರ ಕಾರ್ಯಕಾರಿಣಿ ಸದಸ್ಯರು ಮಹದೇವ ಹಾಗೂ 659 ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು ಇತರರು ಇದ್ದರು.

# ವರ್ಗೀಸ್ ಸ್ಮಾರಕ ಬ್ಲಾಕ್ ಉದ್ಘಾಟನೆ

ಮೈಸೂರು: ಹಿಂದೂಸ್ತಾನ್ ಸಂಸ್ಥೆಗಳ ಸಮೂಹದ ಆಶ್ರಯದಲ್ಲಿ 2015ರಲ್ಲಿ ಡಾ. ಆನಂದ್ ಜಾಕೋಬ್ ವರ್ಗೀಸ್ ಸ್ಥಾಪಿಸಿದ ಮೈಸೂರಿನ ಹಿಂದೂಸ್ತಾನ್ ಕಾಲೇಜು ತನ್ನ ಹೊಸದಾಗಿ ನಿರ್ಮಿಸಲಾದ ಶೈಕ್ಷಣಿಕ ಕಟ್ಟಡವಾದ ಡಾ.ಕೆ.ಸಿ.ಜಿ. ವರ್ಗೀಸ್ ಸ್ಮಾರಕ ಬ್ಲಾಕ್ ಅನ್ನು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಹತ್ತು ವರ್ಷಗಳಲ್ಲಿ ಕಾಲೇಜು ಮೈಸೂರಿನಲ್ಲಿ ಉನ್ನತ ಶಿಕ್ಷಣದ ಪ್ರತಿಷ್ಠಿತ ಕೇಂದ್ರವಾಗಿ ಹೊರಹೊಮ್ಮಿದೆ. ವಿದ್ಯಾರ್ಥಿಗಳು ಮತ್ತು ಉದ್ಯಮದ ವಿಕಸನಗೊಳ್ಳುತ್ತಿರುವ ಅಗತ್ಯಗಳನ್ನು ಪೂರೈಸುವ ಮೂಲಕ ಬಿ.ಕಾಂ, ಬಿಸಿಎ, ಬಿಬಿಎ ವಾಯುಯಾನ ನಿರ್ವಹಣೆ ಮತ್ತು ಎಂ.ಕಾಂ ಸೇರಿದಂತೆ ಪದವಿಪೂರ್ವ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನೀಡುತ್ತದೆ ಎಂದರು.

ಹಿಂದೂಸ್ತಾನ್ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಆನಂದ್ ಜಾಕೋಬ್ ವರ್ಗೀಸ್ ಮಾತನಾಡಿ, ಎಚ್‌ಜಿಐ ಸಂಸ್ಥಾಪಕ ಡಾ.ಕೆ.ಸಿ.ಜಿ. ವರ್ಗೀಸ್ ಪ್ರದರ್ಶಿಸಿದ ಶಿಕ್ಷಣದಲ್ಲಿನ ಶ್ರೇಷ್ಠತೆಯ ದೃಷ್ಟಿಕೋನ ಮತ್ತು ಸಮರ್ಪಣೆಯನ್ನು ಪ್ರತಿಬಿಂಬಿಸುತ್ತದೆ ಹೊಸ ಬ್ಲಾಕ್ ಅನ್ನು ಕಾಲೇಜಿನ ಶೈಕ್ಷಣಿಕ ಪರಿಸರವನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾಗಿದೆ. ಆಧುನಿಕ ತರಗತಿ ಕೊಠಡಿಗಳು,




ಅತ್ಯಾಧುನಿಕ ಕಲಿಕಾ ಸೌಲಭ್ಯಗಳು ಮತ್ತು ಸಂಸ್ಥೆಯ ಬೆಳೆಯುತ್ತಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಬೆಂಬಲಿಸಲು ಮತ್ತು ಸಮಗ್ರ ವಿದ್ಯಾರ್ಥಿ ಅಭಿವೃದ್ಧಿ ಯನ್ನು ಬೆಳೆಸಲು ನವೀನ ಸ್ಥಳಗಳನ್ನು ಒಳಗೊಂಡಿದೆ ಎಂದರು.ಕಾರ್ಯಕ್ರಮದಲ್ಲಿ ಮಲಂಕರ ಮಾರ್ ಥೋಮ ಸಿರಿಯನ್ ಚರ್ಚ್‌ನ ಬಿಷಪ್ ರೆವರೆಂಡ್ ಡಾ.ಗ್ರೆಗೋರಿಯೊಸ್ ಮಾರ್ ಸ್ಟೆಫನೋಸ್ ಎಪಿಸ್ಕೋಪಾ ಭಾಗವಹಿಸಿದ್ದರು. ಹಿಂದೂಸ್ತಾನ್ ಸಂಸ್ಥೆಗಳ ಸಮೂ ಹದ ಉಪಾಧ್ಯಕ್ಷ ಡಾ. ಅಶೋಕ್ ಜಾರ್ಜ್ ವರ್ಗೀಸ್, ಹಿಂದೂಸ್ತಾನ್ ಶೈಕ್ಷಣಿಕ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಡಾ.ಆನಿ ಜಾಕೋಬ್, ಹಿಂದೂಸ್ತಾನ್ ಸಂಸ್ಥೆಗಳ ಸಮೂಹದ ಉಪನಿರ್ದೇಶಕ ಎನಿಡ್ ವರ್ಗೀಸ್ ಜಾಕೋಬ್, ಹಿಂದೂಸ್ತಾನ್ ಶೈಕ್ಷಣಿಕ ಮತ್ತು ಚಾರಿಟೇಬಲ್ ಟ್ರಸ್ಟ್‌ನ ನಿವಾಸ ಸಲಹೆಗಾರ ವಿವೇಕ್ ರೆಡ್ಡಿ ಉಪಸ್ಥಿತರಿದ್ದರು.

### ಪತ್ರಕರ್ತರ ಭವನದಲ್ಲಿ ನಡೆದ ಸಂವಾದ

# ಜಿಲ್ಲೆಯ ಅಭಿವೃದ್ಧಿಗೆ ವೇಗ: ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ, ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಎಲ್ಲರ ಸಹಕಾರ ಪಡೆದು ಜಿಲ್ಲೆಯ ಅಭಿವೃದ್ಧಿಗೆ ವೇಗ ನೀಡಲು ಬಯಸುವುದಾಗಿ ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಸಂವಾದ ದಲ್ಲಿ ಭಾಗವಹಿಸಿ ಮಾತನಾಡಿದರು. ತಾವು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಎಲ್ಲಾ ಕಡೆ ಭೇಟಿ ನೀಡಿ ಸಮಸ್ಯೆಗಳನ್ನು ತಿಳಿದುಕೊಂಡು ಬಗೆಹರಿಸುವ ಬಗ್ಗೆ ಪ್ರಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಸ್ವಚ್ಛತೆ, ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಬೀದಿ ದೀಪ ಸೇರಿದಂತೆ ಮೂಲಭೂತ ಸೌಲಭ್ಯಗಳ ಸೇವೆ ಸಾರ್ವಜನಿಕರಿಗೆ ಸಮರ್ಪಕವಾಗಿ ಸಿಗಬೇಕು ಎಂಬ ಉದ್ದೇಶದಿಂದ ಈಗಾಗಲೇ ಅಧಿಕಾರಿಗಳ ಸಭೆ ನಡೆಸಿ ಸಲಹೆ– ಸೂಚನೆ ನೀಡಿದ್ದೇನೆ. ಕೆಲವು ವಾರ್ಡುಗಳಿಗೆ ಖುದ್ದಾಗಿ ಭೇಟಿ ನೀಡಿ ನಿವಾಸಿಗಳಿಂದ ಅಹವಾಲು ಕೇಳಿ ಬಗೆಹರಿಸುವ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದರು.




### ಜಿಲ್ಲೆಯ ಅಭಿವೃದ್ಧಿ ಒತ್ತು

ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಕಳಚುವ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಎಲ್ಲರ ಸಹಕಾರ ಪಡೆದು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶ ಗಳಿವೆ. ಬಿಳಿಗಿರಿರಂಗನ ಬೆಟ್ಟ, ಮಲೆ ಮಹದೇಶ್ವರ ಬೆಟ್ಟ, ಭರಚುಕ್ಕಿ, ಹೊಗೇನಕಲ್, ಬಂಡೀಪುರ ಪ್ರವಾಸಿ ತಾಣಗಳು ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದಂತಿವೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪ್ರವಾಸಿ ತಾಣಗಳನ್ನು ಆಕರ್ಷಣೀಯ ಕೇಂದ್ರಗಳನ್ನಾಗಿ ಮಾಡಿ ಪ್ರವಾಸಿಗರನ್ನು ಸೆಳೆಯಲು ರೂಪರೇಷ ಸಿದ್ದಪಡಿಸಲಾಗುವುದು ಎಂದು ತಿಳಿಸಿದರು.

ಮಾನವ– ಪ್ರಾಣಿ ಸಂಘರ್ಷ ಗಳನ್ನು ತಡೆಯುವ ಬಗ್ಗೆ ಅರಣ್ಯ ಅಧಿಕಾರಿಗಳ ಸಭೆ ಕರೆದು ಚರ್ಚೆ ನಡೆಸವುದಾಗಿ ಹೇಳಿದರು. ಜಿಲ್ಲಾ ಕೇಂದ್ರದ ಸೌಂದರ್ಯ ಹೆಚ್ಚುವಂತೆ ಒಂದು ಸುಂದರ ಉದ್ಯಾನವನ ವನ ನಿರ್ಮಿಸಬೇಕಿದೆ ಈ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸುವುದಾಗಿ ತಿಳಿಸಿದರು. ನಗರದ ರಾಮಸಮುದ್ರ ಹೌಸಿಂಗ್ ಬೋರ್ಡ್ ನಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಿಸಿರುವ ಶುದ್ದ ನೀರಿನ ಘಟಕ ಸ್ಥಗಿತಗೊಂಡು 4 ವರ್ಷಗಳಾಗಿದ್ದರೂ ಕ್ರಮ ಕೈಗೊಳ್ಳದಿರುವ ಬಗ್ಗೆ ಜಿಲ್ಲಾಧಿಕಾರಿಗಳ ಗಮನ ಸೆಳೆದಾಗ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದಾಗು ಭರವಸೆ ನೀಡಿದರು.

ಸಂವಾದ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎಸ್.ಸಿದ್ದಲಿಂಗ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಕೂರು ಎಸ್.ಪ್ರಸಾದ್ ಉಪಸ್ಥಿತರಿದ್ದರು.

# ಮುಕ್ತ ವಿವಿ ಪ್ರವೇಶಾತಿಗೆ ಅರ್ಜಿ ಆಹ್ವಾನ

**ತುಮಕೂರು:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕೆಎಸ್‌ಓಯು)ವು 2025-26ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಗೆ ಯುಜಿಸಿ ಅನುಮೋದಿತ ಶಿಕ್ಷಣ ಕ್ರಮ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಾದ ಬಿ.ಎ., ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ., ಬಿ.ಎಲ್.ಐ.ಎಸ್ಸಿ., ಬಿ.ಎಸ್.ಡಬ್ಲ್ಯೂ., ಬಿ.ಎಸ್ಸಿ (General & I.T.),ಎಂ.ಎ., ಎಂ.ಸಿ.ಜೆ., ಎಂ.ಕಾಂ., ಎಂ.ಸಿ.ಎ., ಎಂ.ಎಸ್.ಡಬ್ಲ್ಯೂ., ಎಂ.ಎಲ್.ಐ.ಎಸ್ಸಿ., ಎಂ.ಎಸ್ಸಿ., ಎಂ.ಬಿ.ಎ., ಪಿ.ಜಿ. ಸರ್ಟಿಫಿಕೇಟ್, ಡಿಪ್ಲೋಮಾ, ಸರ್ಟಿಫಿಕೇಟ್ ಪ್ರೋಗ್ರಾಮ್ಸ್ ಕೋರ್ಸುಗಳಿಗೆ ತುಮಕೂರಿನ ಕರಾಮುವಿ ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿ ಪ್ರಾರಂಭವಾಗಿದೆ.

**ಪ್ರಥಮ ವರ್ಷದ ಪ್ರವೇಶಾತಿ ಶುಲ್ಕದ ವಿವರ** :- ಪ್ರಥಮ ವರ್ಷದ ಬಿ.ಎ. ಕೋರ್ಸಿಗೆ 9,240 ರೂ., ಬಿ.ಕಾಂ-9,790 ಬಿ.ಬಿ.ಎ/ಬಿ.ಎಲ್.ಐ.ಎಸ್ಸಿ/ಎಂ.ಕಾಂ.-13,640 ರೂ., ಬಿ.ಸಿ.ಎ/ಬಿ.ಎಸ್ಸಿ-26,290 ರೂ., ಬಿ.ಎಸ್.ಡಬ್ಲ್ಯೂ-14,190 ರೂ., ಎಂ.ಎ-11,660 ರೂ., ಎಂ.ಸಿ.ಜೆ- 17,820 ರೂ., ಎಂ.ಬಿ.ಎ-32,890 ರೂ., ಎಂ.ಎಸ್ಸಿ/ಎಂ.ಸಿ.ಎ-32,670 ರೂ., ಎಂ.ಎಸ್.ಡಬ್ಲ್ಯೂ-23,430 ರೂ., ಎಂ.ಎಲ್.ಐ.ಎಸ್ಸಿ- 19,965 ರೂ.ಗಳಾಗಿದೆ.

ಯುಜಿಸಿ ನಿಯಮಾವಳಿ ಪ್ರಕಾರ ಮುಕ್ತ ವಿಶ್ವವಿದ್ಯಾನಿಲಯಗಳ ದೂರ ಶಿಕ್ಷಣದ ಪದವಿ ಮತ್ತು ಸಾಂಪ್ರದಾಯಿಕ ವಿ.ವಿ.ಗಳು ನೀಡುವ ಶಿಕ್ಷಣ ಕ್ರಮಗಳ ಪದವಿಗಳಿಗೆ ಸಮಾನವಾಗಿರುತ್ತದೆ. ಕರಾಮುವಿಯು ವಿದ್ಯಾರ್ಥಿಗಳ ಮನೆ ಬಾಗಿಲಿಗೆ ಉನ್ನತ ಶಿಕ್ಷಣ ನೀಡಲು ಪ್ರಯತ್ನಿಸುತ್ತಿದ್ದು, 10+2(ಪದವಿ ಪೂರ್ವ) ಹಾಗೂ 10+2+3(ಸ್ನಾತಕ ಪದವಿ) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಪದವಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ದೂ.ಸಂ. 0816-2955580, 9902363902, 9886112434, 7349474339 ಸಂಪರ್ಕಿಸಬಹುದು ಎಂದು ಕರಾಮುವಿ ಪ್ರಾದೇಶಿಕ ಕೇಂದ್ರ ಪ್ರಾದೇಶಿಕ ನಿರ್ದೇಶಕರಾದ ಡಾ: ವಿಜಯ್ ಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.8ರಂದು ವಿದ್ಯುತ್ ವ್ಯತ್ಯಯ

**ತುಮಕೂರು:** ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಮಾರ್ಚ್ 8ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಬರಗೂರು, ದೊಡ್ಡಬಾಣಗೆರೆ, ದ್ವಾರನಕುಂಟೆ, ತಡಕಲೂರು, ಹುಲಿಕುಂಟೆ ಪಂಚಾಯ್ತಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

# ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಮ್ ವಿಶೇಷ ಕಾರ್ಯಕ್ರಮ




**ಮೈಸೂರು:** ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಮ್ ವತಿಯಿಂದ ವಿಶೇಷ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಹಿಳಾ ಸಬಲೀಕರಣ ಹಾಗೂ ಸಮಾಜ ಸೇವೆಯಲ್ಲಿ ಗಮನಾರ್ಹ ಕೊಡುಗೆ ನೀಡುತ್ತಿರುವ ಗಣ್ಯರನ್ನು ಈ ಕಾರ್ಯಕ್ರಮದ ಮೂಲಕ ಪರಿಚಯಿಸುವ ಉದ್ದೇಶದಿಂದ ಈ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಸಮಾಜ ಸೇವೆ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಗುರುತನ್ನು ಮೂಡಿಸಿರುವ ಶ್ರೀಮತಿ ಜ್ಯೋತಿ ಮಂಜುನಾಥ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಅವರು ಮಹಾತ್ಮ ಗಾಂಧಿ ಸೇವಾ ಟ್ರಸ್ಟ್ ಸಂಸ್ಥಾಪಕರಾಗಿದ್ದು, ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಸಬಲೀಕರಣ, ಗ್ರಾಮೀಣ ಅಭಿವೃದ್ಧಿ, ಮಹಿಳಾ ಆರೋಗ್ಯ ಜಾಗೃತಿ ಮತ್ತು ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸರಳ ಜೀವನ ಹಾಗೂ ಉದಾತ್ತ ಚಿಂತನೆಯ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು, ಮಹಿಳೆಯರ ಸ್ವಾವಲಂಬನೆಗಾಗಿ ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ ಅನೇಕರಿಗೆ ಪ್ರೇರಣೆಯಾಗಿದ್ದಾರೆ. ಕಾರ್ಯಕ್ರಮದ ಸಂದರ್ಭದಲ್ಲಿ ಅವರ ಸಮಾಜ ಸೇವೆಯ ಪಯಣ, ಮಹಿಳಾ ಸಬಲೀಕರಣಕ್ಕಾಗಿ ಕೈಗೊಂಡಿರುವ ವಿವಿಧ ಯೋಜನೆಗಳು, ಶೂನ್ಯ ಕಸ ನಿರ್ವಹಣಾ ಯೋಜನೆಯಲ್ಲಿ ಪಡೆದ ಅನುಭವ, ಗ್ರಾಮೀಣ ಮಹಿಳಾ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಹಾಗೂ ಕೋವಿಡ್ ಸಂದರ್ಭದಲ್ಲಿ ಮಾಡಿದ ಸೇವಾ ಕಾರ್ಯಗಳ ಕುರಿತು ಅವರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಇದೇ ವೇಳೆ ಕುಟುಂಬ, ಸಮಾಜ ಸೇವೆ ಹಾಗೂ ನಾಯಕತ್ವದ ಹೊಣೆಗಾರಿಕೆಗಳನ್ನು ಸಮತೋಲನದಲ್ಲಿ ನಿರ್ವಹಿಸುವ ಕುರಿತು ತಮ್ಮ ಅನುಭವಗಳನ್ನು ವಿವರಿಸುವ ಜೊತೆಗೆ, ಗ್ರಾಮೀಣ ಯುವತಿಯರು ಮತ್ತು ಗೃಹಿಣಿಯರಿಗೆ ಪ್ರೇರಣಾದಾಯಕ ಸಂದೇಶವನ್ನು ನೀಡಲಿದ್ದಾರೆ.

ಈ ವಿಶೇಷ ಕಾರ್ಯಕ್ರಮವನ್ನು ಬಾನುಲಿ ನಿರೂಪಕರಾದ ಶಿವಕುಮಾರ್ ನಡೆಸಿಕೊಡಲಿದ್ದಾರೆ. ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಈ ವಿಶೇಷ ಕಾರ್ಯಕ್ರಮವು ಮಾರ್ಚ್ 8ರಂದು ಬೆಳಿಗ್ಗೆ 8.00 ಗಂಟೆಗೆ ಮತ್ತು ಸಂಜೆ 7.00 ಗಂಟೆಗೆ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಮ್ನಲ್ಲಿ ಪ್ರಸಾರವಾಗಲಿದೆ.

# ಮಹಿಳಾ ದಿನಾಚರಣೆ.... ಒಂದು ವಿಭಿನ್ನ ಒಳನೋಟ




| ವೀಣಾ ಹೇಮಂತ್‌ಗೌಡ ಪಾಟೀಲ್

ಮಾರ್ಚ್ ಎಂಟು ಬಂತೆಂದರೆ ಇಡೀ ಜಗತ್ತಿನಾದ್ಯಂತ ಮಹಿಳಾ ದಿನಾಚರಣೆಯ ಕುರಿತಾದ ಸ್ಲೋಗನ್‌ಗಳು ಅಪಾರ. ಎಲ್ಲಿ ನೋಡಿದರಲ್ಲಿ ಹೆಣ್ಣು ಮಕ್ಕಳನ್ನು, ಅವರ ಅಸ್ಮಿತೆಯನ್ನು ಹೊಗಳುವ ಪರಿ ಅಪರಂಪಾರ.

ಇಡೀ ತಿಂಗಳು ಮಹಿಳೆಯರನ್ನು ಅವರ ಕಾರ್ಯ ಚಟುವಟಿಕೆಗಳನ್ನು ಹೊಗಳಿ ಹೊನ್ನ ಶೂಲಕ್ಕೆ ಏರಿಸುವ ಮೂಲಕ ಆಕೆಯ ಮೇಲೆ ಮತ್ತಷ್ಟು ಹೊರಿಸುತ್ತಾರೆ ಭಾರ.

ಹೀಗೆ ಹೇಳಲು ಕಾರಣ ಇದೆ... ಹೆಣ್ಣು ತಾಯಿಯಾಗಿ, ಸಹೋದರಿಯಾಗಿ, ಸ್ನೇಹಿತೆಯಾಗಿ, ಪತ್ನಿಯಾಗಿ, ಮಗಳಾಗಿ ನಮ್ಮೆಲ್ಲರ ಬದುಕಿನಲ್ಲಿ ತನ್ನದೇ ಆದ ಪಾತ್ರಗಳನ್ನು ನಿಭಾಯಿಸುತ್ತಾಳೆ. ಈ ಎಲ್ಲ ಪಾತ್ರಗಳನ್ನು ನಮ್ಮ ಸಾಮಾಜಿಕ ವ್ಯವಸ್ಥೆಯು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತದೆ. ಆಯಾ ವಯೋಮಾನದ ಆದ್ಯತೆಗೆ ಅನುಗುಣವಾಗಿ ಅವರನ್ನು ಅವಲಂಬಿಸುತ್ತದೆ, ಅವರಿಂದ ಪೊರೆಯಲ್ಪಡುತ್ತದೆ ಮತ್ತು ಅನವಶ್ಯಕ ಎನಿಸಿದಾಗ ಅವರಿಂದ ದೂರ ಸರಿಯುತ್ತದೆ ಕೂಡ. ಚಿಕ್ಕಂದಿನಲ್ಲಿ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವ ತಾಯಿಯನ್ನು ಅವಲಂಬಿಸುವ ಮಗು, ಬೆಳೆದು ದೊಡ್ಡವನಾಗುತ್ತಿದ್ದಂತೆ ಒಡಹುಟ್ಟಿದ ಸಹೋದರಿಯರನ್ನು, ವಿವಾಹದ ನಂತರ ಪತ್ನಿಯನ್ನು ನಂತರ ತಮ್ಮ ಹೆಣ್ಣು ಮಕ್ಕಳು ಹಾಗೂ ವಯಸ್ಸಾದ ಸಮಯದಲ್ಲಿ ಸೊಸೆಯನ್ನು ಅವಲಂಬಿಸುತ್ತಾರೆ. ತಾನು ಅವರಿಗೆ ಹೊರೆಯಾದರೂ ಕೂಡ ಪ್ರೀತಿಯಿಂದ ಸಲಹುವ ಅವರನ್ನು, ತನಗೆ ಅವರು ಹೊರೆ ಎಂಬ ಭಾವ ಉದ್ಭವವಾದಾಗ ಅಸಹನೆ, ಅಸಮಾಧಾನಗಳು ಸಹಜ. ಅರೆ ಇದೇನಿದು ಹೀಗೆ ಹೇಳುತ್ತಾರಲ್ಲ ಹೆಣ್ಣು ಮಕ್ಕಳನ್ನು ನಾವು ಕೌಟುಂಬಿಕವಾಗಿ, ಸಾಮಾಜಿಕವಾಗಿ,ಆರ್ಥಿಕವಾಗಿ ಸಲಹುವುದಿಲ್ಲವೇ ಎಂದು ಕೇಳಬಹುದು. ಖಂಡಿತವಾಗಿಯೂ ನಿಮ್ಮ ಮಾತು ಸರಿ.

ನೀವು ಹೆಣ್ಣು ಮಕ್ಕಳನ್ನು ತಾಯಿಯಾಗಿ, ಒಡಹುಟ್ಟಿದವಳಾಗಿ, ಪತ್ನಿಯಾಗಿ, ಮಗಳಾಗಿ, ಸ್ನೇಹಿತರಾಗಿ ಖಂಡಿತವಾಗಿಯೂ ಸಲ್ಲಿಸುತ್ತೀರಿ ಆದರೆ ಓರ್ವ ಹೆಣ್ಣು ಮಕ್ಕಳನ್ನು ಕೇವಲ ಓರ್ವ ಸ್ತ್ರೀಯಾಗಿ ಭಾವಿಸಿ ಸಲಹುತ್ತೀರಾ ಎಂದು ಕೇಳಿದರೆ ನಿಮ್ಮ ಉತ್ತರ ಗೊಂದಲದಿಂದ ಕೂಡಿರುತ್ತದೆ ಅಥವಾ ಉತ್ತರಿಸಲು ಪದಗಳು ದೊರೆಯದೆ ಕಕ್ಕಾಬಿಕ್ಕಿ ಆಗುತ್ತೀರಿ.



ನಿಜ ಪುರುಷ ಸ್ವಾಮ್ಯದ ನಮ್ಮ ಈ ಸಮಾಜದಲ್ಲಿ ಪುರುಷ ಜನಾಂಗಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವವರೆಗೆ ಮಾತ್ರ ಹೆಣ್ಣು ಮಕ್ಕಳನ್ನು ಪುರಸ್ಕರಿಸಲಾಗುತ್ತದೆ ಆಕೆಯ ಎಲ್ಲ ಪಾತ್ರಗಳನ್ನು ಕೊಂಡಾಡಲಾಗುತ್ತದೆ. ಒಂದೊಮ್ಮೆ ಆಕೆ ತನ್ನ ಅಸ್ತಿತ್ವದ ಕುರಿತು ಮಾತನಾಡಿದರೆ ತನ್ನ ವೈಯುಕ್ತಿಕ ಹಿತಾಸಕ್ತಿಯ ಕುರಿತು ಯೋಚಿಸಿದಾಗ ಆಕೆ ಸ್ವಾರ್ಥಿ ಎನಿಸಿಕೊಳ್ಳುತ್ತಾಳೆ. ಕುಟುಂಬದ ಎಲ್ಲರಿಗಿಂತ ಮೊದಲು ತನ್ನ ಯೋಗ ಕ್ಷೇಮವನ್ನು ತನ್ನ ಇಷ್ಟಾನಿಷ್ಟಗಳನ್ನು ಅರಿತು ಅದರಂತೆ ನಡೆದುಕೊಳ್ಳುವ ಹೆಣ್ಣು ಮಕ್ಕಳನ್ನು ಕೆಟ್ಟದಾಗಿ ಬಿಂಬಿಸುತ್ತಾರೆ. ಬಹುಶಹ ಪುರುಷ ಸ್ವಾಮ್ಯದ ಈ ಸಮಾಜದಲ್ಲಿ ಪುರುಷರ ಈ ಧೋರಣೆಗೆ ಕೆಲಮಟ್ಟಿಗೆ ಅಲ್ಲಲ್ಲ... ಬಹಳಷ್ಟು ಮಟ್ಟಿಗೆ ಹೆಣ್ಣು ಮಕ್ಕಳು ಕೂಡ ಕಾರಣ.

ಅವರೆಂದೂ ತಮ್ಮ ಕುರಿತು ತಾವು ಚಿಂತಿಸುವುದಿಲ್ಲ ಕುಟುಂಬದ ಸರ್ವ ಸದಸ್ಯರ ಆಗು ಹೋಗುಗಳಿಗೆ ತಾವೇ ಜವಾಬ್ದಾರಿಗಾಗಿ ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಾ ತಾವು ಕೂಡ ಓರ್ವ ಸ್ವತಂತ್ರ ವ್ಯಕ್ತಿ ತಮಗೂ ಒಂದು ವ್ಯಕ್ತಿತ್ವವಿದೆ ತಮಗೂ ಕೂಡ ತಮ್ಮದೇ ಆದ ರೀತಿಯಲ್ಲಿ ಬದುಕಿನಲ್ಲಿ ಮುಂದುವರೆಯುವ, ಏನನ್ನಾದರೂ ಸಾಧಿಸುವ ಹಕ್ಕಿದೆ ಎಂಬುದನ್ನು ಅವರು ಮರೆತಿರುತ್ತಾರೆ.... ಅಕಸ್ಮಾತ್ ನೆನಪಿಟ್ಟು ತಮ್ಮ ಹಿತಾಸಕ್ತಿಯ ಕುರಿತು ಮಾತನಾಡಿದಾಗ ಗಂಡ, ಮನೆ, ಮಕ್ಕಳು, ಸಂಸಾರದ ಕುರಿತು ಕಿಂಚಿತ್ತು ಕಾಳಜಿ ಇಲ್ಲದ ಬೇಜವಾಬ್ದಾರಿ ಮನುಷ್ಯಳು ಎಂದು ಆಕೆಯನ್ನು ಈ ಸಮಾಜ ಬಿಂಬಿಸುತ್ತದೆ.... ಉದ್ದೇಶಪೂರ್ವಕವಾಗಿ ಅದನ್ನು ತಳ್ಳಿ ಹಾಕಲಾಗುತ್ತದೆ.

ಹೆಣ್ಣು ಸರ್ವ ಶಕ್ತಿವಂತಳು ನಿಜ... ಆಕೆ ಏಕಕಾಲದಲ್ಲಿ ಮನೆ, ಮಕ್ಕಳು, ಪತಿ ಕುಟುಂಬ ಹಾಗೂ ತನ್ನ ವೃತ್ತಿಯನ್ನು ನಿಭಾಯಿಸಬಲ್ಲಳು. ಎಲ್ಲವನ್ನು ನಿಭಾಯಿಸಿಯು ಕೂಡ ಪತಿಯ ಅಸಡ್ಡೆ,, ಅಸಹನೆಗಳು ಅತ್ತೆ ಮಾವರ ಕಿರಿಕಿರಿ ಮತ್ತು ಹೀಯಾಳಿಕೆಗಳು, ಮಕ್ಕಳ ಅವಕಾಶವಾದಿತನಗಳು ಆಕೆಯ ಮನಸ್ಸನ್ನು ಇನ್ನಿಲ್ಲದಂತೆ ಕಾಡುತ್ತವೆ.

ಆರ್ಥಿಕ ಭದ್ರತೆ ಆಕೆಯಲ್ಲಿ ಧೈರ್ಯವನ್ನು ತುಂಬಬಹುದು, ಆದರೆ ಕೌಟುಂಬಿಕ ಭದ್ರತೆ ಆಕೆಗೆ ಭಾವನಾತ್ಮಕ ಬೆಂಬಲ ನೀಡುತ್ತದೆ... ಇನ್ನಷ್ಟು ಸಶಕ್ತಳಾಗಿ ಕಾರ್ಯನಿರ್ವಹಿಸಲು ಆಕೆಗೆ ಸಹಾಯಕವಾಗುತ್ತದೆ. ಆತ್ಮ ತೃಪ್ತಿಯಿಂದ ಜೀವಿಸಲು ಅನುವು ಮಾಡಿಕೊಡುತ್ತದೆ.

ಈ ಪ್ರಕೃತಿ ಗಂಡು ಹೆಣ್ಣಿನಲ್ಲಿ ತಾರತಮ್ಯವನ್ನು ಮಾಡಿಲ್ಲ. ಬಹುಶಹ ಪುರುಷನಿಗಿಂತ ತುಸು ಹೆಚ್ಚಿನದನ್ನು ಆಕೆಗೆ ನೀಡಿದೆ ಬದುಕು ತನಗೆ ಕೊಡ ಮಾಡಿರುವ ಎಲ್ಲ ಪಾತ್ರಗಳನ್ನು ನಿಭಾಯಿಸುತ್ತ ಆಕೆ ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಡಿ.

ಬಹಳಷ್ಟು ಬಾರಿ ನಾವು ನೋಡಿರುವ ಕುಟುಂಬಗಳಲ್ಲಿ ಹೆಣ್ಣು ಮಕ್ಕಳನ್ನು ಅತ್ಯಂತ ರಕ್ಷಣಾತ್ಮಕವಾಗಿ ಬೆಳೆಸುತ್ತಾರೆ. ಯಾವುದೇ ರೀತಿಯ ತೊಂದರೆಗಳು ಅವರನ್ನು ಸೋಕದಂತೆ ಕಣ್ಣ ರೆಪ್ಪೆಯ ಹಾಗೆ ಅವರನ್ನು ಕಾಯುತ್ತಾರೆ.ಆದರೆ ಹೀಗೆ ಮಾಡುವ ಮೂಲಕ ಅವರು ಆಕೆಯಲ್ಲಿರುವ ಸ್ವಾಭಾವಿಕ ಪರಿಸ್ಥಿತಿಗಳನ್ನು ಎದುರಿಸುವಂತಹ ಗುಣವನ್ನು ಮೊಟಕು ಮಾಡುತ್ತಾರೆ.... ಇದು ಖಂಡಿತವಾಗಿಯೂ ಸಲ್ಲದು.

ಒಟ್ಟಿನಲ್ಲಿ ಹೆಣ್ಣು ಮಕ್ಕಳನ್ನು ಅವರು ಇರುವಂತೆಯೇ ಅವರನ್ನು ಒಪ್ಪಿಕೊಳ್ಳಬೇಕು. ಪೂಜ್ಯಶ್ರೀ ಸ್ವಾಮಿ ವಿವೇಕಾನಂದರು ಒಂದೊಮ್ಮೆ ಹೆಣ್ಣು ಮಕ್ಕಳ ಧೀ ಶಕ್ತಿಯ ಕುರಿತು ಹೇಳುವಾಗ ನೀವು ಹೆಣ್ಣು ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಿ ಸಾಕು ಉಳಿದುದನ್ನು ಅವರೇ ನಿಭಾಯಿಸುತ್ತಾರೆ ಎಂದು ಹೇಳಿದರಂತೆ. ಅಷ್ಟು ಮಟ್ಟಿಗಿನ ವಿಶ್ವಾಸ ಅವರಿಗೆ ಭಾರತದ ಮಹಿಳಾ ಶಕ್ತಿಯ ಮೇಲೆ ಇತ್ತು. ಪ್ರತಿಯೊಬ್ಬ ತಂದೆಗೂ ತನ್ನ ಮಗಳ ಮೇಲೆ ಆ ರೀತಿಯ ವಿಶ್ವಾಸ ನಂಬಿಕೆ ಮತ್ತು ಭರವಸೆ ಇರಲೇಬೇಕು. ಹಾಗೆಯೇ ತನ್ನ ಮನೆ ಮನವನ್ನು ಬೆಳಗಲು ಬರುವ ಹೆಣ್ಣು ಮಕ್ಕಳ ಮೇಲೆ ಕೂಡ ಇರಲೇಬೇಕು.

ಹೆಣ್ಣು ಮಕ್ಕಳು ಜಗವನ್ನು ಬೆಳಗುವ ಸೂರ್ಯನ ಹಾಗೆ. ಯಾವ ರೀತಿ ಸೂರ್ಯ ಅದೆಷ್ಟೇ ಬೈಸಿಕೊಂಡರೂ ಕೂಡ ತನ್ನನ್ನು ತಾನು ಉರಿಸಿಕೊಂಡು ಜಗಕೆಲ್ಲ ಬೆಳಕು, ಅನ್ನ, ಆಹಾರ ಹಾಗೂ ಬದುಕನ್ನು ನೀಡಲು ಕಾರಣನಾಗುತ್ತಾನೆಯೋ ಹಾಗೆಯೇ ಹೆಣ್ಣು ಮಕ್ಕಳು ಕೂಡ.

ಅವರನ್ನು ಬೇಶರತ್ತಾಗಿ ಗೌರವಿಸಿ, ಕರಾರುಗಳಿಲ್ಲದೆ ಪ್ರೀತಿಸಿ ತಕರಾರು ಮಾಡದೆ ಬಾಳಿಸಿ.... ಅವರ ನಗುವಿನಲ್ಲಿ ಜಗದ ಅಂದ ಅಡಗಿದೆ, ಅವರ ನೋವಿನಲ್ಲಿ ಜಗತ್ತು ಅಂಧಕಾರದಲ್ಲಿ ಮುಳುಗುತ್ತದೆ ಎಂಬ ಸತ್ಯವನ್ನು ಅರಿಯಿರಿ.... ಪ್ರತಿ ಮನೆಯಲ್ಲೂ ಮಹಿಳೆ ಕೇವಲ ತನ್ನ ಪ್ರೀತಿ ಮಮತೆ, ಅಕ್ಕರೆ, ಧೈರ್ಯ, ಸಹನೆ, ಪ್ರತಿಭೆ, ಶಾಂತಿ, ತಾಳ್ಮೆ ಸೌಂದರ್ಯ ಅಂದ ಚಂದಗಳ ಪ್ರತಿರೂಪವಾಗಲ್ಲದೆ ತಾನು ತಾನಾಗಿರುವ ಸ್ವತಂತ್ರ ವ್ಯಕ್ತಿಯಾಗಿ ರೂಪುಗೊಳ್ಳಲು ಕೂಡ ಅವಕಾಶ ಮಾಡಿಕೊಡಿ.... ಅದುವೇ ನಿಜವಾದ ಮಹಿಳಾ ದಿನಾಚರಣೆಗೆ ನಾಂದಿಯಾಗಲಿ.



# ಭಾರತದ ಭಾವೈಕ್ಯತೆಯ ಸಂತ :ಶ್ರೀ ಎಂ



ಡಾ.ಗುರು ಪ್ರಸಾದ್ ರಾವ್ ಹವಲ್ದಾರ್

ಆಧ್ಯಾತ್ಮಿಕ ಸಾಧಕರ ಪುಣ್ಯ ಭೂಮಿ ನಮ್ಮ ಭಾರತ , ಸಾವಿರಾರು ವರ್ಷಗಳಿಂದ ಅನೇಕ ಋಷಿಮುನಿಗಳು, ಯೋಗಿಗಳು, ಅವಧೂತರು , ಆಧ್ಯಾತ್ಮ ಸಾಧನೆಯಲ್ಲಿ ತೊಡಗಿ ಜನರನ್ನು, ಸಮುದಾಯಗಳನ್ನು, ಸಮಾಜವನ್ನು ಸ್ವಾಸ್ಥ್ಯ ಉನ್ನತಿಯಡೆಗೆ ಇಂದಿಗೂ ದಾರಿ ತೋರುತ್ತಿದ್ದಾರೆ ಅಂತಹವರಲ್ಲಿ ಶ್ರೀ ಎಂ ಒಬ್ಬರು.

ಶ್ರೀ ಮುಸ್ಲಿಂನಾಗಿ ಹುಟ್ಟಿ, ಭಾರತೀಯ ಅಧ್ಯಾತ್ಮಿಕ ಪರಂಪರೆಯ ಪ್ರಧಾನ ಧಾರೆಯಾಗಿರುವ ನಾಥಪಂಥದಲ್ಲಿ ಸಾಧನೆಯನ್ನೂ ಮಾಡಿದರು. ತಮ್ಮದು ನಾಥ ಪಂಥದ ಗುರುಪರಂಪರೆ ಎಂದು ಒಪ್ಪಿಕೊಳ್ಳುವ ಅವರು, ತಮ್ಮ ಹಿಂದಿನ ಜನ್ಮದ ಮಧುಕರನಾಥ ಈ ಜನ್ಮದ ಮುಮ್ತಾಜ್ ಅಲಿ ಹೆಸರಿನ ಮೊದಲಕ್ಷರ ಎಂ ಎಂದು ಅಭಿಮಾನದಿಂದ ಗುರುತಿಸಿ ಕೊಂಡವರು. ಹಿಮಾಲಯದ ಹೆಸರಾಂತ ಸಂತ ನೀಮ್ ಕರೋಲಿ ಬಾಬಾ, ಲಕ್ಷ್ಮಣ ಜೋ ಸಾಂಗತ್ಯದಲ್ಲಿ ಬೆಳೆದವರು. ದಾರ್ಶನಿಕ ಜಿಡ್ಡು ಕೃಷ್ಣಮೂರ್ತಿ, ಕೋಲ್ಕೊತಾ, ಮುಂಬಯಿನ ರಾಮಕೃಷ್ಣ ಮಿಷನ್, ಕೇರಳ-ಮಹಾರಾಷ್ಟ್ರದ ಸೂಫಿಸಂತರ ಜತೆ ದಶಕಗಳ ಕಾಲ ಇದ್ದು, ಅವರ ಅನುಭವ ಸಾರವನ್ನು ಮೈಗೂಡಿಸಿಕೊಂಡವರು.

**ಸತ್ಸಂಗ ಫೌಂಡೇಷನ್**

ಶ್ರೀ ಎಂ ವರು ಆಂದ್ರಪ್ರದೇಶದ ಮದನಪಲ್ಲಿಯಲ್ಲಿ ಸತ್ಸಂಗ ಫೌಂಡೇಷನ್ ಸ್ಥಾಪಿಸಿ ಬುಡಕಟ್ಟು ಪ್ರದೇಶದ ಮಕ್ಕಳಿಗೆ ಉಚಿತವಾಗಿ ಶಾಲೆ, ಜೊತೆಗೆ ಸಾಮಾಜಿಕ ಚಟುವಟಿಕೆಗಳು ಕೈಗೊಂಡರು, ಕೋಮುಸೌಹಾರ್ದತೆಗೆ ಧಕ್ಕೆ ಬಂದಾಗ ಅಂತಹ ಸ್ಥಳಕ್ಕೆ ಸ್ವಯಂ ಸೇವಕರು ಜತೆ ತೆರಳಿ ಶಾಂತಿ ಸ್ಥಾಪಿಸುವ ಕೈಂಕರ್ಯವನ್ನು ಕೈಗೊಳ್ಳುವುದು, ಒಟ್ಟಿನಲ್ಲಿ ಮಾನವೀಯತೆ, ಮಾನವತ್ವ ದೊಡ್ಡದು ಎನ್ನುವ ಸಂದೇಶ ಬೀರುವ ಪ್ರಯತ್ನ ಮಾಡುತ್ತಾ ಸದ್ಯ ಮದನಪಲ್ಲಿಯಲ್ಲಿ ನೆಲೆಸಿದ್ದಾರೆ.

ಸತ್ ಅಂದರೆ ಸತ್ಯ. ಸಂಗ ಅಂದರೆ ಗುಂಪು. ಕೆಲವು ಜನರು ಸೇರಿಕೊಂಡು ರಚಿಸಿರುವುದೇ ಒಂದು ಗುಂಪು. ಸತ್ಯದ ಶೋಧನೆ ನಡೆಯುತ್ತಿದೆ. ಅದುವೇ ಸತ್ಸಂಗ. ಅದು ಯಾವುದೇ ಮಾರ್ಗದಲ್ಲಿ ಇರಬಹುದು. ಜೊತೆಗೆ, ಮಾನವ ಸೇವೆಗಳನ್ನು ಕೈಗೊಳ್ಳುತ್ತಾ ಜಗತ್ತಿನಾದ್ಯಂತ ಇದಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.


ಆಧ್ಯಾತ್ಮಿಕ ಗುರುಗಳು, ಸಮಾಜ ಸುಧಾರಕರು, ಶಿಕ್ಷಣ ತಜ್ಞರು, ಲೇಖಕರು ಹಾಗೂ ವೈಶ್ವಿಕ ಭಾಷಣ-ಕಾರರೂ ಆದ ಶ್ರೀ ಎಂ (ಶ್ರೀ ಮುಲ್ತಾಜ್ ಅಲಿ) ಅವರು ಸ್ಥಾಪಿಸಿದ ಸತ್ಸಂಗ್ ಪ್ರತಿಷ್ಠಾನವು (ಖಿಖಈ) ಎಲ್ಲಾ ಸಿದ್ಧಾಂತಗಳ ಆಧ್ಯಾತ್ಮಿಕ ಅನ್ವೇಷಕರಿಗೆ ಒಂದು ಸಂಗಮ ಸ್ಥಾನವಾಗಿದೆ. ಪ್ರತಿಯೊಬ್ಬ ಮನುಷ್ಯನೂ ನಡೆದಾಡುವ ದೇವಸ್ಥಾನವಿದ್ದಂತೆ ಹಾಗೂ ಮಾನವೀಯತೆಯ ಈ ಸೇವೆಯೇ ಆರಾಧನೆಯ ಅತ್ಯುನ್ನತ ರೂಪವೆಂಬುದು ಶ್ರೀ ಎಂರವರ ಬೋಧನೆಗಳ ಮುಖ್ಯಸಾರವಾಗಿದೆ. ಉದ್ದೇಶದೊಂದಿಗೆ, ಪ್ರತಿಷ್ಠಾನವು ತನ್ನ ಚಟುವಟಿಕೆಗಳನ್ನು ಆರೋಗ್ಯ, ಪರಿಸರ, ಶಿಕ್ಷಣ ಮತ್ತು ಸಮಗ್ರ ಕ್ಷೇಮವೆಂಬ ನಾಲ್ಕು ಪ್ರಮುಖ ಕೇತ್ರಗಳಲ್ಲಿ ಹಮ್ಮಿಕೊಂಡಿದೆ.

**ಶಿಕ್ಷಣ**

ಶಿಕ್ಷಣದ ವ್ಯಾಪ್ತಿಯಲ್ಲಿ, ಸತ್ಸಂಗ್ ಫೌಂಡೇಶನ್, ಸತ್ಸಂಗ್ ವಿದ್ಯಾಲಯ, ದಿ ಪೀಪಲ್ ಟ್ರೋವ್ ಸ್ಕೂಲ್, ಚಂದಾ ಸತ್ಸಂಗ ವಿದ್ಯಾಲಯ ಲತಿರಾ ಮತ್ತು ಸತ್ಸಂಗ್ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿದೆ. ಇದರೊಂದಿಗೆ ಫೌಂಡೇಶನ್ನಿನ ಸ್ವಯಂಸೇವಕರು ದೇಶಾದ್ಯಂತ ವಿವಿಧ ಕೇಂದ್ರಗಳಲ್ಲಿ ಅವಕಾಶವಂಚಿತ ಮತ್ತು ವಿಶೇಷ ಚೇತನ ಮಕ್ಕಳಿಗಾಗಿ ತರಗತಿಗಳನ್ನು ನಡೆಸುತ್ತಿದ್ದಾರೆ.

**ಆರೋಗ್ಯ**

ಆರೋಗ್ಯ ಕ್ಷೇತ್ರದ ಪ್ರಮುಖ ಉಪಕ್ರಮಗಳಾಗಿ, ಮದನಪಲ್ಲಿಯಲ್ಲಿ 50 ಹಾಸಿಗೆಗಳ ದ್ವಿತೀಯ ಹಂತದ ಚಿಕಿತ್ಸಾಕೇಂದ್ರವಾದ 'ಸ್ವಾಸ್ಥ್ಯ




ಆಸ್ಪತ್ರೆ' ಮತ್ತು 'ಸತ್ಸಂಗ ಸ್ವಾಸ್ಥ್ಯ ಕೇಂದ್ರ' ಪ್ರಾಥಮಿಕ ಸಮುದಾಯ ಆರೋಗ್ಯ ಕೇಂದ್ರವನ್ನು ನಡೆಸಲಾಗುತ್ತಿದೆ.

**ಸತ್ಸಂಗ ಸೇವಾ ಮಿಷನ್**

**ಕೋವಿಡ್-19**

ಸಾಂಕ್ರಾಮಿಕದ ಆರಂಭಿಕ ದಿನಗಳಲ್ಲಿ ಅಶಕ್ತರು ಮತ್ತು ಮುಂಚೂಣಿ ಕಾರ್ಯಕರ್ತರ ತುರ್ತು ಅಗತ್ಯಗಳನ್ನು ಪೂರೈಸಲು ಆರಂಭವಾದ ಈ ಮಿಷನ್. ಇಂದು ವಿಶಾಲವಾಗಿ ಬೆಳೆದಿದೆ.

ವಿವಿಧ ಇದರ ಅಡಿಯಲ್ಲಿ ಭಾರತದಾದ್ಯಂತ ನಗರಗಳಲ್ಲಿ ಲಂಗರ್ ಮತ್ತು ಅನ್ನದಾನ ಸೇವೆಗಳನ್ನು ಆಯೋಜಿಸಲಾಗುತ್ತಿದೆ.

ಅನಾಥಾಶ್ರಮಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳು ಮತ್ತು ವಿಪತ್ತುಪೀಡಿತ ಪ್ರದೇಶಗಳಲ್ಲಿ ಆಹಾರ ಮತ್ತು ಪಡಿತರ ವಿತರಣೆ ಮಾಡುವುದು ಈ ಮಿಷನ್ನ ಪ್ರಮುಖ ಗುರಿಯಾಗಿದೆ.

**ಪರಿಸರ ಮತ್ತು ಜಲ ಸಂರಕ್ಷಣೆ**

'ಮೈ ಟ್ರೀ', 'ಮೈ ಭೂಮಿ' ಮತ್ತು 'ಸತ್ಸಂಗ್ ಜಲಸೇವಾ ಸಂಘಟನೆ'ಯ ಮೂಲಕ ಗಿಡಗಳನ್ನು ನೆಡುವುದು, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಮತ್ತು ಜಲ ಸ್ವಾವಲಂಬನೆಗೆ ಒತ್ತು ನೀಡಲಾಗುತ್ತಿದೆ.

ಜಲ ಸಂರಕ್ಷಣಾ ಉಪಕ್ರಮದ ಅಡಿ, ಗೋದಾವರಿ ನದಿಯ ಪುನರುಜ್ಜೀವನಕ್ಕಾಗಿ "ಅವಿರಲ್ ಗೋದಾವರಿ ಮಿಷನ್" ಮಹತ್ತ್ವದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಗೋದಾವರಿ ನದಿಯ ಉಗಮಸ್ಥಾನವಾದ ಬ್ರಹ್ಮಗಿರಿ ಯಲ್ಲಿ ಹಸಿರೀಕರಣ ಮತ್ತು ಅಸ್ತಿತ್ವದಲ್ಲಿರುವ ಜಲಕುಂಡಗಳ ಸ್ವಚ್ಛತೆಯ ಮೂಲಕ ನದಿಯು ವರ್ಷಪೂರ್ತಿ ಹರಿಯುವಂತೆ ಮಾಡುವುದು ಇದರ ಉದ್ದೇಶವಾಗಿದೆ.

ಭಾರತ್ ಯೋಗ ವಿದ್ಯಾ ಕೇಂದ್ರ, 'ದಿ ಸೇಕ್ರೆಡ್ ಗೋವ್' ಮತ್ತು 'ಆರೋಗ್ಯಂ' ಕೇಂದ್ರಗಳು ಕ್ರಮವಾಗಿ ಯೋಗ. ಆತ್ಮಾವಲೋಕನ ಶಿಬಿರಗಳು ಹಾಗೂ ಮೂಲಕ ಸಮಗ್ರ ಆರೋಗ್ಯಕ್ಕೆ ಆಯುರ್ವೇದದ ಶ್ರಮಿಸುತ್ತಿವೆ.

ಫೆಬ್ರವರಿ 2024ರಲ್ಲಿ ಸ್ಥಾಪನೆಯಾದ 'ಇಂಟರ್ ನ್ಯಾಷನಲ್ ಯೋಗ ರಿಸರ್ಚ್ ಫೌಂಡೇಶನ್', ನಂಬಿಕೆ ಮತ್ತು ವಿಜ್ಞಾನದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಪ್ರಾಚೀನ ಯೋಗ ವಿಜ್ಞಾನವನ್ನು ಆಧುನಿಕ ಸಂಶೋಧನೆಗಳೊಂದಿಗೆ ಸಮನ್ವಯಗೊಳಿಸುವ ವೇದಿಕೆಯಾಗಿದೆ.

**ಮಹಾಕುಂಭಮೇಳ 2025** ಶ್ರೀ ಎಂರವರ ನೇತೃತ್ವದಲ್ಲಿ ಪ್ರಯಾಗ್ರಾಜ್ನಲ್ಲಿ ನಡೆದ 2025ರ ಮಹಾಕುಂಭಮೇಳದ ಸಂದರ್ಭದಲ್ಲಿ 'ಯೋಗಧಾಮ್' ಸ್ಥಾಪನೆಯಾಗಿದ್ದು, ಇದು 47 ದಿನಗಳ ಕಾಲ ಅನ್ವೇಷಕರಿಗೆ ಯೋಗಾಭ್ಯಾಸ ಮತ್ತು ಪ್ರಾಚೀನ ಸಂಪ್ರದಾಯಗಳಲ್ಲಿ ಅವಕಾಶವನ್ನು ಕಲ್ಪಿಸಿದೆ.

**ಭಾರತೀಯ ಋಷಿ ಪರಂಪರೆಯ ಕೊಡುಗೆ ಕುರಿತು ವಿಸ್ಡಮ್ ಆಫ್ ಋಷೀಸ್ ,**

(Wisdom of the Rishis: The Three Upanishads (Ishavasya, Keno, Mandukya). Trans. Kamal Aswami. Satsang Communications, 2002.)

ವೇದಾಂತ, ಭಗವದ್ಗೀತೆ, ಉಪನಿಷತ್ಗಳ ಸಾರವನ್ನು ವಿವರಿಸುವ ಜ್ಯುವೆಲ್ ಆಫ್ ಲೋಟಸ್

(Jewel in the Lotus: Deeper Aspects of Hinduism. Magenta Press, 2011)

The Little Guide to Greater Glory and a Happier Life. Magenta Press, 2014.

The Upanishads: Katha - Prashna Mundaka. Magenta Press, 2017.

Shunya. Westland by Amazon, 2018.

On Meditation : Finding Infinite Bliss and Power Within. Penguin Random House India, 2019.

ಸೇರಿದಂತೆ ಹತ್ತಾರು ಪುಸ್ತಕ ಬರೆದಿದ್ದಾರೆ. ಅಲ್ಲದೇ ಶ್ರೀ ಎಂ ರ ಆತ್ಮಚರಿತ್ರೆಯಾದ

ಹಿಮಾಲಯದ ಗುರುವಿನ ಗರಡಿಯಲ್ಲಿ (Apprenticed to a Himalayan Master. Magenta Press, 2010.)ಎಂಬ ಕೃತಿ ಆಧ್ಯಾತ್ಮಿಕತೆ ಸಾಧನೆಯಲ್ಲಿ ಇರುವವರಿಗೆ ಪಥ ತೊರುವದಾಗಿದೆ, ಅದರ ಮುಂದುವರಿದ ಭಾಗವಾದ 'ಪಯಣ ನಿರಂತರ' (The Journey Continues: A sequel to Apprenticed to a Himalayan Master. Magenta Press, 2017.) ಎಂಬ ಕೃತಿಯು ಕನ್ನಡಕ್ಕೆ ಅನುವಾದಗೊಂಡು ಜನಪ್ರಿಯವಾಗಿದೆ.

ಶ್ರೀ ಎಂರವರು ಉಪನಿಷತ್ತುಗಳು, ಧ್ಯಾನದ ಕುರಿತಾದ ಹಲವಾರು ಕೃತಿಗಳು ಹಾಗೂ ಶೂನ್ಯ ಎಂಬ ಕಾದಂಬರಿಯನ್ನೂ ರಚಿಸಿದ್ದಾರೆ. ಅವರ "On Meditation Finding infinite bliss and power within" Penguin Random House ಪ್ರಕಟಿಸಿದೆ. 2020ರಲ್ಲಿ ಅವರ ಇನ್ನೆರಡು ಕೃತಿಗಳು ಪ್ರಕಟಗೊಂಡವು. ಸಣ್ಣ ಕಥಾಸಂಕಲನವಾದ "Homecoming and Other Short Stories" ಪತಂಜಲಿ ಯೋಗಸೂತ್ರಗಳ ಅನುವಾದ ಹಾಗೂ ವ್ಯಾಖ್ಯಾನವಾದ "Yoga also for the Godless", ಮೋಹಿನಿ ಕೆಂಟ್ರವರೊಂದಿಗೆ ಅವರು ಬರೆದ ಇತ್ತೀಚಿನ ಕೃತಿ "The Friend: Mind, Body and Soul, Well-Being" ಲೋಕಾರ್ಪಣೆಗೊಂಡಿತು. ಅವರ ಪುಸ್ತಕಗಳು ಅನೇಕ ಭಾರತೀಯ ಮತ್ತು ವಿದೇಶಿ ಭಾಷೆಗಳಿಗೆ ಅನುವಾದಗೊಂಡಿವೆ.

ಪ್ರಮುಖ ವಾಗ್ಮಿಗಳಾಗಿ ಶ್ರೀ ಎಂರವರು ವಿಶ್ವ ಆರೋಗ್ಯ ಸಂಸ್ಥೆ (WHO), ಸ್ವಿಟ್ಜರ್ಲೆಂಡಿನ ವಿಶ್ವಸಂಸ್ಥೆಯ ಕಚೇರಿ, ಅಮೆರಿಕಾದ ವಿಶ್ವ ಬ್ಯಾಂಕ್ ಮತ್ತು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಖಿಖಿಖಿಥಿ) ಸೇರಿದಂತೆ ಹಲವಾರು ಪ್ರತಿಷ್ಠಿತ ಸಂಸ್ಥೆಗಳಿಗೆ ಆಹ್ವಾನಿಸಲ್ಪಟ್ಟಿದ್ದಾರೆ. ಅವರು ಭಾರತ ಮತ್ತು ವಿದೇಶಗಳ ಗೂಗಲ್ ಹಾಗೂ ಯಾಹೂದಂತಹಾ ಕಾರ್ಪೊರೇಟ್ ಸಂಸ್ಥೆಗಳಲ್ಲಿ, ಮತ್ತು ಅಹಮದಾಬಾದ್, ಬೆಂಗಳೂರು, ಕೋಲ್ಕತ್ತಾ ಹಾಗೂ ಮುಂಬೈನ ಖಿಖಿಒ ಮತ್ತು ದೆಹಲಿಯ ಖಿಖಿಖಿ ಅಂತಹಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಉಪನ್ಯಾಸ ನೀಡಿದ್ದಾರೆ.

ಶ್ರೀ ಎಂ ಅವರು ಕೇಂದ್ರ ವಿಶ್ವವಿದ್ಯಾಲಯವಾದ ಮೌಲಾನಾ ಆಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿದ್ದಾರೆ. ಹಾಗೂ ದೆಹಲಿಯ IITಯ ಬೋಧಕ ವರ್ಗದ ಸದಸ್ಯರೂ ಆಗಿದ್ದಾರೆ.

ಶ್ರೀ ಎಂ ವರು ದೇಶದಲ್ಲಿ ಶಾಂತಿ, ಕೋಮು ಸೌಹಾರ್ದ, ಸಹಿಷ್ಣುತೆಗಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮಹಾಯಾತ್ರೆಯನ್ನು 2016 ಜ.12 ಸ್ವಾಮಿ ವಿವೇಕಾನಂದರ ಜಯಂತಿಯಂದು ಭರವಸೆಯ ನಡಿಗೆ ಎಂಬ ಮಹಾ ಯಾತ್ರೆ ಪ್ರಾರಂಬಿಸಿ11 ರಾಜ್ಯಗಳು 86 ಜಿಲ್ಲೆಗಳಲ್ಲಿ ಕ್ರಮಿಸಿದ ಐತಿಹಾಸಿಕ ಮಹಾ ಪಾದಯಾತ್ರೆ ಕನ್ಯಾಕುಮಾರಿಯ ಝಿರೊ ಪಾಯಿಂಟ್ನಿಂದ ಕೈಗೊಂಡು 500 ದಿನಗಳ ಕಾಲ 7500 ಕಿ.ಮೀ ಸುದೀರ್ಘ ಯಾನವು ಕಾಶ್ಮೀರ ದ ಶ್ರೀನಗರ ತಲುಪಿ ಜನರ ಮನಗೆದ್ದರು .

ಅಧ್ಯಾತ್ಮಕ್ಕೆ ಗಡಿಗಳಿಲ್ಲ. ಧರ್ಮದ ಮಿತಿಯೂ ಅದಕ್ಕಿಲ್ಲ. ಧರ್ಮದ ಜತೆ ಅಧ್ಯಾತ್ಮವನ್ನು ಹೋಲಿಸುವುದು ಸರಿ ಅಲ್ಲ. ಧರ್ಮಕ್ಕೆ ಇದು ಅನ್ವಯಿಸುವುದೇ ಇಲ್ಲ. ಯಾವುದೇ ಧರ್ಮದವರು ಅಧ್ಯಾತ್ಮವನ್ನು ಪಾಲಿಸಬಹುದು. ಮಾನವನ ಉದ್ಧಾರಕ್ಕೆ ಅಧ್ಯಾತ್ಮ ಇದೆ. ಜಾತಿ ಹಂಗೂ ಅದಕ್ಕಿಲ್ಲ. ಶಾಂತಿ ಮತ್ತು ಸೌಹಾರ್ದತೆಗಾಗಿ ಆಧ್ಯಾತ್ಮ.ನೈತಿಕತೆ ಜೀವನ ಸಾಧನೆಗೆ ಆಧ್ಯಾತ್ಮವೇ ಮಾರ್ಗ . ಸತ್ಯದ ಮಾರ್ಗದಲ್ಲಿ ಜೀವನ ಸಾಗಿಸಲು, ಇನ್ನೊಬ್ಬರ ಜತೆ ಉತ್ತಮ ಬಾಂಧವ್ಯ ಹೊಂದುವುದೇ ಆಧ್ಯಾತ್ಮ. ಇಂತಹ ಮಾರ್ಗ ಅನುಸರಿಸಲು ಇಂದಿನ ಯುವಕರು ಉತ್ಸುಕರಾಗಿದ್ದಾರೆ. ಅವರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕಾಗಿದೆ ಅಷ್ಟೇ. ಯುವಕರಿಂದ ದೊರೆಯುತ್ತಿರುವ ಪ್ರತಿಕ್ರಿಯೆ ಅದ್ಭುತ. ಅವರಲ್ಲಿ ಸೃಜನಶೀಲ ಯೋಜನೆಗಳಿವೆ. ಗುರು ಯಾವಾಗಲು ಸದಾ ಶಿಷ್ಯನ ಜತೆ ಸರಳ ರೀತಿಯಲ್ಲಿ ಮಾತನಾಡುತ್ತಿರಬೇಕು. ಗುರು ಮತ್ತು ಶಿಷ್ಯನ ನಡುವೆ ಅಂತರ ಇರಬಾರದು. ಅದು ಕುಳಿತುಕೊಳ್ಳುವ ಜಾಗವೇ ಇರಬಹುದು. ಆಗ ಉತ್ತಮ ಸಂಪರ್ಕ ಮತ್ತು ಬೋಧನೆ ಸಾಧ್ಯ. ಎಂ ಅಂದರೆ ಮನುಷ್ಯ, ಮಾನವತಾವಾದ.

ಒಬ್ಬ ವ್ಯಕ್ತಿ ಕ್ರೈಸ್ತ ಧರ್ಮದಲ್ಲಿ ಜನಿಸಿ ಹಿಂದೂಗಳ ಮನೆಯಲ್ಲಿ ಬೆಳೆದರೆ ಆತನನ್ನು ಹರಿಕೃಷ್ಣ ಎಂದು ಕರೆಯಲಾಗುತ್ತದೆ. ಇಲ್ಲಿ ಕೇವಲ ಹೆಸರು ಮುಖ್ಯವಾಗುವುದಿಲ್ಲ. ಆತನ ನಡೆ, ಗುಣಧರ್ಮ ಮುಖ್ಯವಾಗುತ್ತದೆ. ಅಂತಿಮವಾಗಿ ನಾವೆಲ್ಲ ಮನುಷ್ಯರು. ಮನುಷ್ಯತ್ವದ ಮಹತ್ವ ಅರಿತುಕೊಂಡು ನಡೆದರೆ ಬಹುತೇಕ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು.

ಅಂತರ್ಗತವಾಗಿ ವ್ಯಕ್ತಿ, ಜಾತಿ, ಧರ್ಮದ ಮಧ್ಯೆ ಸೌಹಾರ್ದ, ಪರಸ್ಪರ ಅರ್ಥೈಸಿಕೊಳ್ಳುವಿಕೆ ಸಾಧ್ಯವಾದರೆ ಎಲ್ಲರೂ ಅವರ ಧರ್ಮ, ಜಾತಿಯ ಆಚರಣೆ ಇಟ್ಟುಕೊಂಡೇ ಪರಿಸ್ಪರ ಸಾಮರಸ್ಯ ಸಹಬಾಳ್ವೆ ನಡೆಸಬಹುದು ಎಂಬುದೇ ಶ್ರೀ ಎಂ ಅವರ ವಾಕ್ಯ.

# ಸ್ತ್ರೀ ಸಮೃದ್ಧಿಯ ಸಂಕೇತ



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಸ್ತ್ರೀ ಅಥವಾ ಮಹಿಳೆ ಪದ ಸಂಸ್ಕೃತದಿಂದ ಬಂದಿದೆ.ಕನ್ನಡದಲ್ಲಿ ಹೆಣ್ಣು ಎಂಬ ಪದ ಬಳಕೆಯಲ್ಲಿದೆ. ಇದು ನಾಗರಿಕ ಗೌರವದ ಪುರುಷ ಪದದ ಸಮಾನ ಪದವಾಗಿದೆ. ಆದಿಯಿಂದಲೂ ಸ್ತ್ರೀ ಸೃಷ್ಟಿಯ ಮೂಲವಾಗಿದ್ದಾಳೆ.ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಸ್ಥಾನಮಾನ ಗೌರವವಿದೆ.ಸ್ತ್ರೀ ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ,ಕರುಣೆ,ವಾತ್ಸಲ್ಯ,ಆರೈಕೆ ಮತ್ತು ಭೂಮಿ ತೂಕದ ತಾಳ್ಮೆಯುಳ್ಳ ಪ್ರಭಲ ಶಕ್ತಿ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪುರುಷ ಮಹಿಳೆಯರೆನ್ನದೇ ನಾಗರಿಕ ಪ್ರಪಂಚದಲ್ಲಿ ವಿದ್ಯೆಯೊಂದಿಗೆ ಸಮಕಾಲೀನ ಜ್ಞಾನಾರ್ಜನೆ ಪಡೆದರೆ ಸುಂದರ ಬದುಕು ರೂಪುಗೊಳ್ಳುತ್ತದೆ. ಎಲ್ಲ ಕ್ಷೇತ್ರಗಳಲ್ಲಿ ಹೆಣ್ಣು ಸಾಧನೆಗೈದು ತನ್ನ ಶಕ್ತಿ ಏನೆಂಬುದನ್ನು ಜಗತ್ತಿಗೆ ಅರುಹಿದ್ದಾಳೆ. ಹೆಣ್ಣು ತಾಯಿಯಾಗಿ,ಅತ್ತಿಗೆಯಾಗಿ,ತಂಗಿಯಾಗಿ,ಅಕ್ಕನಾಗಿ,ಹೆಂಡತಿಯಾಗಿ ,ನಾದಿನಿಯಾಗಿ ,ಗೆಳತಿಯಾಗಿ,ಪ್ರೇಮಿಯಾಗಿ ನಿರ್ವಹಿಸುವ ಪಾತ್ರ ಅದ್ಭುತ,ವರ್ಣನಾತೀತ.

ಸ್ತ್ರೀ ಈಗ ನಾಲ್ಕು ಗೋಡೆಗಳ ನಡುವೆ ಕಾಲ ಕಳೆಯುವ ಕಾಲವೀಗ ಕಣ್ಮರೆಯಾಗಿದೆ.ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಷ್ಟೇ ದೀಮಂತಿಕೆಯಿಂದ ಬದುಕಲು ಸಾಧ್ಯವೆಂದು ಹಲವಾರು ರೀತಿಯ ಸಾಧನೆಗಳನ್ನು ಮಾಡುವ ಮೂಲಕ ತೋರಿಸಿಕೊಟ್ಟಿದ್ದಾಳೆ.ಪ್ರತಿಭೆ,ಕಲೆ,ಸಾಹಿತ್ಯ,ಸಾಹಸ ಪ್ರವೃತ್ತಿಯಂತಹ ಸಾಧನೆಯಲ್ಲಿ ತೊಡಗಿ ವಿಶ್ವದ ಗೌರವಕ್ಕೆ ಪಾತ್ರಳಾಗಿದ್ದಾಳೆ.ತನ್ನ ಹಲವಾರು ಉತ್ತಮ ಗುಣಗಳಿಂದ ,ನಡತೆಗಳಿಂದ ಸರ್ವಸಂಪನ್ನಳೆನಿಸಿ ಪೂಜ್ಯನೀಯಳಾಗಿದ್ದಾಳೆ.

ವೇದ ಪುರಾಣದಲ್ಲಿ ಹೆಣ್ಣು ವೇದ ಕಾಲದಲ್ಲಿದ್ದ ಗಾರ್ಗಿ,ಮೈತ್ರೇಯಿಯವರ ಬೌದ್ಧಿಕ ಸಾಧನೆ ಸ್ಮರಣೀಯ ಪುರಾಣದ ಆದಿಶಕ್ತಿ ,ದುಷ್ಟಶಿಕ್ಷಕಿ,ಶಿಷ್ಟರಕ್ಷಕಿಯಾಗಿ ,ಸರ್ವಶಕ್ತಿಯಾಗಿ ಮೆರೆದಿರುವದನ್ನು ಕಾಣಬಹುದಾಗಿದೆ.ಹಿಂದೂ ಮಹಾಕಾವ್ಯಗಳಾದ ರಾಮಾಯಣ,ಮಹಾಭಾರತ ಕೃತಿಗಳ ರಚನೆಗೆ ಸ್ತ್ರೀಯೇ ಕಾರಣೀಭೂತಳು.ಹೀಗಾಗಿ ನಮ್ಮ ಹಿರಿಯರು "ಕಾರ್ಯೇಶು ದಾಸಿ ,ಸಲಹೇಶು ಮಂತ್ರಿ,ಭೋಜೇಷು ಮಾತಾ,ಶಯನೇಷು ರಂಭಾ,ನಾರೀ ಕ್ಷಮಯಾಧರಿತ್ರಿಎಂದಿದ್ದಾರೆ.ಮನು ತನ್ನ ಮನುಸ್ಮೃತಿಯಲ್ಲಿ " ಯತ್ರ ನಾರ್ಯಸ್ತು ಪೂಜ್ಯಂತೆ,ರಮಂತೆ ತತ್ರ ದೇವತಾಃ " ಎಂದಿದ್ದಾರೆ.

ಸಹಕಾರ ಶಕ್ತಿ

ಸ್ತ್ರೀಯರು ಬ್ರಹ್ಮವಾದಿನಿಯರಾಗಿ ,ಬ್ರಹ್ಮಸಭೆಗಳಲ್ಲಿ ಪುರುಷ ಸಮಾನರಾಗಿ ವಾದಮಾಡಬಲ್ಲವರಾಗಿದ್ದರು.ಅಪಾಲಾ, ಮೈತ್ರೇಯಿ,ಗಾರ್ಗಿ,ಉಭಯಭಾರತಿ,ಉನ್ನತ ವರ್ಗದ ,ಉಚ್ಚವರ್ಣದ ಋಷಿಪತ್ನಿಯರು ನಮ್ಮ ಪರಂಪರೆಯಲ್ಲಿ ದೇವತೆಗಳೇ ಆಗಿದ್ದಾರೆ.ಶಕ್ತಿಗೆ ಪಾರ್ವತಿ ,ಧನಕ್ಕೆ ಲಕ್ಷ್ಮಿ ,ವಿದ್ಯೆಗೆ ಸರಸ್ವತಿ ಅದರಂತೆಯೇ ನಮ್ಮ ದೇಶದ ನದಗಳಲ್ಲಿ ಒಂದನ್ನು ಬಿಟ್ಟು ಉಳಿದ ನದಿಗಳೆಲ್ಲ ಸ್ತ್ರೀ ಹೆಸರಿನ ನದಿಗಳೇ .ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೆಯೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ ಎಂಬ ಅಭಿಪ್ರಾಯ ಭಾರತೀಯ ಸಂಸ್ಕೃತಿಯಲ್ಲಿದೆ.

ಸಾಮಾಜಿಕತೆ,ಸ್ತ್ರೀ ಕನಸೂ ಹೌದು ,ವಾಸ್ತವವೂ ಹೌದು .ಈಕೆ ಭೂಮಿಯಾಗಿ,ಮುಗಿಲಾಗಿ ಮೇರುಪರ್ವತವಾಗಿ ಬೆಳೆದು ನಿಂತಿದ್ದಾಳೆ.ಇಡೀ ವಿಶ್ವವೇ ಆರೋಗ್ಯಕರ ಮನೋಭಾವ ಹೊಂದಲು ಸಹಕಾರ ಸ್ತ್ರೀಯಾಗಿದ್ದಾಳೆ.ಜಗತ್ತಿನ ಪ್ರತಿಯೊಬ್ಬ ಮಹಿಳೆ ಆಯಾ ಕುಟುಂಬದ ಬೆನ್ನೆಲುಬು.ಈಗ ಕಾಲ ಬದಲಾಗಿದೆ.ಕೂಡು ಕುಟುಂಬ ಪದ್ಧತಿ ಒಡೆದು ಸಣ್ಣ ಕುಟುಂಬ ಪದ್ಧತಿಯಾಗಿದೆ.ಪುರುಷರಿಗೆ ಸಮನಾಗಿ ಹೊರಗಡೆ ದುಡಿಯಲು ತಾನು ಶಕ್ತಳು ಮತ್ತು ತನ್ನ ಕಾರ್ಯನಿರ್ವಹಣೆಯಲ್ಲಿ ಪುರುಷರಿಗಿಂತ ಮೇಲು ಎಂದು ತೋರಿಸಿಕೊಟ್ಟಿದ್ದಾಳೆ.ಭಗವಂತನು ಕರುಣಿಸಿದ ಈಕೆಯ ಕೌಶಲ್ಯಗಳಿಗೆ ಮನ್ನಣೆ ಸಿಗಬೇಕು. ದೌರ್ಜನ್ಯಗಳು ಕಡಿಮೆಯಾಗಬೇಕು. ಆರ್ಥಿಕ ಸವಲತ್ತುಗಳು ,ಆರೋಗ್ಯ,ಸ್ವಚ್ಛತೆ, ನೈರ್ಮಲ್ಯ,ಪೌಷ್ಟಿಕ ಆಹಾರ,ಮಕ್ಕಳ ಪೋಷಣೆ,ಹದಿಹರೆಯದ ಮಕ್ಕಳ ಪಾಲನೆ,ಸ್ವ ಉದ್ಯೋಗ ಪ್ರೇರಣೆ,ಆತ್ಮವಿಶ್ವಾಸ ಬೆಳಸಿಕೊಳ್ಳುವಂತಹ ಶಕ್ತಿ,ಸಮಾಜದಲ್ಲಿ ಉತ್ತಮ ಪ್ರಜೆಯಾಗುವಲ್ಲಿ ನಾನಾ ವಿಚಾರಗಳ ಬಗ್ಗೆ ತಿಳುವಳಿಕೆ ಮೂಡಿಸುವ ಪ್ರಯತ್ನವಾಗಬೇಕಿದೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು,ಅಭಿವೃದ್ಧಿಗಳು,ಬೆಳವಣಿಗೆಗೆ ಸರಿಯಾಗಿ ತನ್ನನ್ನು ತಾನು ಹೊಂದಿಕೊಳ್ಳುವಲ್ಲಿ ಸ್ತ್ರೀಯ ಜಾಣ್ಮೆ ಅಡಗಿದೆ.ಇದನ್ನು ಅರಿತು ಉತ್ತಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಪ್ರತಿಯೊಬ್ಬ ಸ್ತ್ರೀಗೂ ಶಕ್ತಿ ಸಾಮರ್ಥ್ಯ ದೊರೆಯಲಿ.



## ಸ್ತ್ರೀ ನೀ ಪದಗಳಿಗೆ ನಿಲುಕದವಳು

ಅವಳೆಂದೂ ಬತ್ತದ ಪ್ರೀತಿಯ ಅನನ್ಯ ಕಡಲು
ಕರುಣೆ ಪ್ರೇಮಭಾವ ತುಂಬಿದ ಅಮೃತದ ಒಡಲು

ನೋವ ನುಂಗಿ ನಗುವಿನಲೇ ಜವಬ್ದಾರಿ ನಿಭಾಯಿಸುವ ಗುಣ
ಸಂಸ್ಕಾರ ಸಂಸ್ಕೃತಿಯೇ ಅವಳ ಸಿಂಗರಿಸುವ ಆಭರಣ

ಬೆಳಗುವಳು ಬೆಳಕಾಗುವಳು ಅವಳೇ ಮನೆಯ ದೀಪ
ಸ್ಫೂರ್ತಿಯವಳು ಚೈತನ್ಯದ ಚಿಲುಮೆಯಾಗುವಳು ಶಕ್ತಿ ರೂಪ

ಸಾಧಿಸುವ ಛಲದಾಕೆ ಬರೆಯುವಳು ಸಾಧನೆಯ ಹೊಸಬಾಷ್ಯ
ಎಲ್ಲರನೂ ಎಲ್ಲವನೂ ಅರಿತು ರೂಪಿಸುವಳು ನಾಳಿನ ಭವಿಷ್ಯ

ಸಾಟಿಯಾರಿಹರು ನಾರಿ ನಿನ್ನ ವ್ಯಕ್ತಿತ್ವ ಹಿರಿಮೆಯು
ಮನೆ ಮನೆಯಲಿ ಹೆಣ್ಣಿದ್ದರೆ ಶೃಂಗಾರ ಗರಿಮೆಯು

ಕತ್ತಲ ಕೋಣೆಯಲಿ ಕಂಬನಿ ಸುರಿಸಿದೆ ಅಂದು
ಆಗಸದೆತ್ತರ ಹಾರುವ ಕನಸು ನನಸಾಗಿಸಿದೆ ಇಂದು

ಪದಗಳ ಕೊರತೆಯು ಕಾಡುವುದು ನಿನ್ನ ಹೊಗಳಲು
ಸಾಧನೆಯ ಹಾದಿಯ ತುಂಬಾ ಚೆಲ್ಲಿರಲಿ ಯಶಸ್ಸಿನ ಹೂಗಳು

ಜಯಂತಿ ರೈ ಮಡಿಕೇರಿ



# ದ್ವೇಷಕ್ಕೆ ಬೆಂಕಿ ಹಚ್ಚಬೇಕು



| ಸ್ನೇಹಾ ಆನಂದ್

ಸ್ನೇಹ ಲೋಕ

ನಾನು ಭಾವನಾಂತರಂಗದಲ್ಲಿ ಒಂದು ಸಾಲು ಬರೆದಿದ್ದೆ, "ನಾವು ದ್ವೇಷಕ್ಕೆ ಬೆಂಕಿ ಹಚ್ಚಬೇಕು ಹೊರತು ಮನಸ್ಸಿಗಲ್ಲ " ಎನ್ನುವುದು!

ನಾವು ದ್ವೇಷದ ಸ್ವಭಾವವನ್ನು ಹೊಂದಿದಷ್ಟು ನಮ್ಮ ಮನಸ್ಸು ಸುಡುತ್ತದೆ, ಅದರಿಂದ ಆರೋಗ್ಯ ಹಾಳಾಗುವುದು ನಮ್ಮದೇ!

ಹೀಗಾಗಿ ದ್ವೇಷದ ಸ್ವಭಾವ ಬಿಡುವುದು ನಮ್ಮ ಒಳ್ಳೆಯದಕ್ಕೆ ಹೊರತು ಅನ್ಯರಿಗಾಗಿ ಅಲ್ಲ !

ನಮಗೆ ಒಳ್ಳೆಯದಾಗಲು ನಾವು ಬೇಕಾದಷ್ಟು ಪ್ರಯತ್ನ ಪಡುತ್ತೇವೆ, ಆರೋಗ್ಯದ ದೃಷ್ಟಿಯಿಂದ ವಾಯು ವಿಹಾರ , ವ್ಯಾಯಾಮ ಮಾಡುತ್ತೇವೆ, ಆದರೂ ನಮ್ಮ ಆರೋಗ್ಯ ಒಂದೊಂದು ಬಾರಿ ಸುಧಾರಿಸುವುದಿಲ್ಲ ಎಂದರೆ ಒಂದು ಕಾರಣ ನಾವೇ ನಮ್ಮ ಮನಸ್ಸಿಗೆ ಚಿತ್ರಹಿಂಸೆ ಕೊಡುತ್ತೇವೆ ಎಂದು ಅರ್ಥ!

ನಾವು ಎಲ್ಲಾ ರೀತಿಯ ಮಾನಸಿಕ ಒತ್ತಡ ಕಡಿಮೆ ಮಾಡಿಕೊಂಡರೂ ಎಲ್ಲೋ ಒಂದು ಕಡೆಗೆ ಭುಗಿಲೇಳುವ ದ್ವೇಷವನ್ನು ಸಾಕಿದ್ದೇವೆ ಎಂದು ಅರ್ಥ! ಅದನ್ನು ಬಿಟ್ಟರೂ




ನಮ್ಮ ಆರೋಗ್ಯ ಸುಧಾರಿಸಬಹುದು, ಏಕೆಂದರೆ ದ್ವೇಷ ಮನಸ್ಸನ್ನು ಸುಡುತ್ತದೆ, ಅದರಿಂದ ನಿದ್ದೆ ಗೆ ಕತ್ತರಿ ಬೀಳುತ್ತದೆ, ಹೀಗಾಗಿ ದ್ವೇಷ ನಮ್ಮನ್ನು ನಾವು ತಿವಿದು ಕೊಳ್ಳುವ ಚಾಕುವಿದ್ದಂತೆ! ಮನದಲ್ಲಿ ದ್ವೇಷ ಇಟ್ಟುಕೊಂಡರೆ ಯಾವಾಗಲೂ ವಿಷವನ್ನೇ ಕಾರಿದಂತೆ, ಅದು ನಮ್ಮ ಜೀವನಕ್ಕೆ ಹಾನಿ! ಎಷ್ಟೋ ಸಂಬಂಧಗಳಲ್ಲಿ ಇವುಗಳು ಕಾಣಸಿಗುತ್ತವೆ, ಅದರಲ್ಲೂ ಈ ದ್ವೇಷ ಅಕ್ಕ ತಂಗಿಯರಿಗಿಂತ ಅಣ್ಣ ತಮ್ಮಂದಿರಲ್ಲಿ ಜಾಸ್ತಿ! ತಂದೆ,ತಾಯಿಯರು ಒಟ್ಟುಗೂಡಿಸಿದ ಸುಂದರ ಹೂಗುಚ್ಛ ಬೇರೆ,ಬೇರೆಯಾಗಲು, ಈ ದ್ವೇಷ , ಸಿಟ್ಟು, ಮತ್ಸರ ಮುಖ್ಯವಾಗಿ ಕಾರಣವಾಗುತ್ತದೆ! ತಂದೆ ತಾಯಿಯರ ಹೂಗಳು ಬೇರೆಯ ಹೂಗಳ ಜೊತೆ ಸೇರಿದಾಗ ಬಾಲ್ಯದ ಹೂಗಳನ್ನು ದೂರ ಸರಿಸುತ್ತವೆ! ಅದರಿಂದ ಬೇರು ಸಮೇತ ಗಿಡ ಬಿದ್ದು ಬಿಡುತ್ತದೆ! ಹೂಗುಚ್ಛದಲ್ಲಿ ಒಂದು ಹೂವು ವಿಷದ್ದಾಗಿದ್ದರೆ ಸಾಕು ದ್ವೇಷದ ಬೆಂಕಿ ಅದನ್ನು ಹೇಳ ಹೆಸರಿಲ್ಲದಂತೆ ಸುಟ್ಟು ಬಿಡುತ್ತದೆ! ಅದೇ ರೀತಿ ಆತ್ಮೀಯತೆಯಲ್ಲಿ, ಗೆಳೆತನದಲ್ಲಿ ಕೂಡ ಇರುವ ಸಾಧ್ಯತೆ ಇರುತ್ತದೆ !

ಇಬ್ಬರು ಆತ್ಮೀಯರನ್ನು ದೂರ ಸರಿಸಲು ಒಂದು ದ್ವೇಷದ ಕಿಡಿ ಸಾಕು! ನಂತರ ಆ ಕಿಡಿ ಬೆಂಕಿಯಾಗಿ, ಎಲ್ಲಾ ಸಂಬಂಧಗಳನ್ನು ಸುಟ್ಟು ಬೂದಿಯಾಗಿಸಿ ಬಿಡುತ್ತದೆ!

ಹೀಗಾಗಿ ನಾವು ದ್ವೇಷಕ್ಕೆ ಬೆಂಕಿ ಹಚ್ಚಬೇಕು ಹೊರತು ಮನಸ್ಸಿಗಲ್ಲ!

ನಾವು ಗೀರಿದ ಕಡ್ಡಿ ದೇವರ ಮುಂದಿನ ನಂದಾ ದೀಪಕ್ಕೆ ಮಾತ್ರ ಸೀಮಿತವಾಗಿರಬೇಕು!



ಬಾಳ ಸಂತೆ ನಡೆಸುವವಳು
ಪ್ರತಿ ಮನೆಯ ಕಣ್ಣಿವಳು
ಮಕ್ಕಳಿಗೆ ಮಮತೆಯ ಮಡಿಲಿವಳು
ಪತಿಗೆ ಒಲವ ತೋರುವ ಮಡದಿ ಇವಳು
ಸಂಸಾರದ ಹಿತವ ಕಾಯುವ ಕೈ ಇವಳು

ಭೂಮಿ ತಾಯಷ್ಟು ತಾಳ್ಮೆ ಇರುವವಳು
ಮನೆಗಾಗಿ ಸರ್ವವನ್ನು ಸಮರ್ಪಿಸುವವಳು
ಕಷ್ಟ ಸುಖವೆರಡನ್ನು ಸಮನಾಗಿ ಸ್ವೀಕರಿಸುವಳು
ಯಾವ ಮಕ್ಕಳಿಗೂ ಬೇಧ ತೋರದವಳು

ಅಯ್ಯೋ ಹೆಣ್ಣೆ ಎಂದವರಿಂದ ಅಬ್ಬ ಹೆಣ್ಣೆ
ಎನಿಸಿಕೊಂಡವಳು
ಎಲ್ಲಾ ಕ್ಷೇತ್ರದಲ್ಲೂ ತನ್ನ ಚಾಪು ಮೂಡಿಸಿರುವಳು
ತೊಟ್ಟಿಲನು ತೂಗುವಳು ವಿಮಾನವನ್ನು
ಹಾರಿಸುವಳು
ವೃತ್ತಿ,ಪ್ರವೃತ್ತಿ ಎರಡನ್ನು ನಿಭಾಯಿಸುವಳು

ಆದಿ ಅಂತ್ಯ ಎರಡಕ್ಕೂ ಸೈ ಇವಳು
ತನ್ನವರ ರಕ್ಷಣೆಗೆ ಕಾಳಿಯಾಗುವಳು
ನಂಬಿದವರ ಕಾಯಲು ಕೋಟೆಯಾಗುವಳು
ಮನೆ ಬೆಳಗುವ ದೀಪವೇ ಹೆಣ್ಣಿವಳು

ಏನಿದ್ದರೂ ಇಲ್ಲದಿದ್ದರೂ ಬಾಳ ಸಂತೆಯ
ನಡೆಸುವಳು
ಹಸಿದವರಿಗೆ ಅನ್ನಪೂರ್ಣೇಯಾಗುವಳು
ಕಷ್ಟದಲ್ಲಿರುವರಿಗೆ ಧೈರ್ಯ ಲಕ್ಷ್ಮಿಯಾಗಿಹಳು
ಎಲ್ಲರ ಸರ್ವಸ್ವವೂ ಇವಳು.

ನಂದಿನಿ ವಿವೇಕ್. ಹೊಸದುರ್ಗ.



# ಶ್ರೀ ಶಕ್ತಿ ಪಾರಾಯಣವೆಂಬ ದಿವ್ಯ ಬಳಗ | ಒಂದು ಆತ್ಮೀಯ ದೈವೀಕ ಯಾತ್ರೆ

ಶ್ರೀ ಶಕ್ತಿ ಪಾರಾಯಣ ದಿವ್ಯ ಬಳಗವು ಭಕ್ತಿ, ಶ್ರದ್ಧೆ ಮತ್ತು ದೇವಿ ಕೃಪೆಯಿಂದ ಹುಟ್ಟಿದ ಒಂದು ಪವಿತ್ರ ಆಧ್ಯಾತ್ಮಿಕ ಕುಟುಂಬ. 2015ರ ಅಕ್ಟೋಬರ್ ತಿಂಗಳ, ದಸರಾ ಹಬ್ಬದ ಶುಭ ಸಂದರ್ಭದಲ್ಲಿ, ನಾನು ವೀಣಾ ಮತ್ತು ನನ್ನ ಸಹೋದರಿ ಶ್ರೀಮತಿ ರೂಪಾ, ಹಾಗೂ ನನ್ನ ಆಪ್ತ ಸ್ನೇಹಿತೆಯಾರಾದ ಶ್ರೀಮತಿ ಶೀಲಾ, ಶ್ರೀಮತಿ ಅನಿತಾ, ಶ್ರೀಮತಿ ಸುಜಾತರೊಂದಿಗೆ ಈ ಪವಿತ್ರ ಪಾರಾಯಣದ ಪ್ರಯಾಣವನ್ನು ಆರಂಭಿಸಿದೆವು. ಆರಂಭದಲ್ಲಿ ನಮ್ಮ ಬಳಗಕ್ಕೆ ಯಾವುದೇ ಹೆಸರು ಇರಲಿಲ್ಲ. ಕೇವಲ ದೇವರ ಮೇಲಿನ ಶ್ರದ್ಧೆ, ಭಕ್ತಿ ಮತ್ತು ಒಟ್ಟಾಗಿ ಪಾರಾಯಣ ಮಾಡುವ ಉತ್ಸಾಹವೇ ನಮ್ಮ ಶಕ್ತಿಯಾಗಿತ್ತು.

**ಪ್ರಾರಂಭದ ಹೆಜ್ಜೆಗಳು**

ಶ್ರೀಮತಿ ರೂಪಾ ಅವರು ನಮ್ಮ ಐದು–ಆರು ಮಂದಿಗೆ ಸಹಸ್ರನಾಮಗಳು ಹಾಗೂ ಕೆಲವು ಭಕ್ತಿಗೀತೆಗಳನ್ನು ಬೋಧಿಸಲು ಆರಂಭಿಸಿದರು. ಹೀಗೆ ಸ್ನೇಹಿತರ ಮನೆಗಳಲ್ಲಿ ಕ್ರಮವಾಗಿ ಪಾರಾಯಣ ಆರಂಭವಾಗಿ ಇಂದು ಮನೆಮನೆಗಳಲ್ಲಿ ದೇವಿಯ ನಾಮಸ್ಮರಣೆಗಳು, ಸಂಕೀರ್ತನೆಗಳು ಮೊಳಗುತ್ತಿವೆ.ಇದಕ್ಕೆ ಬಹು ಮುಖ್ಯವಾಗಿ ಜೊತೆಯಾಗಿ ನಮಗೆ ಹೆಗಲಾಗಿ ನಿಂತವರು ಶ್ರೀಮತಿ ಶ್ರೀ ಪ್ರಿಯ, ಶ್ರೀಮತಿ ಶೀಲಾ, ಶ್ರೀಮತಿ ಸುಧಾ, ಶ್ರೀಮತಿ ಧನುಜಾ, ಶ್ರೀಮತಿ ಶ್ರೀವಿದ್ಯಾ, ಶ್ರೀಮತಿ ಸರಸ್ವತಿ, ಶ್ರೀಮತಿ ಶೋಭಾ, ಶ್ರೀಮತಿ ಸಹನಾ, ಶ್ರೀಮತಿ ಆನಂದ ಲಕ್ಷ್ಮೀ, ಶ್ರೀಮತಿ ಜ್ಯೋತಿ, ಶ್ರೀಮತಿ ತೇಜೋವತಿ, ಶ್ರೀಮತಿ ಭಾರತಿ, ಶ್ರೀಮತಿ ಶ್ವೇತ ಹಾಗೂ ಶ್ರೀಮತಿ ಸುನೀತಾ ಒಂದೇ ಕುಟುಂಬವೆಂಬ ಭಾವದಲ್ಲಿ ಈ ದೈವಕಾರ್ಯಕ್ಕೆ ಕೈಜೋಡಿಸಿ ಸಂಘವು ಮುನ್ನಡೆಯಲು ಜೊತೆಯಾಗಿದ್ದಾರೆ.

**ದೈವಿಕ ಆಶೀರ್ವಾದದ ಕ್ಷಣ**

ಒಮ್ಮೆ ಶಿವರಾತ್ರಿ ಮಹಾಪರ್ವದಂದು ನಾವುಗಳು ದ್ವಾದಶ ಜ್ಯೋತಿರ್ಲಿಂಗ ಜ್ಯೋತಿರ್ಲಿಂಗ ಕ್ಷೇತ್ರವಾದ

ಓಂಕಾರ್ ಹಿಲ್ಸ್ ನಲ್ಲಿ ಪಾರಾಯಣ ಮಾಡಿದೆವು. ಆ ಕ್ಷೇತ್ರದ ಸ್ವಾಮಿಗಳಾದ ಶ್ರೀ ಶ್ರೀ ಶಿವಪುರಿನಂದ ಸ್ವಾಮೀಜಿಗಳು





ಮನಸಾರ ಮೆಚ್ಚಿ

ಸಂತೋಷಗೊಂಡು, ನಮ್ಮ ಬಳಗಕ್ಕೆ ಶ್ರೀ ಶಕ್ತಿ ಪಾರಾಯಣ ಎಂಬ ಪವಿತ್ರ ಹೆಸರನ್ನು ಪ್ರದಾನ ಮಾಡಿದರು.

**ಸೇವೆಯ ವ್ಯಾಪ್ತಿ**

ಕಳೆದ ನಾಲ್ಕು ವರ್ಷಗಳಿಂದ ನಾವು ವರ್ಷಕ್ಕೆ ಸುಮಾರು 150 ದಿನಗಳಷ್ಟು ಪಾರಾಯಣ ಸೇವೆಯಲ್ಲಿ ನಿರತರಾಗಿದ್ದೇವೆ. ಇತ್ತೀಚೆಗೆ ವಿಶ್ವ ಪ್ರಿಯ ಯು ಟ್ಯೂಬ್ ಚಾನಲ್ ನಲ್ಲಿ ನಮ್ಮ ಸಂದರ್ಶನ ಪ್ರಸಾರವಾದ ನಂತರ, ನಮ್ಮ ಸೇವೆ ಮತ್ತಷ್ಟು ವಿಸ್ತರಿಸಿ, ಇಂದು ನಮ್ಮ ಕರ್ನಾಟಕ ರಾಜ್ಯದಲ್ಲಿ ಮನೆ ಮಾತಾಗಿದ್ದೇವೆ. ತಿಂಗಳಿಗೆ 25 ದಿನಗಳೂ ನಾವು ಪಾರಾಯಣ ಕಾರ್ಯದಲ್ಲಿ ನಿರತರಾಗಿದ್ದೇವೆ.

ಈ ಸಂದರ್ಭದಲ್ಲಿ ಸಿದ್ದೇಶ್ವರಿ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಶ್ರೀಮತಿ ಮಂಜುಪ್ರಿಯಾ ಮ್ಯಾಡಮ್ ಅವರನ್ನು ಭೇಟಿಯಾದುದು ಕೂಡ ದೈವಯೋಗವೇ ಸರಿ.

ಶ್ರೀ ಶಕ್ತಿ ಪಾರಾಯಣ ದಿವ್ಯ ಬಳಗವು ಕೇವಲ ಒಂದು ಬಳಗವಲ್ಲ; ಇದು ಭಕ್ತಿಯ ಶಕ್ತಿ, ತ್ರಿದೇವಿಯರ ಕೃಪೆ ಮತ್ತು ನಿಷ್ಕಾಮ ಸೇವೆಯ ಪ್ರತೀಕ. ನಾವು ಮಾಡುವುದು ನಮ್ಮದೇ ಸೇವೆಯಲ್ಲ; ದೇವಿಯ ಅನುಗ್ರಹದಿಂದ ನಡೆಯುವ ದೈವ ಕಾರ್ಯ ಎಂಬ ಭಾವನೆಯೊಂದಿಗೆ ಯಾರೇ ಕರೆದರೂ ಜಾತಿ ಭೇದವಿಲ್ಲದೆ ನಮ್ಮ ಈ ಪಾರಾಯಣ ನಡೆಯುತ್ತಿದೆ. ಕರೆದವರ ಮನೆಯ ಅಗತ್ಯ ಬೇಡಿಕೆಗಳನ್ನು ಅರಿತು ಸಾಮೂಹಿಕ ಸಂಕಲ್ಪಮಾಡಿ ಅವರ ಇಷ್ಟಾರ್ಥಗಳು ನೆರವೇರಲೆಂದು ಪ್ರಾರ್ಥನೆ ಸಲ್ಲಿಸುತ್ತೇವೆ. ಸಂಕಲ್ಪಗಳು ನೆರವೇರಿ ಇಷ್ಟಾರ್ಥಗಳು ಸಿದ್ದಿಸಿದ ಅಸಂಖ್ಯಾತ ನಿದರ್ಶನಗಳೇ ನಮ್ಮೆಲ್ಲರ ಬಲವು.

## ತ್ರಿದೇವಿಯರ ಸಮನ್ವಯದ ದೈವಿಕ ರೂಪ

**ಶ್ರೀ ಲಕ್ಷ್ಮೀ ದೇವಿ**
**ಶಕ್ತಿ ಪಾರ್ವತಿ ದೇವಿ**
**ಪಾರಾಯಣ ಸರಸ್ವತಿ ದೇವಿ**
**ಆಧ್ಯಾತ್ಮಿಕ ಅಭ್ಯಾಸ**

ನಾವು ವಿಷ್ಣು, ಶಿವ, ಲಕ್ಷ್ಮೀ, ಲಲಿತಾ ಸಹಸ್ರನಾಮಗಳೊಂದಿಗೆ ಅನೇಕ ಶಕ್ತಿಯುತ ಸ್ತುತಿಗಳು ಮತ್ತು ಸ್ತೋತ್ರಗಳನ್ನು ಅಭ್ಯಾಸ ಮಾಡುತ್ತಾ ಬಂದೆವು. ಮೌಖಿಕ ಪ್ರಸಾರ ದ ಮೂಲಕ ಜನರು ನಮ್ಮನ್ನು ಆಹ್ವಾನಿಸಲು ಆರಂಭಿಸಿದರು. ನಾವು ಈ ಸೇವೆಯನ್ನು ನಿಷ್ಕಾಮ, ವಾಣಿಜ್ಯರಹಿತ ಪಾರಾಯಣ ಸೇವೆ ಎಂದು ಪರಿಗಣಿಸಿ ಸಂಪೂರ್ಣವಾಗಿ ದೇವರಿಗೆ ಅರ್ಪಿಸಿಕೊಂಡೆವು.

ಕ್ರಮೇಣ ಬಳಗವು ವಿಸ್ತರಿಸಿಕೊಂಡು, ಇಂದು 30ಕ್ಕೂ ಹೆಚ್ಚು ಸದಸ್ಯರಿರುವ ಒಂದು ದಿವ್ಯ ಕುಟುಂಬವಾಗಿದೆ.

ದೈವ ಕೃಪೆಯ ಅನುಭವ

ಯಾರು ನಮ್ಮನ್ನು ಭಕ್ತಿಯಿಂದ ಆಹ್ವಾನಿಸುತ್ತಾರೋ, ಅವರ ಮನೋವಾಂಛೆಗಳು ನೆರವೇರಿದವು ಎಂಬ ನಂಬಿಕೆ ಜನರಲ್ಲಿ ಮೂಡಿತು. ಹೀಗಾಗಿ ನಮ್ಮ ಸೇವೆ ನಗರದೆಲ್ಲೆಡೆ ಹರಡಿತು.

ನಾವು ಅನೇಕ ದೊಡ್ಡ ಮತ್ತು ಪ್ರಸಿದ್ಧ ದೇವಸ್ಥಾನಗಳಲ್ಲಿ ಪಾರಾಯಣ ಸೇವೆ ಸಲ್ಲಿಸಿದ್ದೇವೆ. ಜೊತೆಗೆ ಅನೇಕ ಗಣ್ಯರುಗಳಾದ ಶ್ರೀಯುತ ಎಂ ಪಿ ಮೋಹನ್, ಖ್ಯಾತ ಚಲನಚಿತ್ರ ನಟಿಯಾರಾದ ಶ್ರೀಮತಿ ಉಮಾಶ್ರೀ,ಶ್ರೀಮತಿ ತಾರ, ಖ್ಯಾತ ನಿರ್ದೇಶಕಿ ಶ್ರೀಮತಿ ರೂಪ ಅಯ್ಯರ್, ಉಡಯ್ಕುಮಾರ್ ಪುತ್ರಿ ರೇಣುಕಾ, ಶ್ರೀಮತಿ ಧನುಜಾ,ನಗರದ ಪ್ರಸಿದ್ಧ ವೈದ್ಯರಾದ ಶ್ರೀಯುತ ಶಿವರಾಜಯ್ಯ ಅವರ ಮನೆಗಳಲ್ಲಿ ನಿಯಮಿತವಾಗಿ ಪಾರಾಯಣ ಮಾಡುವ ಅವಕಾಶ ದೊರಕಿದೆ. ಅದಲ್ಲದೆ ಇನ್ನು ಇತರ ಪ್ರಸಿದ್ಧ ವೈದ್ಯರು, ಕೈಗಾರಿಕೋದ್ಯಮಿಗಳು, ವಕೀಲರು ಹಾಗೂ ದೈವೀಕ ಭಕ್ತರ ಮನೆಗಳಲ್ಲಿ ಪಾರಾಯಣ ಮಾಡುವ ಸೌಭಾಗ್ಯ ನಮಗೆ ದೊರಕಿತು.



**ಸಮಾಜಮುಖಿ ಕಾರ್ಯಗಳು**

ಹತ್ತುವರ್ಷಗಳಅಂತರದಲ್ಲಿನಾವುಪರಾಯಣದೊಂದಿಗೆ ಹಲವಾರು ಸಮಾಜಮುಖಿ ಕಾರ್ಯಗಳನ್ನು ನಾವು ಮಾಡುತ್ತಾ ಬಂದಿದ್ದೇವೆ.ಅವುಗಳಲ್ಲಿ ಮುಖ್ಯವಾದವು ಪ್ರತಿವರ್ಷ ಮಳೆ ಚಳಿಗಾಲದಲ್ಲಿ ನಗರದ ಪ್ರತಿಷ್ಠಿತ ಆಸ್ಪತ್ರೆಗಳಿಗೆ, ಅಸಹಾಯಕರಿಗೆ, ಪೌರ ಕಾರ್ಮಿಕರಿಗೆ ಅನಾಥಾಶ್ರಮಗಳಲ್ಲಿ ಅಗತ್ಯ ಪೂರಕ ಸಾಮಗ್ರಿಗಳು ಹಾಗು ಮೆಲೋದಿಕೆಗಳನ್ನು ಪೂರೈಸುತ್ತಾ ಬಂದಿದ್ದೇವೆ. ಇದಷ್ಟೇ ಅಲ್ಲದೇ ದಾನಗಳಲ್ಲಿ ಅತೀ ಮುಖ್ಯವಾದ ಅನ್ನದಾನವನ್ನು ನಮ್ಮ ಶಕ್ತಿ ಅನುಸಾರ ಮಾಡುತ್ತಾ ಬಂದಿದ್ದೇವೆ. ರಕ್ತದಾನ ಶಿಬರಗಳನ್ನು ಏರ್ಪಡಿಸುತ್ತಾ ನಮ್ಮ ಸಮಾಜಮುಖಿ ಕಾರ್ಯಗಳನ್ನು ವಿಸ್ತರಿಸುತ್ತಾ ಇಂದು ನಮ್ಮ ಗುಂಪಿನ ದಶಮಾನ ಮಹೋತ್ಸವ ಹೊಸ್ತಿಲಲ್ಲಿ ಬಂದು ನಿಂತಿದ್ದೇವೆ.

ದೇವಿಯ ಕೃಪೆ ಸದಾ ಎಲ್ಲರ ಮೇಲಿರಲಿ.

**ಶ್ರೀಶಕ್ತಿ ಪಾರಯಣ ವೃಂದ.**
**98802 12403**
**98801 10450.**

## ಅಸ್ಮಿತೆ




ಜೀವ ಭಿಕ್ಷೆಯ ಪ್ರಸಾದಿಸಿದ ಪ್ರಾಣಧಾತೆ
ಜಗಕೆ ಪರಿಚಯಿಸಿ ಸಲುಹಿದ ಅನ್ನದಾತೆ
ಮೊದಲ ಗುರುವಾಗಿ ತಿದ್ದಿದ ವಿದ್ಯಾದೇವತೆ
ಹೆಣ್ಣೆ ನೀನಿರದೆ ಈ ಬಾಳಿಗೆಲ್ಲಿಯ ಅಸ್ಮಿತೆ.

| ರಾಜು ಗಾರೆಮನೆ



## ಮಹಿಳೆ



ಮಹಿಳೆ ಇದ್ದರೆ ಮನೆಗೆ ಶೋಭೆ
ಅವಳ ಮೇಲೆ ಕೂರಿಸದಿರಿ ಗೂಬೆ
ಸಂಸಾರಕೆ ತರುವಳು ಚಂದ್ರಪ್ರಭೆ
ಅವಳಿಲ್ಲದಿದ್ದರೆ ಆವರಿಸುವುದು ಕ್ಷೋಭೆ

| ಚೇತನ ಭಾರ್ಗವ



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,